ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 23 | ಜೂನ್ 1-7, 2020 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

CITU 1970-2020

Continuing the legacy of 100 years of struggles and sacrifices

ಸಿಐಟಿಯುಗೆ 50 ವರ್ಷ



ಕಾರ್ಮಿಕ ಕಾನೂನುಗಳ ಮೇಲೆ ದಾಳಿ

ಎಲ್‌ಡಿಎಫ್ ಸರ್ಕಾರದ 4 ವರ್ಷ ಪರ್ಯಾಯ ಜನಪರ ಮಾದರಿ

ഹരിതകേരളം

ആർദ്രം

ലൈഫ്

പൊതുവിദ്യാഭ്യാസ സംരക്ഷണ യജ്ഞം



ಲಾಕ್‌ಡೌನ್ ಮತ್ತು ಮರಳಿ 'ಮಣ್ಣಿಗೆ'



ಭಾಗ್ಯಜ್ಯೋತಿ ಕುಟೀರ ಜ್ಯೋತಿಗೂ ಕುತ್ತು!

ಮೋದಿ ಸರಕಾರದ ಮುಂದೆ 11 ಬೇಡಿಕೆಗಳು, ಗಂಭೀರವಾಗಿ ಪರಿಶೀಲಿಸಲು 22 ಸಮಾನ ಮನಸ್ಕ ರಾಜಕೀಯ ಪಕ್ಷಗಳ ಸಭೆಯ ಆಗ್ರಹ

ಮೇ 22 ರಂದು 22 ಸಮಾನ ಮನಸ್ಕ ರಾಜಕೀಯ ಪಕ್ಷಗಳ ಮುಖಂಡರು ಒಂದು ವಿಡಿಯೋ ಸಭೆಯಲ್ಲಿ ಕೊವಿಡೊ ಮಹಾಮಾರಿಯಿಂದಾಗಿ ದೇಶದಲ್ಲಿ ಎದ್ದು ಬಂದಿರುವ ಅಸಾಧಾರಣ ಪರಿಸ್ಥಿತಿಯ ಬಗ್ಗೆ ವಿಚಾರ ವಿನಿಮಯ ನಡೆಸಿ ಒಂದು ನಿರ್ಣಯವನ್ನು ಅಂಗೀಕರಿಸಿದ್ದಾರೆ. ಇದರಲ್ಲಿ ಪ್ರಸಕ್ತ ಪರಿಸ್ಥಿತಿಯನ್ನು ವಿಮರ್ಶಿಸುತ್ತ 11 ಬೇಡಿಕೆಗಳನ್ನು ಮೋದಿ ಸರಕಾರದ ಮುಂದೆ ಇಡಲಾಗಿದೆ. ಈ ಪಕ್ಷಗಳು ಭಾರತದ 50 ಶೇಕಡಾಕ್ಕಿಂತಲೂ ಹೆಚ್ಚು ಜನಗಳನ್ನು ಪ್ರತಿನಿಧಿಸುತ್ತಿದ್ದು, ಕೇಂದ್ರ ಸರಕಾರ ಇವರ ವಿಚಾರಗಳಿಗೆ ಕಿವಿಗೊಟ್ಟು ಇವು ಮುಂದಿಟ್ಟಿರುವ ಬೇಡಿಕೆಗಳನ್ನು ಪರಿಶೀಲಿಸಬೇಕೆಂದು ಮನವಿ ಮಾಡಿಕೊಂಡಿವೆ.



ಅರ್ಥವ್ಯವಸ್ಥೆ ಕುಸಿದಿದೆ. ಜೀವನಾಧಾರಗಳು ಧ್ವಂಸಗೊಂಡಿವೆ. ಬದುಕುಗಳು ಕಳೆದು ಹೋಗಿವೆ ಎಂದು ದುಃಖ ವ್ಯಕ್ತಪಡಿಸಿರುವ ನಿರ್ಣಯ, ಈ ಪರಿಸ್ಥಿತಿಯಲ್ಲಿ ಅಸಾಧಾರಣ ಧೈರ್ಯ ಮತ್ತು ಸಮರ್ಪಣಾ ಭಾವವನ್ನು ತೋರಿಸಿರುವ ಎಲ್ಲ ಸಾರ್ವಜನಿಕ ಆರೋಗ್ಯ ಸಿಬ್ಬಂದಿಗಳ, ನಿರ್ದಿಷ್ಟವಾಗಿ, ಡಾಕ್ಟರುಗಳು, ನರ್ಸ್‌ಗಳು, ಅರೆ ವೈದ್ಯಕೀಯ ಸಿಬ್ಬಂದಿ, ಜತೆಗೆ ಪೋಲೀಸರು, ಭದ್ರತಾಪಡೆಗಳ ಸಿಬ್ಬಂದಿ, ಸಫಾಯಿ ಕರ್ಮಚಾರಿಗಳು ಮತ್ತು ದೇಶಾದ್ಯಂತ ಈ ಕಠಿಣ ಸವಾಲೊಡ್ಡಿರುವ ಪರಿಸ್ಥಿತಿಗಳಲ್ಲಿ ನೀರು, ವಿದ್ಯುತ್ ಪೂರೈಕೆ ಮುಂತಾದ ಅಗತ್ಯ ಸೇವೆಗಳನ್ನು ನಿರ್ವಹಿಸುತ್ತಿರುವವರ ವೀರೋಚಿತ ಪ್ರಯತ್ನಗಳ ಬಗ್ಗೆ ಈ 22 ಪಕ್ಷಗಳ ಪ್ರಶಂಸೆಯನ್ನು ವ್ಯಕ್ತಗೊಳಿಸಿದೆ. ಇವರೆಲ್ಲರೂ ತಮ್ಮ ಜೀವಗಳಿಗಿರುವ ಗಂಭೀರ ಅಪಾಯವನ್ನು ಲೆಕ್ಕಿಸದೆ ತಮ್ಮ ಕರ್ತವ್ಯಕ್ಕೆ ಸಮರ್ಪಿಸಿಕೊಂಡಿರುವುದಕ್ಕೆ ನಾಔೂ ತಲೆಬಾಗುತ್ತೇವೆ ಎಂದು ಈ ರಾಜಕೀಯ ಪಕ್ಷಗಳು ಹೇಳಿವೆ.

ಈ ಬಿಕ್ಕಟ್ಟಿನ ಪರಿಮಾಣದ ಬಗ್ಗೆ ಪೂರ್ಣವಾದ ಅರಿವಿನೊಂದಿಗೆ, ಈ ಸಮಾನ ಮನಸ್ಕ ಪಕ್ಷಗಳು, ಎಂದಿನಂತೆ, ಕೇಂದ್ರ ಸರಕಾರಕ್ಕೆ ಸಂಪೂರ್ಣ ಸಹಕಾರವನ್ನು ಕೊಡುತ್ತಿವೆ. ಆದರೆ ಕೇಂದ್ರ ಸರಕಾರ ತನ್ನ ಜವಾಬ್ದಾರಿಗಳನ್ನು ಸಮಯಕ್ಕೆ ಸರಿಯಾಗಿ, ಪರಿಣಾಮಕಾರಿಯಾಗಿ ಮತ್ತು ಸಂವೇದನಾಪೂರ್ಣವಾದ ರೀತಿಯಲ್ಲಿ ನಿರ್ವಹಿಸುವಲ್ಲಿ ಸೋತಿದೆ ಎಂಬುದನ್ನು ಬೇಸರದಿಂದ ಹೇಳಬೇಕಾಗಿದೆ. ಭವ್ಯ ಪ್ರಕಟಣೆಗಳನ್ನು ಮಾಡಲಾಗಿದೆ, ಆದರೆ ಅವು ಜನಗಳ ಸಂಕಟಗಳನ್ನು ನಿವಾರಿಸುವಲ್ಲಿ, ಮತ್ತು ರೈತರು ಮತ್ತು ಕೃಷಿ ಕೂಲಿಕಾರರು, ವಲಸೆ ಮತ್ತು ಇತರ ಕಾರ್ಮಿಕರು, ವ್ಯಾಪಾರ, ವಾಣಿಜ್ಯ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಮತ್ತು ಕೈಗಾರಿಕೆಗಳನ್ನು ಬಾಧಿಸುತ್ತಿರುವ ಆತಂಕಗಳನ್ನು ಪರಿಶೀಲಿಸಲು ಅರ್ಥಪೂರ್ಣವಾದ ಏನನ್ನೂ ಮಾಡಿಲ್ಲ. ನಿಜ ಹೇಳಬೇಕೆಂದರೆ, ಕೇಂದ್ರ ಸರಕಾರ ನಾಚಿಕೆಯಿಲ್ಲದೆ ರಾಜ್ಯ ಸರಕಾರಗಳಿಗೆ ಇರುವ ಅಧಿಕಾರಗಳನ್ನು ಕಸಿದುಕೊಂಡಿದೆ, ಆ ಮೂಲಕ ಸಂವಿಧಾನಿಕ ಗ್ಯಾರಂಟಿ ಇರುವ ಒಕ್ಕೂಟ ಪ್ರಜಾಪ್ರಭುತ್ವವನ್ನು ಶಿಥಿಲಗೊಳಿಸಿದೆ.

ಇದೀಗ ಕೇಂದ್ರದಲ್ಲಿನ ಸರಕಾರ ಪ್ರದರ್ಶನಕೋರತನದಲ್ಲಿ ತೊಡಗುವ ಅಥವ ತಾನೇ ಮೇಲು ಎಂದು ತೋರಿಸಿಕೊಳ್ಳುವ ಸಮಯವಲ್ಲ. ಇದು ಅಗಾಧ ಪ್ರಮಾಣದ ಸಾಮೂಹಿಕ ಪ್ರಯತ್ನಗಳು ಬೇಕಾಗಿರುವ ಸಮಯ. ಭಾರತದ ಜನಗಳಿಗೆ ಬೇಕಾಗಿರುವುದು ಇದು, ಮತ್ತು ಅವರು ಕೇಳುತ್ತಿರುವುದು ಇದನ್ನೇ. ಭಾರತ ಸರಕಾರ ಕೈಚಾಚಿ ಎಲ್ಲ ರಾಜಕೀಯ ಪಕ್ಷಗಳೊಂದಿಗೆ ವ್ಯವಸ್ಥಿತವಾಗಿ ಒಂದು ಸಂವಾದದಲ್ಲಿ ತೊಡಗಬೇಕು, ನಮ್ಮ ಸಲಹೆ–ಸೂಚನೆಗಳಿಗೆ ಗಂಭೀರವಾಗಿ ಕಿವಿಗೊಡಬೇಕು, ಸ್ಥಾಯೀ ಸಮಿತಿಗಳು ಮುಂತಾದ ಸಂಸದೀಯ ಸಮಿತಿಗಳನ್ನು ಸಕ್ರಿಯಗೊಳಿಸಬೇಕು ಹಾಗೂ ರಾಜ್ಯಗಳಿಗ ಹಣಕಾಸುಗಳ ಮೂಲಕವೂ ಮತ್ತು ಇತರ ರೀತಿಗಳಲ್ಲೂ ನ್ಯಾಯರೀತಿಯಲ್ಲಿ ನೆರವಾಗಬೇಕು.

ಈ ಹಿನ್ನೆಲೆಯಲ್ಲಿ ಸರಕಾರ ಈ ರಾಜಕೀಯ ಪಕ್ಷಗಳ ಈ ಕೆಳಗಿನ ಬೇಡಿಕೆಗಳಿಗೆ ಕಿವಿಗೊಡಬೇಕು, ಅವನ್ನು ಪರಿಶೀಲಿಸಬೇಕು ಎಂದು ಇವು ಮನವಿ ಮಾಡಿಕೊಂಡಿವೆ:

1. ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ ಆರು ತಿಂಗಳ ವರೆಗೆ ತಿಂಗಳಿಗೆ ರೂ.7500 ನೇರ ನಗದು ವರ್ಗಾವಣೆ ಮಾಡಬೇಕು. ತಕ್ಷಣವೇ ರೂ.10,000 ಕೊಡಬೇಕು, ಬಾಕಿ ಹಣವನ್ನು ಉಳಿದ ಐದು ತಿಂಗಳುಗಳಲ್ಲಿ ಸಮನಾಗಿ ಕೊಡಬೇಕು.
2. ತಿಂಗಳಿಗೆ 10 ಕೆ.ಜಿ. ಆಹಾರಧಾನ್ಯಗಳನ್ನು ಅಗತ್ಯವಿರುವ ಎಲ್ಲ ವ್ಯಕ್ತಿಗಳಿಗೆ ಮುಂದಿನ ಆರು ತಿಂಗಳು ಉಚಿತವಾಗಿ ಕೊಡಬೇಕು. ಮನರೇಗದ ಅಡಿಯಲ್ಲಿ ಕೆಲಸದ ದಿನಗಳನ್ನು 200 ದಿನಗಳಿಗೆ ಏರಿಸಬೇಕು ಮತ್ತು ಅಗತ್ಯ ಬಜೆಟ್ ಬೆಂಬಲವನ್ನು ಒದಗಿಸಬೇಕು.
3. ಎಲ್ಲ ವಲಸೆ ಕಾರ್ಮಿಕರಿಗೆ ತಮ್ಮ ಊರುಗಳನ್ನು ತಲುಪಲು ಉಚಿತ ಸಾರಿಗೆ ವ್ಯವಸ್ಥೆ. ವಿದೇಶಗಳಿಂದ ಬರಲಾಗದೆ ಸಿಲುಕಿಕೊಂಡಿರುವ ಎಲ್ಲ ಭಾರತೀಯ ವಿದ್ಯಾರ್ಥಿಗಳು ಮತ್ತು ನಾಗರಿಕರನ್ನು ಕಾಪಾಡಲು ಕೂಡ ತಕ್ಷಣವೇ ಮತ್ತು ವಿಶ್ವಾಸಾರ್ಹ ವ್ಯವಸ್ಥೆಗಳನ್ನು ಮಾಢಬೇಕು.
4. ಕೊವಿಡ್–19 ಸೋಂಕುಗಳ ಬಗ್ಗೆ ಮತ್ತು ತಪಾಸಣೆ, ಮೂಲರಚನೆ ಹಾಗೂ ಹರಡಿಕೆ ತಡೆಗಟ್ಟುವ ಕುರಿತಂತಹ ಎಲ್ಲ ಗುರಿಗಳ ಬಗ್ಗೆ ಕರಾರುವಾಕ್ಕಾದ ಮತ್ತು ಪ್ರಸ್ತುತವಾದಂತಹ ಎಲ್ಲ ಮಾಹಿತಿಗಳನ್ನೂ ಒದಗಿಸಬೇಕು.
5. ಎಲ್ಲ ಏಕಪಕ್ಷೀಯ ನಿರ್ಧಾರಗಳನ್ನು, ನಿರ್ದಿಷ್ಟವಾಗಿ ಕಾರ್ಮಿಕ ಕಾನೂನುಗಳ ರದ್ಧತಿಯ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು.
6. ತಕ್ಷಣವೇ ಹಿಂಗಾರು ಬೆಳೆಗಳನ್ನು ಮತ್ತು ಸಣ್ಣ ಅರಣ್ಯ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸಬೇಕು ಮತ್ತು ಅವು ಮಾರುಕಟ್ಟೆಯನ್ನು ತಲುಪಲು ನೆರವು ಒದಗಿಸಬೇಕು. ಮುಂಗಾರು ಬೆಳೆಗೆ ಸಿದ್ಧರಾಗುತ್ತಿರುವ ರೈತರಿಗೆ ಬೀಜಗಳು, ರಸಗೊಬ್ಬರ ಮತ್ತಿತರ ಲಾಗುವಾಡುಗಳನ್ನು ಕೂಡ ಒದಗಿಸಬೇಕು.
7. ಮಹಾಮಾರಿಯನ್ನು ಎದುರಿಸುವ ಸಮರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ಗಮನಾರ್ಹ ಪ್ರಮಾಣದಲ್ಲಿ ನಿಧಿಗಳನ್ನು ಬಿಡುಗಡೆ ಮಾಡಬೇಕು.
8. ಲಾಕ್‌ಡೌನಿನಿಂದ ಹೊರಬರುವ ಕೇಂದ್ರ ಸರಕಾರದ ಕಾರ್ಯತಂತ್ರ ಏನಾದರೂ ಇದ್ದರೆ, ಅದನ್ನು ಸ್ಪಷ್ಟ ಪದಗಳಲ್ಲಿ ತಿಳಿಯಪಡಿಸಬೇಕು.
9. ತಕ್ಷಣವೇ ಸಂಸದೀಯ ಕಾರ್ಯನಿರ್ವಹಣೆ ಮತ್ತು ಮೇಲುಸ್ತುವಾರಿಯನ್ನು ಮರುಸ್ಥಾಪಿಸಬೇಕು.
10. ಪ್ರಚಾರದ ಬದಲು ಪುನಶ್ಚೇತನ ಮತ್ತು ಬಡತನ ನಿವಾರಣೆಯ ಮೇಲೆ ಗಮನ ಕೇಂದ್ರೀಕರಿಸಿರುವ ಒಂದು ಸ್ಪಷ್ಟ ಹಾಗೂ ಅರ್ಥಪೂರ್ಣ ಆರ್ಥಿಕ ಕಾರ್ಯತಂತ್ರವನ್ನು ಪ್ರಸ್ತುತಪಡಿಸಬೇಕು. ರೂ.20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್, ಮತ್ತು ಅದರಲ್ಲಿ ಅಡಕವಾಗಿರುವಂತದ್ದು ಭಾರತದ ಜನತೆಯನ್ನು ದಾರಿ ತಪ್ಪಿಸುತ್ತಿವೆ. ಸರಕಾರ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಉತ್ತೇಜಿಸಲು ಒಂದು ನಿಜವಾದ ಹಣಕಾಸು ಉತ್ತೇಜನೆಯಾಗಬಲ್ಲ ಒಂದು ಪರಿಷ್ಕೃತ ಹಾಗೂ ಸಮಗ್ರ ಪ್ಯಾಕೇಜನ್ನು ಪ್ರಸ್ತುತ ಪಡಿಸಬೇಕು.
11. ಅಂತರ್‍ರಾಷ್ಟ್ರೀಯ/ದೇಶದೊಳಗಣ ವಿಮಾನ ಹಾರಾಟಗಳಿಗೆ ಆಯಾಯ ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಅವಕಾಶ ನೀಡುವಾಗ ರಾಜ್ಯ ಸರಕಾರಗಳೊಡನೆ ಸಮಾಲೋಚನೆ ನಡೆಸಬೇಕು.

ಭಾರತದಲ್ಲಿ ಕಾರ್ಮಿಕ ಕಾನೂನುಗಳ 'ಸುಧಾರಣೆ'ಗಳ ಬಗ್ಗೆ ಐಎಲ್‌ಒ ಆತಂಕ ರಾಜ್ಯಗಳಿಗೆ ಸ್ಪಷ್ಟ ಸಂದೇಶ ನೀಡುವಂತೆ ಪ್ರಧಾನ ಮಂತ್ರಿಗಳಿಗೆ ಆಗ್ರಹ

ಅಂತರ್‍ರಾಷ್ಟ್ರೀಯ ಶ್ರಮ ಸಂಘಟನೆ (ಐ.ಎಲ್.ಒ.) ಹತ್ತು ಭಾರತೀಯ ಕಾರ್ಮಿಕ ಸಂಘಟನೆಗಳು ದೇಶದಲ್ಲಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸುತ್ತಿರುವ ಬಗ್ಗೆ ಎದ್ದಿರುವ ಆತಂಕಗಳ ಬಗ್ಗೆ ಮೇ 14ರ ಪತ್ರವನ್ನು ನೋಡಿದ ನಂತರ ಅದನ್ನು ಗಂಭೀರವಾಗಿ ತೆಗೆದುಕೊಂಡು ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳಿಗೆ ಈ ಕುರಿತಂತೆ ಮನವಿ ಮಾಡಿಕೊಂಡಿದೆ ಎಂದು ವರದಿಯಾಗಿದೆ.

ಭಾರತದ ಅಂತರ್‍ರಾಷ್ಟ್ರೀಯ ಬದ್ಧತೆಗಳನ್ನು ಎತ್ತಿ ಹಿಡಿಯುವಂತೆ ಮತ್ತು ಪರಿಣಾಮಕಾರಿ ಸಾಮಾಜಿಕ ಸಂವಾದದಲ್ಲಿ ತೊಡಗಲು ಪ್ರೋತ್ಸಾಹಿಸುವಂತೆ ಕೇಂದ್ರ ಮತ್ತು ರಾಜ್ಯಸರಕಾರಗಳಿಗೆ ಸ್ಪಷ್ಟ ಸಂದೇಶವನ್ನು ನೀಡಬೇಕು ಎಂದು ಐ.ಎಲ್.ಒ.ಮಹಾನಿರ್ದೇಶಕರು ಪ್ರಧಾನ ಮಂತ್ರಿಗಳನ್ನು ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ ಎಂದು ಐ.ಎಲ್.ಓ. ದ ಸಂಜಿ ಕಟ್ಟಿಕೊಳ್ಳುವ ಸ್ವಾತಂತ್ರ್ಯ ಶಾಖೆಯ ಮುಖ್ಯಸ್ಥರು ಭಾರತದ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಪತ್ರಕ್ಕೆ ಸ್ಪಂದಿಸುತ್ತ ಬರೆದಿದ್ದಾರೆ.

ಈ ಹತ್ತು ಭಾರತೀಯ ಕಾರ್ಮಿಕ ಸಂಘಟನೆಗಳು ಮೇ 25 ರಂದು ಐ.ಎಲ್.ಒ. ಗೆ ಮತ್ತೊಂದು ಪತ್ರವನ್ನು ಬರೆದು ಭಾರತ ಸರಕಾರ ದೇಶದಲ್ಲಿರುವ ಹೆಚ್ಚಿನ ವಿಧಾಯಕ ಕಾನೂನುಗಳನ್ನು ನಿರರ್ಥಕಗೊಳಿಸುವ ಕಾರ್ಮಿಕ–ವಿರೋಧಿ ಪ್ರತಿಗಾಮಿ ಕಸರತ್ತು ನಡೆಸುತ್ತಿದೆ ಎಂಬುದನ್ನು ಐ.ಎಲ್.ಒ. ಗಮನಕಕ್ಕೆ ತಂದಿವೆ, ಜತೆಗೆ ಗುಜರಾತ್, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಹರಿಯಾಣ, ರಾಜಸ್ತಾನ, ಝಾರ್ಖಂಡ, ಪಂಜಾಬ್, ಒಡಿಶಾ, ಮಹಾರಾಷ್ಟ್ರ, ಅಸ್ಸಾಂ, ಬಿಹಾರ ಮತ್ತು ಕರ್ನಾಟಕ ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ಕೈಗೊಳ್ಳುತ್ತಿರುವ ಕ್ರಮಗಳನ್ನು ಪಟ್ಟಿ ಮಾಡಿವೆ.


ಕೇಂದ್ರ ಸರಕಾರ ಎಪ್ರಿಲ್ 3 ರಿಂದ 10ರ ನಡುವೆ ಉದ್ಯಮಿಗಳ ಸಂಘಗಳ ನಾಲ್ಕು ಗುಂಪುಗಳನ್ನು ಭೇಟಿ ಮಾಡಿದ್ದು, ಅವರು ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ತಡೆಗಟ್ಟಲು ಹೇಳಿದ್ದಾರೆ, ಮತ್ತು ಕೇಂದ್ರ ಸರಕಾರ ಒತ್ತಾಯ ಮಾಡಿದ್ದರಿಂದ ರಾಜ್ಯ ಸರಕಾರಗಳು ಈ ಕ್ರಮಗಳನ್ನು ಕೈಗೊಂಡಿವೆ ಎಂದೂ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐ.ಎಲ್.ಒ. ಗಮನಕ್ಕೆ ತಂದಿವೆ.

ಲಾಕ್‌ಡೌನ್ ಸನ್ನಿವೇಶದಲ್ಲಿ ಕಾರ್ಮಿಕರು ಯಾವುದೇ ಪ್ರತಿಭಟನಾ ಕಾರ್ಯಾಚರಣೆ ನಡೆಸಲು ಸಾಧ್ಯವಾಗುವುದಿಲ್ಲ ಎಂಬುದರ ಪ್ರಯೋಜನವನ್ನು ಪಡೆದು ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಶಾಮೀಲಿನೊಂದಿಗೆ ಇಂತಹ ಕ್ರಮಗಳನ್ನು ಕೈಗೊಳ್ಳುತ್ತಿವೆ, ಇವು ಐ.ಎಲ್.ಒ.ದ ಫಿಲಡೆಲ್ಫಿಯಾ ಘೋಷಣೆಯ ಉಲ್ಲಂಘನೆಯಾಗಿವೆ ಎಂಬುದನ್ನು ತಮ್ಮ ಪತ್ರದಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೆನಪಿಸಿವೆ.

ಅಂತರ–ರಾಜ್ಯ ವಲಸೆ ಕಾರ್ಮಿಕರ ರಕ್ಷಣೆಯ ಕಾಯ್ದೆಯಿದ್ದರೂ ಕೂಡ ಲಾಕ್‌ಡೌನಿನಿಂದಾಗಿ ಉಂಟಾದ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಕೇಂದ್ರ ಸರಕಾರದ ನಿಷ್ಕ್ರಿಯತೆಯನ್ನೂ ಈ ಪತ್ರ ಐ.ಎಲ್.ಒ. ಗಮನಕ್ಕೆ ತಂದಿದೆ.

ಲಾಕ್‌ಡೌನ್ ಮರೆಯಲ್ಲಿ ಕಾರ್ಮಿಕರು ಮತ್ತು ರೈತರ ಮೇಲೆ ದಾಳಿಗಳಿಗೆ ಪ್ರತಿರೋಧ ಆರಂಭ: ಮೋದಿ ಸರಕಾರ ಕೊರೊನ ವೈರಸ್ ವಿರುದ್ಧ ಸಮರದಲ್ಲಿ ಹಾಕಿದ ಲಾಕ್‌ಡೌನನ್ನು ದುಡಿಯುವ ಜನಗಳ ಮೇಲೆ ದಾಳಿ ಮಾಡುವ ಒಂದು ಅವಕಾಶವಾಗಿ ಬಳಸಲು ಪ್ರಯತ್ನಿಸುತ್ತಿರುವುದರ ವಿರುದ್ಧ ರೈತರು ಮತ್ತು ಕಾರ್ಮಿಕರ ಪ್ರತಿರೋಧ ಆರಂಭವಾಗಿದೆ. ಮೇ 22ರಂದು 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ದೇಶಾದ್ಯಂತ ಪ್ರತಿಭಟನಾ ದಿನಾಚರಣೆ ನಡೆದಿದೆ. ಇದರ ಭಾಗವಾಗಿ ಈ ಸಂಘಟನೆಗಳು ಮುಖಂಡರು ಒಂದು ಮನವಿಯನ್ನು ಪ್ರಧಾನ ಮಂತ್ರಿಗಳಿಗೆ ಇ–ಮೇಲ್ ಮೂಲಕ ಕಳಿಸಿದ್ದಾರೆ. ದಿಲ್ಲಿಯಲ್ಲಿ ಈ ಸಂಘಟನೆಗಳ ಮುಖಂಡರು ಉಪವಾಸ ಮುಷ್ಕರಕ್ಕೆ ಕುಳಿತಾಗ ಅವರನ್ನು ಬಂಧಿಸಲಾಯಿತು.
ಮೇ 27ರಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ಕರೆಯಂತೆ ದೇಶಾದ್ಯಂತ ರೈತರು ಬಹು ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆಗಳನ್ನು ನಡೆಸಿದರು. ಎಐಕೆಎಸ್‌ಸಿಸಿ ಮುಖಂಡರು ಕೂಡ ಒಂದು ಮನವಿಯನ್ನು ಪ್ರಧಾನ ಮಂತ್ರಿಗಳಿಗೆ ಕಳಿಸಿದ್ದಾರೆ.





ಸಂಪಾದಕೀಯ

ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವ ಹುನ್ನಾರ!

ಎಪಿಎಂಸಿ ಕಾಯ್ದೆಯನ್ನು ಖಾಸಗೀಕರಣ ಮಾಡಲು ಹೆಜ್ಜೆ ಇಟ್ಟ ಬಳಿಕ ಈಗ ವಿದ್ಯುತ್ ಕಾಯ್ದೆಗೆ ತಿದ್ದುಪಡಿ ಮಾಡಲು ನಮೋ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲು ಮುಂದಾಗಿದೆ ಎಂಬ ಆಘಾತಕಾರಿ ಮಾಹಿತಿ ವರದಿಯಾಗಿದೆ. ರೈತರ, ಎಪಿಎಂಸಿ ವರ್ತಕರ, ನೌಕರರ, ಹಮಾಲಿ ಕಾರ್ಮಿಕರ ತೀವ್ರ ವಿರೋಧದ ನಡುವೆಯೂ ಯಡಿಯೂರಪ್ಪ ಸರ್ಕಾರ ನಮೋ ಸರ್ಕಾರದ ಕಠೋರ ಆದೇಶಕ್ಕೆ ತಲೆಬಾಗಿ, ಸದನದಲ್ಲಿಯೂ ಚರ್ಚೆ ಮಾಡದೆ ಸುಗ್ರೀವಾಜ್ಞೆ ಮೂಲಕ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಅಂಗೀಕರಿಸಿಯೇ ಬಿಟ್ಟರು. ಆ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಲೂಟಿ ಮಾಡಲು ಬಲಾಢ್ಯ ಕಾರ್ಪೋರೆಟ್ ಕಂಪೆನಿಗಳಿಗೆ ಬಾಗಿಲು ತೆರೆದರು.

ಈಗ ಅದೇ ರೀತಿಯಲ್ಲಿ ಮೋದಿಯವರ ಆಪ್ತ ಸ್ನೇಹಿತರಾದ ವಿದ್ಯುತ್ ಕಂಪೆನಿಗಳ ಉದ್ಯಮಿ ಗೌತಮ್ ಆದಾನಿ ಮತ್ತು ಇತರರಿಗೆ ಲಾಭ ಮಾಡಿಕೊಡಲು ಮೋದಿ ಸರ್ಕಾರ ಮುಂದಾಗಿದೆ. ಕೃಷಿ ಮತ್ತು ಇಂಧನ ಕ್ಷೇತ್ರ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತವೆ. ಈ ಪ್ರಸ್ತಾವಕ್ಕೆ ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮೊದಲಾಡ ರಾಜ್ಯ ಸರ್ಕಾರಗಳು ಈಗಾಗಲೇ ವಿರೋಧ ವ್ಯಕ್ತಪಡಿಸಿವೆ. ಪ್ರಸ್ತಾವಿತ ವಿಧೇಯಕದ ವಿರುದ್ಧ ಎಡಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಕಾಂಗ್ರೆಸ್ ಪಕ್ಷವೂ ತನ್ನ ಆಕ್ಷೇಪ ವ್ಯಕ್ತಪಡಿಸಿದೆ. ಸಿಎಂ ಬಿ.ಎಸ್. ಯಡಿಯೂರಪ್ಪ ರಾಜ್ಯದಲ್ಲಿ ಇಂಧನ ಖಾತೆಯನ್ನು ನಿರ್ವಹಿಸುತ್ತಿದ್ದು ಈ ಜನವಿರೋಧಿ ಪ್ರಸ್ತಾಪಕ್ಕೆ ತನ್ನ ಸರ್ಕಾರದ ಅನುಮೋದನೆ ನೀಡಿದರೆ ರಾಜ್ಯದಲ್ಲಿ ತೀವ್ರ ಹೋರಾಟವನ್ನು ಎದುರಿಸಬೇಕಾಗುವುದು. ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟವು ಕೇಂದ್ರದ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಅವರಿಗೆ ಪತ್ರ ಬರೆದು ತನ್ನ ಅಸಮಾಧಾನ ವ್ಯಕ್ತಪಡಿಸಿದೆ ಮಾತ್ರವಲ್ಲ ಇದೇ ಜೂನ್ 1 ರಂದು 'ಪ್ರತಿಭಟನಾ ದಿನ' ನಡೆಸಲು ತೀರ್ಮಾನಿಸಿದೆ.

ಪ್ರಸ್ತಾವಿತ ವಿದ್ಯುತ್ ಕಾಯ್ದೆ ತಿದ್ದುಪಡಿಯಿಂದಾಗಿ ವಿದ್ಯುತ್ ಉತ್ಪಾದನೆ, ಖರೀದಿ, ಮಾರಾಟ ಹಾಗೂ ಪ್ರಸರಣದ ವ್ಯವಸ್ಥೆಯು ಖಾಸಗಿ ಕಂಪೆನಿಗಳ ವಶವಾಗಲಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರಗಳು ಹಿಂದಿನ ತಮ್ಮ ಅಧಿಕಾರವನ್ನು ಕಳೆದುಕೊಳ್ಳಲಿವೆ. ಇದು ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಯ ತತ್ವಕ್ಕೆ ವಿರುದ್ಧವಾಗಿವೆ.

ಈಗ ಕೃಷಿ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರೈತರ 10 ಎಚ್.ಪಿ. ವರೆಗಿನ ವಿದ್ಯುತ್‌ನ್ನು ಉಚಿತವಾಗಿ ನೀಡಲಾಗುತಿತ್ತು. ವಿದ್ಯುತ್ ರಂಗದ ಖಾಸಗೀಕರಣದಿಂದಾಗಿ ರೈತರು ಈ ಸೌಲಭ್ಯವನ್ನು ಕಳೆದುಕೊಳ್ಳುವರು. ಹೊಸ ಕಾಯ್ದೆ ಜಾರಿಯಾದರೆ ರೈತರಿಗೆ ನೀಡುವ ಉಚಿತ ವಿದ್ಯುತ್ ರದ್ದಾಗಲಿದೆ. ವಿದ್ಯುತ್ ಸರಬರಾಜು ವೆಚ್ಚದ ಆಧಾರದಲ್ಲಿ ವಿದ್ಯುತ್ ದರ ನಿಗದಿಯಾಗಲಿದೆ. ದರ ನಿಗದಿಯ ವೇಳೆ ಸಬ್ಸಿಡಿಯನ್ನು ಪರಿಗಣಿಸಲಾಗುವುದಿಲ್ಲ. ಹಾಗಾಗಿ ಎಲ್ಲ ವರ್ಗಗಳ ಗ್ರಾಹಕರು ವಿದ್ಯುತ್ತಿನ ಪೂರ್ಣ ಶುಲ್ಕವನ್ನು ಪಾವತಿಸಬೇಕು. ಶುಲ್ಕ ಪಾವತಿಯ ಖಾತರಿ ಇಲ್ಲದೇ ಇದ್ದರೆ ವಿತರಣಾ ಕಂಪೆನಿಗಳಿಗೆ ವಿದ್ಯುತ್ ಹಂಚಿಕೆಯನ್ನು ತಡೆ ಹಿಡಿಯುವ ಅವಕಾಶ ಇರುತ್ತದೆ.

ಹೊಸ ಕಾಯ್ದೆ ಬಂದ ಬಳಿಕ ಭಾಗ್ಯಜ್ಯೋತಿ, ಕುಠೀರ ಜ್ಯೋತಿ ಯೋಜನೆಗಳಿಗೂ ಸಮಸ್ಯೆಯಾಗಲಿದೆ. ಈ ಯೋಜನೆಗಳು ಬಹಳ ವರ್ಷಗಳಿಂದ ರಾಜ್ಯದಲ್ಲಿ ಚಾಲ್ತಿಯಲ್ಲಿವೆ. ಈ ಸೌಲಭ್ಯವನ್ನು ಹಿಂಪಡೆದರೆ ರಾಜ್ಯದ ಅತ್ಯಂತ ಬಡ, ವರ್ಗದ ಜನ ಸರ್ಕಾರದ ವಿರುದ್ಧ ಬೀದಿಗಿಳಿದರೆ ಆಶ್ಚರ್ಯವಿಲ್ಲ.

ವಿದ್ಯುತ್ ಕಾಯ್ದೆ ತಿದ್ದುಪಡಿ ಧೈತ್ಯ ಕಂಪೆನಿಗಳಿಗೆ ವಹಿಸಿಕೊಡುವುದರಿಂದ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳಿಗೂ ಅನ್ಯಾಯವಾಗಲಿದೆ. ಸಣ್ಣ ಬಂಡವಾಳವನ್ನು ಕೂಡಿ ಉತ್ಪಾದನೆಯಲ್ಲಿ ತೊಡಗಿದ ಇವರಿಗೆ ವಿದ್ಯುತ್ ಸಬ್ಸಿಡಿ ನೀಡಲಾಗುತಿತ್ತು. ಈಗ ಅವರು ಈ ಸೌಲಭ್ಯವನ್ನು ಕಳೆದುಕೊಂಡು ಬೀದಿಪಾಲಾಗುವ ಆತಂಕಕ್ಕೆ ಒಳಗಾಗಿದ್ದಾರೆ. ಸಾಮಾನ್ಯ ಗೃಹಬಳಕೆದಾರರೂ ಸಹ ಖಾಸಗೀಕರಣದ ಹೊರೆಯಿಂದ ಪರದಾಡುವಂತಾಗಲಿದೆ.

ಇಡೀ ದೇಶವು ಕೋವಿಡ್ – 19 ಪಿಡುಗಿನ ವಿರುದ್ಧ ಹೋರಾಡುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಜನರ ಹಕ್ಕುಗಳನ್ನು ದಮನ ಮಾಡಲು ಹೊರಟಿರುವುದು ಅಮಾನವೀಯವಾಗಿದೆ. ಸರ್ಕಾರ ಜನತೆಯ ಅಸಹಾಯಕತೆಯನ್ನು ದುರ್ಬಳಕೆ ಮಾಡುತ್ತಿರುವುದು ಎಲ್ಲರೂ ಒಂದಾಗಿ ವಿರೋಧಿಸಬೇಕಾಗಿದೆ. ಇಲ್ಲದೆ ಹೋದರೆ ದೇಶದಲ್ಲಿ ನಾವು ಒಂದು ಪೂರ್ಣ ಪ್ರಮಾಣದ ಸರ್ವಾಧಿಕಾರಿ ಸರ್ಕಾರವನ್ನು ಕಾಣುವುದು ದೂರವಿಲ್ಲ!

ಬಂಡವಾಳದಾರರ ಲೂಟಿಗಾಗಿ, ಕಾರ್ಮಿಕರ ಕೆಲಸದ ಅವಧಿ ಹೆಚ್ಚಳ ಆದೇಶ ಹಿಂಪಡೆಯಲು ಸಿಪಿಐ(ಎಂ) ಆಗ್ರಹ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಜನತೆ ಹಾಗೂ ಕಾರ್ಮಿಕರ ತೀವ್ರ ವಿರೋಧದ ನಡುವೆಯೂ, ತಮ್ಮ ಸರ್ಕಾರವು ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ದಿನದ ಕೆಲಸದ ಅವಧಿಯನ್ನು 8 ಗಂಟೆಯಿಂದ 10 ಗಂಟೆಗಳಿಗೆ ಮತ್ತು ವಾರದ ಕೆಲಸದ ಅವಧಿಯನ್ನು 48 ಗಂಟೆಗಳಿಂದ 60 ಗಂಟೆಗಳಿಗೆ ಹೆಚ್ಚಿಸಿದೆ. ಇದರ ಅಗತ್ಯವೇನಿತ್ತು? ಎಂದು ಪ್ರಶ್ನಿಸಿದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ರಾಜ್ಯ ಸಮಿತಿ, ಈ ಕಾರ್ಮಿಕ ಹಾಗೂ ರಾಜ್ಯದ ಅಭಿವೃದ್ಧಿ ವಿರೋಧಿ ಕ್ರಮವನ್ನು ಬಲವಾಗಿ ಖಂಡಿಸುತ್ತದೆ.

ಇದು, ರಾಜ್ಯವನ್ನು ಆರ್ಥಿಕ ಸಂಕಷ್ಠದಿಂದ ಪಾರು ಮಾಡುವ ಬದಲು ಮತ್ತಷ್ಟು ಸಂಕಷ್ಟಕ್ಕೆ ದೂಡುವ ಜವಾಬ್ದಾರಿ ಹೀನ ನಡೆಯಾಗಿದೆ ಎಂದಿದೆ.

ಇದು ದುಡಿಯುವ ಜನತೆಯನ್ನು ಮತ್ತಷ್ಟು ಸಂಕಷ್ಠಕ್ಕೀಡು ಮಾಡುವ ಮತ್ತು ಬಂಡವಾಳದಾರರನ್ನು ಮಾತ್ರವೇ ಸಂಕಷ್ಠದಿಂದ ಮೇಲೆತ್ತುವ ಮತ್ತು ಅವರಿಗೆ, ಕಾರ್ಮಿಕರ ದುಡಿಮೆಯನ್ನು ಲೂಟಿ ಮಾಡಲು ಅವಕಾಶ ನೀಡುವ, ಹೀನ ಅಧಿಕಾರ ದುರುಪಯೋಗವಾಗಿದೆಯೆಂದು ಸಿಪಿಐಎಂ ಕಟುವಾಗಿ ಠೀಕಿಸುತ್ತದೆ.

ಈ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಮತ್ತು ಕೆಲಸದ ಅವಧಿಯನ್ನು 6 ಗಂಟೆಗೆ ಇಳಿಸಿ, ನಿರುದ್ಯೋಗ ನಿವಾರಣೆಗೆ ಮತ್ತು ಆ ಮೂಲಕ ರಾಜ್ಯದ ಅಭಿವೃದ್ಧಿಗೆ ಕ್ರಮ ವಹಿಸಬೇಕೆಂದು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಆಗ್ರಹಿಸುತ್ತದೆ.

ರಾಜ್ಯ ಸರ್ಕಾರವು 22.5.2020 ರಂದು ಆದೇಶ ಮಾಡಿ, 22.5.2020 ರಿಂದ 21.8.2020 ರವರೆಗೆ 3 ತಿಂಗಳು ರಾಜ್ಯದಲ್ಲಿನ ನೋಂದಾಯಿತ ಕಾರ್ಖಾನೆಗಳಿಗೆ 1948 ರ ಕಾರ್ಖಾನೆ ಕಾಯ್ದೆಯ ಕಲಂ 51 ಮತ್ತು 54 ಗಳಿಂದ ವಿನಾಯಿತಿ ನೀಡುತ್ತದೆ. ಕಲಂ 54 ರಲ್ಲಿನ ವಾರದ ಕೆಲಸದ ಅವಧಿಯನ್ನು ಹಾಲಿ 48 ಗಂಟೆಗಳಿಂದ 60 ಗಂಟೆಗೆ ಹೆಚ್ಚಳ ಮಾಡಿದೆ, ಹಾಗು ಕಲಂ 51 ರಲ್ಲಿನ ದಿನದ ಕೆಲಸದ ಅವಧಿಯನ್ನು ಹಾಲಿ 8 ಗಂಟೆಗಳಿಂದ 10 ಗಂಟೆಗೆ ಹೆಚ್ಚಳ ಮಾಡಿದೆ. ಇದು, ಈ ದುಡಿಮೆಯ ಸಮಯದ ಹೆಚ್ಚಳವು, ಒಂದೆಡೆ ಕಾರ್ಮಿಕರನ್ನು ಮತ್ತಷ್ಟು ಸುಲಿಗೆಗೆ ಒಳಪಡಿಸಿ ಅವರ ವಿಶ್ರಾಂತಿಯ ಸಮಯವನ್ನು ಕಡಿತಗೊಳಿಸಿದರೇ, ಇನ್ನೊಂದೆಡೆ, ಈಗಾಗಲೇ ಪೆಡಂಭೂತವಾಗಿ ಬೆಳೆದು ರಾಜ್ಯಕ್ಕೆ ಮಾರಕವಾಗಿರುವ ನಿರುದ್ಯೋಗಿಗಳ ದೊಡ್ಡ ಪಡೆಗೆ ಉದ್ಯೋಗದಲ್ಲಿರುವ ಲಕ್ಷಾಂತರ ಜನರನ್ನು ದೂಡಲಿದೆ. ನಿರುದ್ಯೋಗಿಗಳ ಸೈನ್ಯವನ್ನು ಹೆಚ್ಚಿಸಲಿದೆ.

ಜನತೆ ಹಾಗೂ ಕಾರ್ಮಿಕ ವರ್ಗ ದೇಶದಾದ್ಯಂತ ಕೋವಿಡ್– 19 ರ ವಿರುದ್ದದ ಹೋರಾಟದ ಸಂಕಷ್ಠದಲ್ಲಿರುವ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು, ಅದರ ಮರೆಯಲ್ಲಿ, ದುಡಿಯುವ ಜನತೆಯನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿ, ಕಾರ್ಪೋರೇಟ್ ಬಂಡವಾಳದಾರರ ಹಿತ ರಕ್ಷಣೆಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೊಡಗಿರುವುದು ಇದು ಹೊಸದೇನಲ್ಲಾ! ಆದರೆ ನೆನಪಿಡಿ, ಇದು ಸಂಕಷ್ಠದಲ್ಲಿರುವವರನ್ನು ಮತ್ತಷ್ಟು ಸಂಕಷ್ಠಕ್ಕೆ ದೂಡಿ, ಖುಸಿಪಡುವ ಅಸಹ್ಯ ಕ್ರೌರ್ಯವಾಗಿದೆ, ಇದು, ತಮ್ಮ ಸರಕಾರಗಳ ಅಸ್ವಸ್ಥ ಮನಸ್ಥಿತಿಯನ್ನು ಬಿತ್ತರಿಸುತ್ತದೆ..

ಅದಾಗಲೇ, ಎಪಿಎಂಸಿ ಹಾಗೂ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ವ್ಯವಸಾಯ ಹಾಗೂ ಎಪಿಎಂಸಿ ಗಳ ದುಡಿಯುವ ಜನತೆಯ ಮೇಲೆ ಧಾಳಿ ನಡೆಸಿದ್ದೀರಿ, ಕೇಂದ್ರ ಸರಕಾರ ವಿದ್ಯುತ್ ರಂಗವನ್ನು ಕಾರ್ಪೋರೇಟ್ ಕಂಪನಿಗಳಿಗೆ ಧಾರೆ ಎರೆದು ಕೊಡಲು ಮುಂದಾಗಿದೆ. ಇದೀಗ ಇಂತಹ ಧಾಳಿಗೆ ಮತ್ತೊಮ್ಮೆ ತಾವು ಮುಂದಾಗಿದ್ದೀರಿ?

ನೂರಾರು ವರ್ಷಗಳ ಸುಧೀರ್ಘ ಹೋರಾಟದ ಫಲವಾಗಿ, ಜಾಗತಿಕ ಕಾರ್ಮಿಕ ವರ್ಗ ಗಳಿಸಿರುವ 8 ಗಂಟೆಯ ಕೆಲಸದ ಹಕ್ಕನ್ನು ಗೌರವಿಸುವ ಬದಲು, ರಾಜ್ಯದ ಕಾರ್ಮಿಕರಿಂದ ಅದನ್ನು ಕಸಿದುಕೊಳ್ಳುತ್ತಿದ್ದೀರಿ?

ಇದು ಹೀಗೆಯೇ ಮುಂದುವರೆದರೆ, ರಾಜ್ಯದ ಕಾರ್ಮಿಕರು ಮತ್ತು ದುಡಿಯುವ ಜನತೆ ಇಂತಹ ಕಾರ್ಮಿಕ ಹಾಗೂ ಜನ ವಿರೋಧಿ ಬಿಜೆಪಿ ಸರಕಾರಗಳಿಗೆ ತಕ್ಕ ಪಾಠ ಕಲಿಸುವ ದಿನಗಳು ದೂರವಿಲ್ಲ! ಎಂದು ಸಿಪಿಐ(ಎಂ) ಎಚ್ಚರಿಸಿದೆ.

ರಾಜ್ಯದ ಕಾರ್ಮಿಕರ ಮತ್ತು ವಿರೋಧ ಪಕ್ಷಗಳ ವಿರೋಧದ ನಡುವೆಯೂ, ಇಂತಹ ಕ್ರಮಕ್ಕೆ ತಮ್ಮ ಸರ್ಕಾರ ನಿರಂತರವಾಗಿ ಮುಂದಾಗುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ತಾವು ಕವಡೆ ಕಾಸಿನ ಕಿಮ್ಮತ್ತು ನೀಡದವರು ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ. ಇದನ್ನು ರಾಜ್ಯದ ನಾಗರೀಕರು, ದುಡಿಯುವ ಜನರು ಗಮನಿಸುತ್ತಿದ್ದಾರೆ.

ಕೋವಿಡ್ ಹಿನ್ನೆಲೆಯಲ್ಲಿ ಕೆಲಸದ ಅವಧಿಯನ್ನು ಕಾರ್ಮಿಕರ ಆರೋಗ್ಯ ಮತ್ತು ಉದ್ಯೋಗಗಳ ರಕ್ಷಣೆಯ ಹಿತ ದೃಷ್ಟಿಯಿಂದ 6 ಗಂಟೆಗೆ ಇಳಿಸಬೇಕೆಂದು ಮತ್ತು ಹಾಲಿ ಆದೇಶವನ್ನು ವಾಪಾಸು ಪಡೆಯಬೇಕೆಂದು ಈ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿ ಪುನಃ ಒತ್ತಾಯಿಸುತ್ತದೆ.

ಯು. ಬಸವರಾಜ ಕಾರ್ಯದರ್ಶಿ, (23–05–2020)

ರೈತರು ಹಾಗೂ ಕೃಷಿ ಭೂಮಿ ಮೇಲಿನ ದೌರ್ಜನ್ಯ ಹೆಚ್ಚಿಸಲಿರುವ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020, ಕೆಪಿಆರ್‌ಎಸ್ ಖಂಡನೆ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಇಡೀ ದೇಶ ಮತ್ತು ಜಗತ್ತು ಕೋವಿಡ್ –19 ರ ವಿರುದ್ದ ಎಲ್ಲ ಭೇದಗಳನ್ನು ಮರೆತು ಹೋರಾಟದಲ್ಲಿ ತೊಡಗಿರುವಾಗ, ಸದರಿ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು, ದೇಶದ ರೈತರು ಹಾಗೂ ರೈತ – ಕೂಲಿಕಾರರ ಆಧಾರಿತ ವ್ಯವಸಾಯದ ಮೇಲೆ ಕಾರ್ಪೋರೇಟ್ ಕಂಪನಿಗಳ ಪರವಾಗಿ ಗಂಭೀರ ಧಾಳಿ ಮಾಡಲು ಮುಂದಾದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನೀಚತನವನ್ನು ಕರ್ನಾಟಕ ಪ್ರಾಂತ ರೈತ ಸಂಘ ಮತ್ತೊಮ್ಮೆ ಬಲವಾಗಿ ಖಂಡಿಸುತ್ತದೆ.

ವ್ಯವಸಾಯ ಮತ್ತು ರೈತಾಪಿ ಜನತೆ ಲಾಕ್ ಡೌನ್ ನಿಂದಾಗಿ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ ವಿರೋಧಿ ನಿಲುಮೆಗಳಿಂದಾಗಿ ನಲುಗಿ ಹೋಗಿದೆ. ಆದಾಗ್ಯೂ ಅವರು ಕೋವಿಡ್ – 19 ರ ವಿರುದ್ಧದ ಐಕ್ಯ ಹೋರಾಟದಲ್ಲಿ ತೊಡಗಿದ್ದಾರೆ. ಲಾಕ್ ಡೌನ್ ನಿಂದಾಗಿ ಸಂಕಷ್ಠದಲ್ಲಿರುವ ರೈತಾಪಿ ಜನತೆಯ ಪರವಾಗಿ ನಿಂತು ನೆರವಾಗುವ ಬದಲು, ಬೆನ್ನಿಗೆ ಇರಿಯುವ ಕೆಲಸದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೊಡಗಿವೆ. ಈಗಾಗಲೇ ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ಅಂಗೀಕರಿಸಲಾಗಿದೆ. ಇದೀಗ ಮತ್ತೊಂದು ಭೂ ಸುಧಾರಣಾ ತಿದ್ದುಪಡಿ ಕಾಯ್ದೆ– 2020 ಹೊರ ಬಂದಿದೆ. ಎಂದು ಕರ್ನಾಟಕ ಪ್ರಾಂತ ರೈತ ಸಂಘ ಕಟುವಾಗಿ ಠೀಕಿಸಿದೆ.

ಭೂ ಸುಧಾರಣಾ ಕಾಯ್ದೆ– 1961 ರ ಕಲಂ 109 ಕ್ಕೆ ಮತ್ತೊಂದು ತಿದ್ದುಪಡಿ

ಪುಟ 5 ಕ್ಕೆ

ಪಿಪಿಇ ಹಾಗೂ ಕೋವಿಡ್– 19 ರ ಟೆಸ್ಟಿಂಗ್ ಕಿಟ್ ಖರೀದಿಯಲ್ಲಿನ ಭ್ರಷ್ಠಾಚಾರವನ್ನು ಸ್ವತಂತ್ರ ಉನ್ನತ ನ್ಯಾಯಾಂಗ ತನಿಖೆಗೊಳಪಡಿಸಲು ಸಿಪಿಐ(ಎಂ) ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಕೋವಿಡ್– 19 ರ ಹೋರಾಟದಲ್ಲಿ ತೊಡಗಿದ ಆರೋಗ್ಯ ಸಿಬ್ಬಂದಿಗೆ ಕೊಡಲಾಗುವ ಸುರಕ್ಷಾ ಸಾಮಾಗ್ರಿಗಳಾದ ಪಿಪಿಇ ಕಿಟ್, ಕರೋನಾ ಟೆಸ್ಟಿಂಗ್ ಕಿಟ್, ಸ್ಯಾನಿಟೈಸರ್ಗಳು ಕಳಪೆ ಗುಣಮಟ್ಟದ್ದಾಗಿದ್ದು ಮತ್ತು ಅಂತಹ ಕಳಪೆ ಸಾಮಗ್ರಿಗಳ ಖರೀದಿಸುವಲ್ಲಿಯೂ ದುಬಾರಿ ಬೆಲೆ ನೀಡಿ ಖರೀದಿಸ, ರಾಜ್ಯ ಸರಕಾರ ಅಕ್ರಮ ಎಸಗಿದೆಯೆಂಬ ಅಘಾತಕಾರಿ ಸುದ್ದಿ ಪತ್ರಿಕೆಗಳಲ್ಲಿ ಬಹಿರಂಗ ಗೊಂಡಿದೆ. ಸದರಿ ಭ್ರಷ್ಠಾಚಾರಕ್ಕೆ ಸಂಬಂಧಿಸಿ ವಿಧಾನ ಮಂಡಲದ ಶ್ರೀ ಹೆಚ್ ಕೆ ಪಾಟೀಲರ ನೇತೃತ್ವದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ದೂರು ಬಂದಿದೆಯೆಂದು ವರದಿಯಾಗಿದೆ. ಇನ್ನೊಂದೆಡೆ ಸದರಿ ತನಿಖೆಯನ್ನು ನಿರ್ಬಂಧಿಸುವ ಖಂಡನಾರ್ಹ ಪ್ರಯತ್ನವು ನಡೆದಿದೆ ಎನ್ನಲಾಗಿದೆ. ಈ ಭ್ರಷ್ಠಾಚಾರ ಮತ್ತು ಪಿಪಿಇ ಹಾಗೂ ಟೆಸ್ಟಿಂಗ್ ಕಿಟ್ ಗಳ ಕಳಪೆತನದ ಬಹಿರಂಗವು ಸಾರ್ವಜನಿಕರು ಹಾಗೂ ಕೋವಿಡ್ ಹೋರಾಟದಲ್ಲಿ ನೇರವಾಗಿ ತೊಡಗಿರುವ ಆರೋಗ್ಯ ಸಿಬ್ಬಂಧಿಗಳನ್ನು ಬೆಚ್ಚಿ ಬೀಳಿಸಿದೆ.

ನೂರಾರು ಕೋಟಿ ರೂಗಳ ಈ ಅವ್ಯವಹಾರವು ಸಾರ್ವ ಜನಿಕರ ಆರೋಗ್ಯದ ಮತ್ತು ಪ್ರಾಣದ ಜೊತೆಗೆ ಆಟವಾಡಿದ ಗಂಭೀರ ವಿಚಾರವಾಗಿದೆಯೆಂದು ಭಾರತ ಕಮ್ಯುನಿಷ್ಠ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ ಮತ್ತು ಅದನ್ನು ಸಕ್ರಮವಾಗಿ ಹಾಗೂ ಜವಾಬ್ದಾರಿಯುತವಾಗಿ, ನಿಭಾಯಿಸುವಲ್ಲಿ ವಿಫಲವಾದ ಸಂಬಂಧಿಸಿದ ಮಂತ್ರಿಗಳ ರಾಜಿನಾಮೆಯನ್ನು ತಕ್ಷಣ ನೈತಿಕ ನೆಲೆಯಲ್ಲಿ ಪಡೆಯಲು ಕ್ರಮವಹಿಸುವಂತೆ ಸಿಪಿಐಎಂ ಒತ್ತಾಯಿಸುತ್ತದೆ.

ಅದೇ ರೀತಿ, ಈ ಸಂಬಂಧ ವ್ಯವಹರಿಸಿರುವ ಉನ್ನತ ಅಧಿಕಾರಿಗಳನ್ನು ತಕ್ಷಣವೇ ಅಮಾನತಿನಲ್ಲಿಡಬೇಕು ಹಾಗೂ ಸದರಿ ಭ್ರಷ್ಠಾಚಾರದ ಪ್ರಕರಣವನ್ನು ಸ್ವತಂತ್ರ ಉನ್ನತ ನ್ಯಾಯಾಂಗ ತನಿಖೆಗೊಳ ಪಡಿಸ ಬೇಕು. ಆ ಮೂಲಕ ಸಾರ್ವಜನಿಕರಿಗೆ ವಾಸ್ತವವೇನೆಂಬುದನ್ನು ಬಹಿರಂಗ ಪಡಿಸಬೇಕು ಹಾಗೂ ತಪ್ಪಿತಸ್ಥರನ್ನು ಶಿಕ್ಷಿಸಬೇಕೆಂದು ಸಿಪಿಐಎಂ ಮನವಿ ಮಾಡುತ್ತದೆ.

ಯು. ಬಸವರಾಜ ಕಾರ್ಯದರ್ಶಿ (29–05–2020)

ಕೊರೊನಾ ಲಾಕ್‌ಡೌನ್‌ನ ಪರಿಸ್ಥಿತಿಯಿಂದ ಸಂಕಷ್ಟದಲ್ಲಿರುವ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣ ಕಸುಬುದಾರರ ತಕ್ಷಣದ ಬೇಡಿಕೆಗಳನ್ನು ಈಡೇರಿಸಬೇಕು

ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ,

ಮಾನ್ಯರೇ,

ಕೊರೊನಾ ರೋಗ ನಮ್ಮ ದೇಶವೂ ಒಳಗೊಂಡಂತೆ ಇಡೀ ಜಗತ್ತನ್ನು ಅವರಿಸಿದೆ. ಲಕ್ಷಾಂತರ ಜನರು ಸಾವುಗಳನ್ನು ಅಪ್ಪಿದ್ದಾರೆ. ರೋಗವೂ ದಿನದಿಂದ ದಿನಕ್ಕೆ ವ್ಯಾಪಕಗೊಳ್ಳುತ್ತಿದೆ. ಈ ಭಯಾನಕ ರೋಗವನ್ನು ನಿಯಂತ್ರಿಸಲು ಲಾಕ್‌ಡೌನ್ ಮತ್ತಿತರೆ ಕ್ರಮಗಳ ಮೂಲಕ ಎಲ್ಲಾ ಸರ್ಕಾರಗಳು ಪ್ರಯತ್ನಿಸುತ್ತಿವೆ. ನಮ್ಮಲ್ಲಿಯು ಲಾಕ್‌ಡೌನ್ ಮತ್ತಿತರೆ ಕ್ರಮಗಳ ಬಹುತೇಕ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ಸುಮಾರು ಎರಡು ತಿಂಗಳಿಗೂ ಮೀರಿದ ಲಾಕ್‌ಡೌನ್ ಮತ್ತಿತರೆ ಕ್ರಮಗಳಿಂದ ಈ ಆರೋಗ್ಯದ ಪ್ರಶ್ನೆಯು ಸಾಮಾಜಿಕ, ಆರ್ಥಿಕ ಸಂಕಷ್ಟವಾಗಿ ಮಾರ್ಪಟ್ಟಿದೆ. ಬಾರಿ ಮುಖ್ಯವಾಗಿ ತೀವ್ರತರ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಕೃಷಿ ರಂಗ, ಗ್ರಾಮೀಣಾ ಪ್ರದೇಶದ ಜನರ ಪಾಲಿಗೆ ಇದು ಮರಣಾಂತಿಕ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲಾಗದೇ, ಅಲ್ಪಸ್ವಲ್ಪ ಜನ ರೈತರು ತೀರ ಕಡಿಮೆ ದರಗಳಿಗೆ ಮಾರಾಟ ಮಾಡಿ, ಲಕ್ಷ ಲಕ್ಷ ರೂ. ಗಳ ನಷ್ಟವನ್ನು ಅನುಭವಿಸುತ್ತಿದ್ದಾರೆ.

ಈ ನಷ್ಟ ಕೇವಲ ತರಕಾರಿ, ಹಣ್ಣು, ಆಹಾರ ಧಾನ್ಯಗಳನ್ನು ಬೆಳೆಯುವ ರೈತರಿಗೆ ಮಾತ್ರ ಸೀಮಿತವಾಗದೇ ಕೋಳಿ, ಕುರಿ, ಪಶು ಸಂಗೋಪನೆ ಇತ್ಯಾದಿ ಕ್ಷೇತ್ರಗಳಲ್ಲಿ ತೊಡಗಿರುವ ಅಸಂಖ್ಯಾತರಿಗೆ ವ್ಯಾಪಿಸಿದೆ.

ಕೃಷಿ ಮತ್ತು ಕೃಷಿಕರ ಬದುಕನ್ನು ಅವಲಂಬಿಸಿದ ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಸುಬುದಾರರಾದ ಅಗಸ, ಕ್ಷೌರಿಕ, ಬಡಗಿ ಇತ್ಯಾದಿ ವಿಭಾಗದ ಜನರು ಅತಿ ಹೆಚ್ಚು ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಅನೇಕ ಸಮಸ್ಯೆಗಳನ್ನು ಎದುರಿಸಿ ಸ್ವಂತ ಗ್ರಾಮಗಳಿಗೆ ಮರಳಿ ವಾಪಸ್ಸು ಬಂದಿರುವ ಲಕ್ಷ ಲಕ್ಷ ವಲಸೆ ಕಾರ್ಮಿಕರ ಸೇರ್ಪಡೆ ಈ ಎಲ್ಲಾ ಗ್ರಾಮೀಣಾ ಸಮಸ್ಯೆಗಳನ್ನು ಮತ್ತಷ್ಟು ಬಿಗಾಡಿಸುವಂತೆ ಮಾಡಿದೆ.

ಈ ಒಟ್ಟು ಸನ್ನಿವೇಶದ ಫಲವಾಗಿ ಉಂಟಾಗಿರುವ ಹಸಿವು, ನಿರುದ್ಯೋಗ, ಆರ್ಥಿಕ ದಿವಾಳಿತನ ಕೊರೋನಾ ರೋಗಿಕ್ಕಿಂತ ದೊಡ್ಡ ಮಾರಕವಾಗಿ ಪರಿಣಮಿಸಿದೆ. ಇಂತಹ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ, ರೋಗವನ್ನು ನಿಯಂತ್ರಿಸಲು ಪ್ರಯತ್ನ ಮಾಡುತ್ತಲೇ. ಹಸಿವು, ನಿರುದ್ಯೋಗ, ಆರ್ಥಿಕ ದಿವಾಳಿತನದಂತಹ ಭಯಾನಕ ಪರಿಸ್ಥಿತಿಯನ್ನು ಎದುರಿಸಲು ದೃಡ ತೀರ್ಮಾನಗಳನ್ನು ಮಾಡಬೇಕಿತ್ತು. ಕೆಲವು ದೇಶಗಳು ತನ್ನ ಜಿಡಿಪಿ ಯ ಶೇ. 8 ರಿಂದ 10 ವರೆಗಿನ ಮೊತ್ತದ ಆರ್ಥಿಕ ವಿಶೇಷ ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿವೆ. ಮಾನ್ಯ ಪ್ರಧಾನ ಮಂತ್ರಿಗಳು ದೇಶವನ್ನು ಉದ್ದೇಶಿಸಿ ಮಾತನಾಡುತ್ತಾ, ಕೇಂದ್ರ ಸರ್ಕಾರ ನಮ್ಮ ದೇಶದ ಜಿಡಿಪಿ ಶೇ. 10 ರಷ್ಟು ಮೊತ್ತವಾದ 20 ಲಕ್ಷ ಕೋಟಿ ರೂ. ಗಳ ವಿಶೇಷ ಪ್ಯಾಕೇಜ್‌ನ್ನು ಘೋಷಣೆ ಮಾಡಿದಾಗ, ನಮ್ಮ ಬಹುತೇಕ ತಕ್ಷಣದ ಸಮಸ್ಯೆಗಳು ಪರಿಹಾರವಾಗಬಹುದೆಂದು ನಿರೀಕ್ಷೆ ಮಾಡಿದ್ದಿವಿ. ಆದರೆ ಸಂಕಷ್ಟದ ಪರಿಸ್ಥಿತಿಯನ್ನು ನೆಪ ಮಾಡಿಕೊಂಡು ದೇಶದ ಕೋಟ್ಯಾಂತರ ರೈತರು, ಕೃಷಿ ಕೂಲಿಕಾರರು ಗ್ರಾಮೀಣ ಕಸುಬುದಾರರಿಗೆ ಮಹಾಮೋಸ ಮಾಡಿ, ಇಡೀ ದೇಶದ ಕೃಷಿ, ಕೈಗಾರಿಕೆ ಮತ್ತಿತರೆ ಕ್ಷೇತ್ರಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸುವಂತ ವಿಶೇಷ ಪ್ಯಾಕೇಜ್‌ಗಳ ಸರಣಿಯನ್ನು ಮಾನ್ಯ ಹಣಕಾಸು ಸಚಿವರು ಘೋಷಣೆಗಳನ್ನು ಮಾಡಿದ್ದಾರೆ. ಈ ಘೋಷಣೆಗಳು ಮುಂಬರುವ ದಿನಗಳಲ್ಲಿ ಗ್ರಾಮೀಣಾ ಜನತೆಯ ಬದುಕನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡ್ಡುತ್ತದೆ. ಈ ಪ್ಯಾಕೇಜುಗಳ ಭಾಗವಾಗಿ ಸಾಮಾನ್ಯ ಜನರನ್ನು ಅಗತ್ಯ ವಸ್ತುಗಳ ಬೆಲೆಯೆರಿಕೆ, ಕೃತಕ ಮಾರುಕಟ್ಟೆ ಅಕ್ರಮಗಳಿಂದ ರಕ್ಷಿಸುವ ಉದ್ದೇಶದಿಂದ ಜಾರಿಯಲ್ಲಿದ "ಅಗತ್ಯ ವಸ್ತುಗಳ ಕಾಯ್ದೆ" ಯನ್ನು ರದ್ದು ಪಡಿಸಿರುವುದು, ರಾಜ್ಯ ಸರ್ಕಾರಗಳ ಮೇಲೆ ವಿಪರೀತ ದಬಾವಣೆ ಮಾಡಿ ಬಲವಂತದಿಂದ ರಾಜ್ಯದ ಎಪಿಎಂಸಿ ಕಾಯ್ದೆಗೆ ಕಾರ್ಪೋರೇಟ್ ಕಂಪನಿಗಳ ಪರವಾದ ತಿದ್ದುಪಡಿಗಳನ್ನು ಮಾಡಿಸುತ್ತಿರುವುದು, ಗುತ್ತಿಗೆ ಕೃಷಿ, ಕಂಪನಿ ಕೃಷಿಯನ್ನು ಕೇಂದ್ರ ಸರ್ಕಾರ ವಿಪರೀತವಾಗಿ ಪ್ರೋತ್ಸಾಹಿಸುತ್ತಿರುವ ಈ ಸಂದರ್ಭದಲ್ಲಿ ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿ ಅನ್ವಯ ಬೆಂಬಲ ಬೆಲೆ ಕಾನೂನನ್ನು ರೂಪಿಸುವುದು ತೀರ ಅಗತ್ಯವಾಗಿದೆ. ಇದೇ ರೀತಿಯಲ್ಲಿ ಬ್ಯಾಂಕ್ ಸಾಲಗಳನ್ನು ನಿಜವಾದ ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಸುಬುದಾರರಿಗೆ ಸಿಗುವಂತೆ ಮಾಡಲು ಹಾಗೂ ಸಾಲದ ಬಾಧೆಯಿಂದ ನರಳುತ್ತಿರುವ ಗ್ರಾಮೀಣ ಜನರಿಗೆ ಒಂದು ಬಾರಿ ಕ್ರಮವಾಗಿ ಸಂಪೂರ್ಣ ಸಾಲ ಮನ್ನಾ, ಅಗತ್ಯವಿರುವ ಎಲ್ಲರಿಗೂ ಬ್ಯಾಂಕ್ ಸಾಲ ನೀಡಿಕೆ, ವಸೂಲಿ, ವಿಶೇಷ ಸಂದರ್ಭಗಳಲ್ಲಿ ಸಾಲ ಮನ್ನಾದಂತಹ ಅಂಶಗಳನ್ನು ಒಳಗೊಂಡಿರುವ "ಋಣ ಮುಕ್ತ ಕಾಯ್ದೆ"ಯನ್ನು ಜಾರಿಗೆ ತರುವುದು ಸಹ ತೀರ ಅಗತ್ಯವಾಗಿದೆ. ಮಾನ್ಯ ಹಣಕಾಸು ಸಚಿವರು, ಕೊನೆಯಲ್ಲಿ ಘೋಷಣೆ ಮಾಡಿದ ಉದ್ಯೋಗ ಖಾತರಿಗೆಯೆಂದು ತಿಳಿಸಿರುವ 40,000 ಕೋಟಿ ರೂ. ಗಳನ್ನು ಹೊರತುಪಡಿಸಿದರೆ ಇನ್ಯಾವುದೇ ಘೋಷಣೆಯು ಸದ್ಯದಲ್ಲಿ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣಾ ಕಸುಬುದಾರರ ಸಹಾಯಕ್ಕೆ ಬರುವುದಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಇಂದೆಂದೂ ಕಂಡರಿಯದ ಭೀಕರ ಸಂಕಷ್ಟದಲ್ಲಿರುವ ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಸುಬುದಾರರಿಗೆ ಆರ್ಥಿಕ ನೆರವು ನೀಡುವುದು ಇವತ್ತಿನ ತುರ್ತು ಅಗತ್ಯವಾಗಿದೆ. ಲಕ್ಷ ಲಕ್ಷ ಕೋಟಿ ರೂ. ಗಳ ರಿಯಾಯಿತಿಗಳು, ಸಾಲ ಮನ್ನಾಗಳನ್ನು ಈ ದೇಶದ ಬೆರಳೆಣಿಕೆಯಷ್ಟು ಶ್ರೀಮಂತರಿಗೆ, ಕಾರ್ಪೋರೇಟ್ ಕಂಪನಿಗಳಿಗೆ ನೀಡುತ್ತ ಬಂದಿರುವ ಕೇಂದ್ರ ಸರ್ಕಾರ, ಇಂತಹ ಕಷ್ಟದ ಸಂದರ್ಭದಲ್ಲಿಯಾದರು ದೊಡ್ಡ ದೊಡ್ಡ ಶ್ರೀಮಂತರು, ಕಾರ್ಪೋರೇಟ್ ಕಂಪನಿಗಳಿಂದ ಈ ಹಿಂದೆ ಸಂಗ್ರಹ ಮಾಡುತ್ತಿದ್ದ "ಸಂಪತ್ತಿನ ತೆರಿಗೆ" ಪದ್ದತಿಯನ್ನು ಮತ್ತೆ ಜಾರಿಗೆ ತಂದು, ಕನಿಷ್ಠ ಶೇ. 2 ರಷ್ಟು ತೆರಿಗೆಯನ್ನು ಸಂಗ್ರಹ ಮಾಡಿ, ಸಂಕಷ್ಟದಲ್ಲಿರುವ ಗ್ರಾಮೀಣ ಜನರಿಗೆ ನೆರವು ನೀಡಲು ಉಪಯೋಗಿಸಬೇಕೆಂದು ಎಐಕೆಎಸ್‌ಸಿಸಿ ಆಗ್ರಹಿಸುತ್ತದೆ.

ಈ ಹಿನ್ನೆಲೆಯಲ್ಲಿ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣ ಕಸುಬುದಾರರನ್ನು ತಕ್ಷಣದ ಹಸಿವು, ನಿರುದ್ಯೋಗ, ಆರ್ಥಿಕ ದಿವಾಳಿಯಿಂದ ರಕ್ಷಿಸಲು, ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ರಾಷ್ಟ್ರಮಟ್ಟದಲ್ಲಿನ 200 ಸಂಘಟನೆಗಿಂತ ಹೆಚ್ಚಿನ ರೈತರು, ಕೂಲಿಕಾರರೂ, ಕಸುಬುದಾರರ ಸಂಘಟನೆಗಳನ್ನು ಒಳಗೊಂಡು ರಚನೆಯಾಗಿರುವ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC) ಇದೇ ಮೇ 27, 2020 ಕ್ಕೆ ರಾಷ್ಟ್ರಾದ್ಯಂತ ತಾಲ್ಲೂಕು – ಜಿಲ್ಲಾಧಿಕಾರಿಗಳ ಕಛೇರಿಗಳ ಎದುರು ಬೃಹತ್ ಪ್ರತಿಭಟನೆಗಳನ್ನು ನಡೆಸಲು ಕರೆ ನೀಡಿದೆ. ಇದರ ಭಾಗವಾಗಿ ಕರ್ನಾಟಕ ರಾಜ್ಯದಲ್ಲಿ ಹೋರಾಟವನ್ನು ನಡೆಸಿ, ಈ ಬೇಡಿಕೆಗಳನ್ನು ಒತ್ತಾಯಿಸುತ್ತಿದ್ದೇವೆ. ತಾವುಗಳು ಕೂಡಲೇ ಈ ಬೇಡಿಕೆಯನ್ನು ಈಡೇರಿಸಬೇಕೆಂದು ಆಗ್ರಹಿಸುತ್ತೇವೆ.

ಬೇಡಿಕೆಗಳು:

1. ಕಾರ್ಪೋರೇಟ್ ಕಂಪನಿಗಳ ಪರವಾದ, ರೈತ ವಿರೋಧಿಯಾದ ಎಪಿಎಂಸಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿ ಸುಗ್ರೀವಾಜ್ಞೆಗಳ ಮೂಲಕ ರಾಜ್ಯ ಸರ್ಕಾರಗಳು ಕೂಡಲೇ ಕಾಯ್ದೆ ಅಂಗೀಕರ ಮಾಡಬೇಕೆಂದು ಒತ್ತಾಯಿಸುವ ಕ್ರಮಗಳನ್ನು ಕೈಬಿಡಬೇಕು.
2. ರೇಷನ್ ಪ್ರಶ್ನೆ: ಬಡತನ, ನಿರುದ್ಯೋಗ, ಹಸಿವು ತಾಂಡವಾಡುತ್ತಿರುವ ಈ ಸಂದರ್ಭದಲ್ಲಿಯಾದರೂ ಯಥೇಚ್ಛವಾಗಿ ಗೋದಾಮುಗಳಲ್ಲಿ ಇರುವ ಆಹಾರ ಪದಾರ್ಥಗಳನ್ನು ಬಿ.ಪಿ.ಎಲ್., ಎ.ಪಿ.ಎಲ್. ಎನ್ನುವ ತಾರತಮ್ಯವಿಲ್ಲದೆ ಕನಿಷ್ಠ ಒಂದು ವರ್ಷ ಮಾಸಿಕ ಪ್ರತಿ ಕುಟುಂಬದ ತಲಾ ವ್ಯಕ್ತಿಗೆ 15 ಕೆ.ಜಿ. ರೇಷನ್‌ನ್ನು ನೀಡಬೇಕು. ಕೇರಳ ಮಾದರಿಯಂತೆ ಅಕ್ಕಿಯ ಜೊತೆಗೆ ಬೇಳೆ, ಎಣ್ಣೆ, ಸಕ್ಕರೆ, ಉಪ್ಪು ಇತ್ಯಾದಿ ಅವಶ್ಯ 16 ಸಾಮಾಗ್ರಿಗಳನ್ನು ನೀಡಬೇಕು.
3. ರೈತರು, ಕೃಷಿಕೂಲಿಕಾರರು, ಕಸುಬುದಾರರು ಮತ್ತು ಸ್ತ್ರೀ ಶಕ್ತಿ ಗುಂಪುಗಳ ಸಾಲಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಕೃಷಿ ಸಾಲಗಳ ವಸೂಲಾತಿಯನ್ನು ನಿಲ್ಲಿಸಬೇಕು ಹಾಗು ಮುಂಗಾರು ಹಿನ್ನೆಲೆಯಲ್ಲಿ ಹೊಸ ಸಾಲಗಳನ್ನು ಕೂಡಲೇ ನೀಡಬೇಕು.
4. ಡಾ॥ ಸ್ವಾಮಿನಾಥನ್ ವರದಿಯನ್ವಯ ಉತ್ಪಾದನಾ ವೆಚ್ಚದ ಜೊತೆಗೆ ಶೇ. 50 ರಷ್ಟು ಲಾಭವನ್ನು ಸೇರಿಸಿ ಎಲ್ಲಾ ಕೃಷಿ ಉತ್ಪನ್ನಗಳನ್ನು ಸರ್ಕಾರ ಖರೀದಿ ಮಾಡಬೇಕು. ಲಾಕ್‌ಡೌನ್ ಹಿನ್ನೆಲೆಯ ಬೆಳೆ ನಷ್ಟಕ್ಕೆ ಪೂರ್ಣ ಪರಿಹಾರವನ್ನು ನೀಡಬೇಕು.
5. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಹಿನ್ನೆಲೆಯಲ್ಲಿ ಲೀಟರ್ ಡಿಸೇಲ್ ಬೆಲೆಯನ್ನು ರೂ. 22–00 ಕ್ಕೆ ಇಳಿಸಬೇಕು. ವಲಸೆ ಕಾರ್ಮಿಕರನ್ನು ಉಚಿತ ಪ್ರಯಾಣ ವ್ಯವಸ್ಥೆಯೊಂದಿಗೆ ಅವರ ಸ್ವಂತ ಸ್ಥಳಗಳಿಗೆ ಕಳುಹಿಸಬೇಕು.
6. ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣಾ ಕಸುಬುದಾರರ ಕುಟುಂಬಗಳಿಗೆ ಲಾಕ್‌ಡೌನ್ ಅವಧಿಯ ಪ್ರತಿ ತಿಂಗಳು 10,000 ರೂ. ಗಳನ್ನು ನೀಡಬೇಕು ಹಾಗು ಪಿಎಂ ಕಿಸಾನ್ ಯೋಜನೆಯ ಮೊತ್ತವನ್ನು ಕನಿಷ್ಠ ರೂ. 18,000–00 ಕ್ಕೆ ಏರಿಸಬೇಕು.
7. ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ಎಲ್ಲಾ ಕೃಷಿ ಕೆಲಸಗಳನ್ನು ಸೇರಿಸಿ, ಸಮರ್ಪಕವಾಗಿ ಜಾರಿ ಮಾಡಬೇಕು. ಕೆಲಸದ ದಿನಗಳ ಮಿತಿಯನ್ನು ತೆಗೆದು ಕೂಲಿಯನ್ನು ಹೆಚ್ಚಳ ಮಾಡಬೇಕು.
8. ಲಾಕ್‌ಡೌನ್ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಕನಿಷ್ಠ 5 ಲಕ್ಷ ರೂ. ಪರಿಹಾರ ನೀಡಬೇಕು.
9. ಡಾ॥ ಎಂ.ಎಸ್. ಸ್ವಾಮಿನಾಥನ ವರದಿಯನ್ವಯ ಎಲ್ಲಾ ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ ಕನಿಷ್ಠ ಬೆಂಬಲ ಬೆಲೆಯನ್ನು ಖಾತ್ರಿ ಮಾಡುವ ಕಾನೂನನ್ನು ಕೇಂದ್ರ ಸರ್ಕಾರ ಕೂಡಲೇ ಅಂಗೀಕಾರ ಮಾಡಬೇಕು.
10. ಎಲ್ಲಾ ರೈತರು, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕಸುಬುದಾರರ ಎಲ್ಲಾ ರೀತಿಯ ಬ್ಯಾಂಕ್ ಸಾಲಗಳನ್ನು ಒಂದು ಬಾರಿ ಕ್ರಮವಾಗಿ ಸಂಪೂರ್ಣವಾಗಿ ಮನ್ನಾ ಮಾಡಬೇಕು ಹಾಗೂ ಅಗತ್ಯವಿರುವ ಎಲ್ಲಾರಿಗೂ ಬ್ಯಾಂಕ್ ಸಾಲ ನೀಡಿಕೆ, ವಸೂಲಿ, ವಿಶೇಷ ಸಂದರ್ಭಗಳಲ್ಲಿ ಸಾಲ ಮನ್ನಾ ಇತ್ಯಾದಿ ಅಂಶಗಳಿಗೆ ಸಂಬಂಧಿಸಿ "ಋಣ ಮುಕ್ತ ಕಾಯ್ದೆ" ಯನ್ನು ಕೂಡಲೇ ಅಂಗೀಕರಿಸಬೇಕು.
11. ಕೃಷಿ ಮತ್ತು ಗ್ರಾಮೀಣ ಜನರ ಸಂಕಷ್ಟಗಳನ್ನು ನಿಭಾಯಿಸಲು ಅಗತ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಕ್ರೂಢೀಕರಿಸಲು ➚

ಸಾವರ್ಕರ್ ಕ್ರಾಂತಿಕಾರಿಯೋ ಅಥವಾ ಬ್ರಿಟಿಷರಿಗೆ ಶರಣಾದ ಹೇಡಿಯೋ?

ಯಲಹಂಕ ಮೇಲ್ಸೇತುವೆಗೆ ಸಾವರ್ಕರ್ ಹೆಸರಿಡುವ ಪ್ರಸ್ತಾವದೊಂದಿಗೆ ಅವರು ಕ್ರಾಂತಿಕಾರಿ 'ವೀರ'ರೋ ಅಥವಾ ಬ್ರಿಟಿಷರಿಗೆ ಶರಣಾದ ಹೇಡಿಯೋ ಎಂಬ ಪ್ರಶ್ನೆ ಮತ್ತೆ ಮುನ್ನೆಲೆಗೆ ಬಂದಿದೆ. ಸಾವರ್ಕರ್ 'ವೀರ'ರಲ್ಲ, ಹೆದರಿ ಶರಣಾದ ಹೇಡಿಯೆಂದು ಬಲವಾದ ಪುರಾವೆಗಳು ಇಲ್ಲಿವೆ.

ಡಾ. ಪ್ರಕಾಶ್ ಕೆ.

(ಆಧಾರ: ಎ.ಜಿ.ನೂರಾನಿ, 2019, ಅರ್.ಎಸ್.ಎಸ್. ಎ ಮೆನೇಸ್ ಟು ಇಂಡಿಯಾ, ಲೆಫ್ಟ್ ವರ್ಡ್ ಪ್ರಕಾಶನ, ನವದೆಹಲಿ, ಪುಟಗಳು 93–96)

ವಿ.ಡಿ. ಸಾವರ್ಕರ್ ಭಾರತ ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮ ಆರಂಭದ ದಿನಗಳಲ್ಲಿ ಒಬ್ಬ ತೀವ್ರವಾದಿ ಕ್ರಾಂತಿಕಾರಿಯಾಗಿದ್ದವರು. 1911 ರಲ್ಲಿ ಜೈಲು ಶಿಕ್ಷೆಗೆ ಒಳಗಾಗುತ್ತಿದ್ದಂತೆ ಅವರು ಸಂಪೂರ್ಣ ಶರಣಾಗತಿಯ ದಾರಿಯನ್ನು ಹಿಡಿದರು. ನಂತರ ಅವರೆಂದಿಗೂ ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ತೊಡಗಲಿಲ್ಲ. ಅವರು ಬ್ರಿಟಿಷರಿಗೆ ಬರೆದ ಕ್ಷಮಾಪಣಾ ಪತ್ರಗಳು ತಡವಾಗಿ ದೊರೆತವು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೋರಾಟದಲ್ಲಿ ಅವರ ಪಾತ್ರವನ್ನು ನಿರ್ಣಯಿಸಲಾಗಿದೆ.

ವಿ.ಡಿ. ಸಾವರ್ಕರ್ ಹಿಂದೂ ಮಹಾಸಭಾ ಅಧ್ಯಕ್ಷರಾಗಿ ಮೊದಲಿಗೆ 1937 ರಲ್ಲಿ ಆಯ್ಕೆಯಾಗಿ ಪುನಃ ಏಳು ಬಾರಿ ಅಧ್ಯಕ್ಷರಾಗಿದ್ದರು. ಮೊದಲಿಗೆ ಹಿಂದುತ್ವ ಸಿದ್ಧಾಂತವನ್ನು ಪ್ರತಿಪಾದಿಸಿದವರು ಸಾವರ್ಕರ್. ಇದೇ ಕಾರಣಕ್ಕೆ ಹಿಂದೂ ಮಹಾಸಭಾವನ್ನು ಋಋಋ ಹತ್ತಿರಕ್ಕೆ ತಂದರು. ಅತ್ಯಂತ ದ್ವೇಷದ ಮತ್ತು ವಂಚನೆಯ ಸ್ವಭಾವವನ್ನು ಹೊಂದಿದ್ದರು.

ಇವರು ಮೂರು ಕೊಲೆಗಳಿಗೆ ಪ್ರೇರಕರಾಗಿದ್ದರು. ಆದರೆ ನಾಸಿಕ್ ಜಿಲ್ಲಾ ಕಲೆಕ್ಟರ್ ಎ.ಟಿ.ಎಂ.ಜಾಕ್ಸನ್ ಕೊಲೆಯಲ್ಲಿ ಮಾತ್ರ 1909 ರಲ್ಲಿ ಶಿಕ್ಷೆಗೆ ಒಳಗಾದರು. ಅದೇ ವರ್ಷ ಇಂಡಿಯನ್ ಆಫೀಸ್‌ನ ಕರ್ಜನ್ ವೈಲಿಯ ಕೊಲೆ ಪ್ರಕರಣದಲ್ಲಿ ತಪ್ಪಿಸಿಕೊಂಡರು. ಗಾಂಧಿ ಕೊಲೆ ಪ್ರಕರಣದಲ್ಲಿ ಸಾಕ್ಷಿಗಳ ಕೊರತೆಯಿಂದ ತಪ್ಪಿಸಿಕೊಂಡರು. ಪ್ರತಿ ಪ್ರಕರಣದಲ್ಲಿ ಕೊಲೆಯ ನಿರ್ದೇಶಕರು ಇವರೇ ಅಗಿದ್ದರು, ಆದರೆ ಕೊಲೆ ಮಾಡಿದವರು ಬೇರೆಯವರಾಗಿದ್ದರು.

ಬ್ರಿಟಿಷರಿಗೆ ವಿನಮ್ರ ಸೇವೆಯ ಭರವಸೆ ಮತ್ತು ಸಂಪೂರ್ಣ ಕ್ಷಮಾಪಣೆಯ ಕಾರಣಕ್ಕೆ ಸಾವರ್ಕರ್ ತುಂಬಾ ಹೆಸರು ಮಾಡಿದರು.

1911 ಜುಲೈ 4 ರಂದು ಅಂಡಮಾನಿನ ಸೆಲ್ಲುಲಾರ್ ಜೈಲಿಗೆ ಇವರನ್ನು ಕರೆ ತರಲಾಯ್ತು. ಕೇವಲ 6 ತಿಂಗಳಲ್ಲಿ ಸಾವರ್ಕರ್ ಮಂಡಿ ಮೇಲೆ ಕೂತು ಬ್ರಿಟಿಷರ ಬಳಿ ಕ್ಷಮಾಪಣೆ ಕೇಳತೊಡಗಿದರು. ತಮ್ಮ ಮೊದಲ ಕ್ಷಮಾಪಣಾ ಪತ್ರದ ಉಲ್ಲೇಖವನ್ನು 1913 ನವೆಂಬರ್ 14 ರಂದು ಬರೆದ ತಮ್ಮ ಎರಡನೇ ಕ್ಷಮಾಪಣಾ ಪತ್ರದಲ್ಲಿ ಮಾಡಿದರು.

ಎರಡನೇ ಕ್ಷಮಾಪಣಾ ಪತ್ರ ಹೀಗಿದೆ:

"ನಾನು 1911 ರಲ್ಲಿ ಕಳುಹಿಸಿದ, ಕ್ಷಮಾಪಣಾ ಪತ್ರವನ್ನು ದಯಾಮಯರಾದ ತಾವು ಪರಿಶೀಲಿಸಿ ಮತ್ತು ಅನುಮೋದಿಸಿ ಅದನ್ನು ಭಾರತ ಸರ್ಕಾರಕ್ಕೆ ರವಾನಿಸಬಹುದೇ ಎಂದು ನಾನು ತಮ್ಮನ್ನು ನೆನಪಿಸಲು ಬಯಸುತ್ತೇನೆ. ಭಾರತದ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳು ಮತ್ತು ಸರ್ಕಾರದ ಅನುಸಂಧಾನ ನೀತಿಗಳು ಮತ್ತೊಮ್ಮೆ ಸಂವಿಧಾನಿಕ ದಾರಿಯನ್ನು ತೆರೆದುಬಿಟ್ಟಿದೆ. ಈಗ ಭಾರತ ಮತ್ತು ಮಾನವತೆಯ ಬಗ್ಗೆ ಸದಾಭಿಪ್ರಾಯ ಇರುವ ಯಾವುದೇ ಮನುಷ್ಯ, 1906–07 ರಲ್ಲಿ ಭಾರತದ ದಯನೀಯ ಮತ್ತು ಉದ್ರೇಕದ ಸ್ಥಿತಿಯಲ್ಲಿ ನಮ್ಮನ್ನು ಶಾಂತಿ ಮತ್ತು ಪ್ರಗತಿಯ ಪಥದಿಂದ ವಂಚಿಸಿದ ಆ ಮುಳ್ಳಿನ ದಾರಿಯನ್ನು ಕಣ್ಣು ಮುಚ್ಚಿ ತುಳಿಯಲಾರ. ಆದ್ದರಿಂದ ಸರ್ಕಾರ ತನ್ನ ಬಹುಮುಖೀಯ ಉಪಯುಕ್ತತೆ ಮತ್ತು ಕರುಣೆಯಿಂದ ನನ್ನನ್ನು ಬಿಡುಗಡೆ ಮಾಡಿದಲ್ಲಿ, ನಾನು ಸಂವಿಧಾನಿಕ ಪ್ರಗತಿಯ ಬಹುದೊಡ್ಡ ಪ್ರತಿಪಾದಕನಾಗಿ ಮತ್ತು ಆ ಪ್ರಗತಿಗೆ ಪ್ರಧಾನ ಷರತ್ತಾದ ಇಂಗ್ಲಿಷ್ ಸರ್ಕಾರಕ್ಕೆ ವಿಧೇಯನಾಗಲ್ಲದೆ ಬೇರೆಯಾಗಿ ಇರಲಾರೆನು".

1913 ಅಕ್ಟೋಬರ್ ನಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್ ನ ಗೃಹಮಂತ್ರಿ ಸರ್ ರೆಜಿನಾಲ್ಡ್ ಕ್ರಾಡೊಕ್, ಜೈಲಿಗೆ ಬಂದಾಗ ಸಾವರ್ಕರ್ ಅವರನ್ನು ಭೇಟಿ ಮಾಡಿದರು. 1913 ನವೆಂಬರ್ 23 ರ ಇವರ ಟಿಪ್ಪಣಿಯಲ್ಲಿ ಸಾವರ್ಕರ್ ರ ಕ್ಷಮಾಪಣಾ ಮನವಿಯನ್ನು ದಾಖಲಿಸಿದರು. 1913 ನವೆಂಬರ್ 14 ರಂದು ಸಾವರ್ಕರ್ ಎರಡನೇ ಕ್ಷಮಾಪಣಾ ಪತ್ರವನ್ನು ಸಲ್ಲಿಸಿದರು: "ಅವರು ಇಷ್ಟ ಪಡುವ ಯಾವುದೇ ಸ್ಥಾನದಲ್ಲಿ ನಾನು ಸರ್ಕಾರಕ್ಕೆ ಸೇವೆ ಸಲ್ಲಿಸಲು ಸಿದ್ದನಿದ್ದೇನೆ... ದಾರಿ ತಪ್ಪಿದ ಮಗನು ಪೋಷಕ ಸರ್ಕಾರದ ಬಾಗಿಲಿಗಲ್ಲದೆ ಬೇರೆಲ್ಲಿಗೆ ಹಿಂದಿರುಗಲು ಸಾಧ್ಯ?"

1920 ಮಾರ್ಚ್ 22 ರಂದು ಗೃಹಮಂತ್ರಿ ಸರ್ ವಿಲಿಯಂ ವಿನ್ಸೆಂಟ್ ಹೇಳಿದ್ದು;

"ಪೋರ್ಟ್ ಬ್ಲೇರ್ ನ ಸೂಪರಿಂಟೆಂಡೆಂಟ್ ಮೂಲಕ ವಿನಾಯಕ ದಾಮೋದರ ಸಾವರ್ಕರ್ ಅವರಿಂದ ಎರಡು (1914 ರಲ್ಲಿ ಒಂದು 1917 ರಲ್ಲಿ ಮತ್ತೊಂದು) ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಮೊದಲನೆಯದರಲ್ಲಿ ಅವರು ಯುದ್ಧ ಸಂದರ್ಭದಲ್ಲಿ ಯಾವುದೇ ಪ್ರಮಾಣದಲ್ಲಿ ಸರ್ಕಾರಕ್ಕೆ ತಮ್ಮ ಸೇವೆಗಳನ್ನು ಸಲ್ಲಿಸಲು ಪ್ರಸ್ತಾಪಿಸಿದ್ದಾರೆ ಮತ್ತು ಎಲ್ಲಾ ರಾಜಕೀಯ ಖೈದಿಗಳಿಗೆ ಸಾಮಾನ್ಯ ಕ್ಷಮಾಧಾನ



ನೀಡುವಂತೆ ಕೋರಿದ್ದಾರೆ. ಎರಡನೇ ಅರ್ಜಿಯು ನಂತರದ ಪ್ರಸ್ತಾವಕ್ಕೆ ಸೀಮಿತವಾಗಿದೆ."

1920 ಮಾರ್ಚ್ 30 ರಂದು, "ತುಂಬಾ ತಡವಾಗುವುದಕ್ಕೆ ಮುಂಚಿತವಾಗಿ ಕೊನೆಯ ಅವಕಾಶವಾಗಿ ತನ್ನ ಕೇಸನ್ನು ಮಂಡಿಸಲು" ಇವರು ಬೇಡಿಕೊಂಡರು.

"ಕುರೋಪತ್ಕಿನ್ ರ ಅಥವಾ ಟಾಲ್ ಸ್ಟಾಯ್ ರವರ ಶಾಂತಿಯುತ ಮತ್ತು ತಾತ್ವಿಕ ಅರಾಜಕತೆಗೂ ನಾನು ಕೊಡುಗೆ ನೀಡಲಾರದಷ್ಟು ಮಿಲಿಟೆಂಟ್ ಪಂಥದ ವಿಧಾನವನ್ನು ನಂಬುವುದರಿಂದ ಬಹಳ ದೂರ ಸರಿದಿದ್ದೇನೆ. ಮತ್ತು ನನ್ನ ಹಿಂದಿನ ಕ್ರಾಂತಿಕಾರಿ ಪ್ರವೃತ್ತಿಗಳಿಗೆ ಸಂಬಂಧಿಸಿ:– ಕ್ಷಮಾಧಾನವನ್ನು ಹೊಂದುವ ಉದ್ದೇಶಕ್ಕಾಗಿ ಈಗ ಮಾತ್ರವಲ್ಲ, ಇದಕ್ಕೂ ಹಲವು ವರ್ಷಗಳ ಹಿಂದೆಯೇ ನಾನು ಮಾಹಿತಿಯನ್ನು ಕೊಟ್ಟಿದ್ದೇನೆ ಮತ್ತು ನನ್ನ ಅರ್ಜಿಗಳಲ್ಲಿ (1914, 1918) ಸಂವಿಧಾನಕ್ಕೆ ಬದ್ಧನಾಗುವ ನನ್ನ ದೃಢ ಉದ್ದೇಶವನ್ನು ಮತ್ತು ಶ್ರೀ ಮಾಂಟೆಗೂ ಅವರಿಂದ ಅದು ರೂಪಿಸಲು ಆರಂಭವಾಗುತ್ತಿದ್ದಂತೆ ಅದರೊಂದಿಗೆ ನಿಲ್ಲುತ್ತೇನೆಂದು ಸರ್ಕಾರಕ್ಕೆ ಬರೆದಿದ್ದೇನೆ. ಅಲ್ಲಿಂದಾಚೆಗೆ ಸುಧಾರಣೆಗಳು ಮತ್ತು ನಂತರದ ಉದ್ಘೋಷಣೆಯು ನನ್ನ ದೃಷ್ಟಿಕೋನವನ್ನು ಗಟ್ಟಿಗೊಳಿಸಿದೆಯಷ್ಟೆ. ಮತ್ತು ಇತ್ತೀಚೆಗೆ ಶಿಸ್ತು ಪಾಲಿಸುವುದರ ಮತ್ತು ಸಾಂವಿಧಾನಿಕ ಬೆಳವಣಿಗೆಯ ಪರವಾಗಿ ನನ್ನ ಬದ್ಧತೆ ಮತ್ತು ಸಿದ್ಧತೆಯನ್ನು ಸಾರ್ವಜನಿಕವಾಗಿ ದೃಢಪಡಿಸಿದ್ದೇನೆ.

ಸಂವಿಧಾನಿಕ ಪಥವನ್ನು ತುಳಿಯುವ ನನ್ನ ಪ್ರಾಮಾಣಿಕ ಉದ್ದೇಶವನ್ನು ವ್ಯಕ್ತಪಡಿಸುವುದರಲ್ಲಿ ನಾನು ಪ್ರಾಮಾಣಿಕನಾಗಿದ್ದೇನೆ ಮತ್ತು ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಪ್ರೀತಿ ಮತ್ತು ಗೌರವ ಮತ್ತು ಪರಸ್ಪರ ಸಹಕಾರದ ಹಸ್ತವನ್ನು ಚಾಚಲು ನಾನು ವಿನೀತನಾಗಿ ಪ್ರಯತ್ನಿಸುತ್ತೇನೆ, ಉದ್ಘೋಷಣೆಯಲ್ಲಿ ಮುಂದೊರಿಸಿದಂತೆ ಇಂತಹ ಸಾಮ್ರಾಜ್ಯವು ನನ್ನ ಹೃದಯಪೂರ್ವಕ ಬೆಂಬಲವನ್ನು ಗೆಲ್ಲುತ್ತದೆ.

ಸರ್ಕಾರ ಸೂಚಿಸುವ ರೀತಿಯಲ್ಲಿ ನಿರ್ದಿಷ್ಟ ಮತ್ತು ಯುಕ್ತವಾದ ಅವಧಿಗೆ ರಾಜಕೀಯದಲ್ಲಿ ಭಾಗವಹಿಸದಿರುವ ಬಗ್ಗೆ ನಾನು ಮತ್ತು ನನ್ನ ಸಹೋದರ ಪ್ರಮಾಣ ಮಾಡಲು ಖಚಿತವಾಗಿ ಸಿದ್ದರಿದ್ದೇವೆ..... ಇದು ಅಥವಾ ಯಾವುದೇ ಪ್ರತಿಜ್ಞೆ, ಉದಾಹರಣೆಗೆ, ಒಂದು ನಿರ್ದಿಷ್ಟ ಪ್ರಾಂತದಲ್ಲಿ ಉಳಿಯುವುದು ಅಥವಾ ನಮ್ಮ ಬಿಡುಗಡೆಯ ನಂತರ ನಿರ್ದಿಷ್ಟ ಅವಧಿಯವರೆಗೆ ಪೊಲೀಸರಿಗೆ ನಮ್ಮ ಚಲನವಲನಗಳನ್ನು ವರದಿ ಮಾಡುವುದು, ಪ್ರಭುತ್ವದ ಸುರಕ್ಷತೆಯನ್ನು ಖಾತ್ರಿಗೊಳಿಸಲು ಪ್ರಾಮಾಣಿಕವಾಗಿ ಉದ್ದೇಶಿಸಿದ ಇಂತಹ ಯಾವುದೇ ಯುಕ್ತವಾದ ಷರತ್ತುಗಳನ್ನು ನಾನು ಮತ್ತು ನನ್ನ ಸಹೋದರ ಸಂತೋಷದಿಂದ ಒಪ್ಪುತ್ತೇವೆ".

ತನ್ನ ಬಿಡುಗಡೆಗೆ 1924 ರಲ್ಲಿ ಸರ್ಕಾರ ವಿಧಿಸಿದ ಎರಡು ಷರತ್ತುಗಳನ್ನು ಸಾವರ್ಕರ್ ಒಪ್ಪಿಕೊಂಡು ನೀಡಿದ ಹೇಳಿಕೆ ಏನೆಂದರೆ:

"ನನ್ನ ವಿಚಾರಣೆಯು ಸಮರ್ಪಕವಾಗಿತ್ತು ಮತ್ತು ನ್ಯಾಯಯುತವಾದ ಶಿಕ್ಷೆಯಾಗಿತ್ತು ಎಂಬುದನ್ನು ಈ ಮೂಲಕ ದೃಢೀಕರಿಸುತ್ತೇನೆ. ನಾನು ಕಳೆದುಹೋದ ಹಿಂದಿನ ದಿನಗಳಲ್ಲಿ ಅನುಸರಿಸಿದ ಹಿಂಸೆಯನ್ನು ಹೃದಯಪೂರ್ವಕವಾಗಿ ತ್ಯಜಿಸುತ್ತೇನೆ, ಮತ್ತು ನನ್ನ ಸಂಪೂರ್ಣ ಸಾಮರ್ಥ್ಯಕ್ಕನುಗುಣವಾಗಿ ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ, ಮತ್ತು ಭವಿಷ್ಯದಲ್ಲಿ ನನಗೆ ನೀಡಿರುವ ಅವಕಾಶವನ್ನು ಅನುಸರಿಸಿ ಸುಧಾರಣೆಗಳನ್ನು ಯಶಸ್ವಿಗೊಳಿಸಲು ಸಿದ್ಧನಿದ್ದೇನೆ".

ಇದೇ ಕಾಲಘಟ್ಟದ ನೂರಾರು ಕ್ರಾಂತಿಕಾರಿಗಳು ಅಂಡಮಾನ್ ಜೈಲಿನಲ್ಲಿ ಬ್ರಿಟಿಷರ ಕ್ರೂರ ಹಿಂಸೆಗೆ ಶರಣಾಗದೆ, ಕ್ಷಮಾಪಣೆ ಕೇಳದೆ ವಿರೋಚಿತ ಮರಣ ಅಪ್ಪಿದರು. ಬಲಿದಾನ ಗೈದು ಅಮರರಾದರು. ಇದೇ ಸಾಲಿನಲ್ಲಿ ಭಗತ್ ಸಿಂಗ್, ಸುಖದೇವ್, ರಾಜ್ ಗುರು, ಅಷ್ಫಾಖುಲ್ಲಾ ಖಾನ್, ರಾಮ್ ಪ್ರಸಾದ್ ಬಿಸ್ಮಿಲ್ ಮುಂತಾದ ನೂರಾರು ಕ್ರಾಂತಿಕಾರಿಗಳು ನೇಣಿಗೆ, ಬಂದೂಕಿಗೆ ಎದೆಯೊಡ್ಡಿ ಭಾರತಾಂಬೆಗೆ ತಮ್ಮ ಪ್ರಾಣವನ್ನು ಬಲಿದಾನಗೈದರು.

ತಮ್ಮ ಕ್ಷಮಾಪಣಾ ಪತ್ರಗಳಲ್ಲಿ ಬ್ರಿಟಿಷರಲ್ಲಿ ಶರಣಾಗತಿಯನ್ನು ಬಯಸಿದ ಸಾವರ್ಕರ್ ಯಾರೊಂದಿಗೆ ಹೋಲಿಕೆಯಾಗುತ್ತಾರೆ? ಚರಿತ್ರೆಯ ಪುಟಗಳು ನಿಮ್ಮ ಮುಂದಿವೆ.

ಈ ಹಿಂದೆ ದೇಶದ ಶ್ರೀಮಂತರು, ಕಾರ್ಪೋರೇಟ್ ಕಂಪನಿಗಳಿಂದ ವಸೂಲಿ ಮಾಡುತ್ತಿದ್ದ "ಸಂಪತ್ತು ತೆರಿಗೆ"ಯನ್ನು ಮತ್ತೆ ಜಾರಿಗೆ ತಂದು, ಕನಿಷ್ಠ ಶೇ. 2 ರಷ್ಟು ತೆರಿಗೆಯನ್ನು ವಸೂಲಿ ಮಾಡಬೇಕು.

12. ಕೊರೊನಾ ಲಾಕ್‌ಡೌನ್ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಂಡು ಜನರು ಮತ್ತು ಜನಚಳುವಳಿಗಳ ಮೇಲಿನ ದಮನಕಾರಿ ಕ್ರಮಗಳನ್ನು ಕೂಡಲೇ ಕೈಬಿಡಬೇಕು.

ಕೇಂದ್ರ ಸಮಿತಿ ಸದಸ್ಯರು, ಎಐಕೆಎಸ್‌ಸಿಸಿ:
ಕೋಡಿಹಳ್ಳಿ ಚಂದ್ರಶೇಖರ್, ಕವಿತಾ ಕುರುಗಂಟಿ,
ರಾಜ್ಯ ಸಮಿತಿ ಸದಸ್ಯರು, ಎಐಕೆಎಸ್‌ಸಿಸಿ:
ಬಡಗಲಪುರ ನಾಗೇಂದ್ರ, ನಿತ್ಯಾನಂದಸ್ವಾಮಿ, ಕುಮಾರ ಸಮತಲ, ಪಿ.ವಿ. ಲೋಕೇಶ್, ಚಾಮರಸ ಮಾಲಿ ಪಾಟೀಲ್, ಚಂದ್ರಪ್ಪ ಹೊಸ್ಕೇರಾ ದಿವಾಕರ್, ಯು. ಬಸವರಾಜ, ಪಿ. ಪ್ರಸನ್ನ ಕುಮಾರ್.
ಜಿ.ಸಿ. ಬಯ್ಯಾರೆಡ್ಡಿ ಸಂಚಾಲಕರು, ಎಐಕೆಎಸ್‌ಸಿಸಿ.

ರೈತರು ಹಾಗೂ ಕೃಷಿ ಭೂಮಿ ಮೇಲಿನ...... ಪುಟ 3 ರಿಂದ

ಮಾಡಲಾಗಿದೆ. ಇದರಂತೆ ಕೃಷಿ ಭೂಮಿಗಳ ಭೂ ಪರಿವರ್ತನೆಯು,ರಾಜ್ಯದಾದ್ಯಂತ ವೇಗವನ್ನು ಪಡೆಯಲಿದೆ. ಭೂಸುಧಾರಣಾ ಕಾಯ್ದೆ–1961 ಇತರ ಅಂಶಗಳಲ್ಲಿ ಏನೇ ಹೇಳಿದ್ದರೂ, ಕಲಂ 109 ಮಾತ್ರ ಕೃಷಿಯೇತರ ಉದ್ದೇಶಗಳಿಗೆ ಭೂಮಿಯನ್ನು ರೈತರಿಂದ ನೇರವಾಗಿ ಖರೀದಿಸಲು ಅವಕಾಶಗಳನ್ನು ಒದಗಿಸುತ್ತದೆ. ಇದರಂತೆ, ಕೈಗಾರಿಕೆ,ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ, ದೇವಾಲಯಗಳಿಗೆ, ಹೂ,ಹಣ್ಣು ಭೇಸಾಯಕ್ಕೆ ಒಟ್ಟಾಗಿ, ಸುಮಾರು 55 ಘಟಕಗಳಷ್ಟು ಅಂದರೇ 594 ಎಕರೆ ಜಮೀನು ಯಾರು ಬೇಕಾದರೂ ಖರೀದಿಸಬಹುದಾಗಿದೆ. ಜಿಲ್ಲಾಧಿಕಾರಿಗಳು ಸದರಿ ಅರ್ಜಿಗಳ ಆಧಾರದಲ್ಲಿ ಭೂ ಪರಿವರ್ತನೆ ಮಾಡಲಿದ್ದಾರೆ. ಆದರೇ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೂ ಪರಿವರ್ತನೆಯ ಕೆಲಸ ವಿಳಂಬವಾಗುವುದನ್ನು ತಡೆಯಲು ಮತ್ತು ಅದನ್ನು ವೇಗವರ್ಧಕಗೊಳಿಸಲು ತಿದ್ದುಪಡಿ ಮಾಡಲಾಗಿದೆ. ಅದರಂತೆ ಇಂತಹ ಅರ್ಜಿಗಳನ್ನು 30 ದಿನದೊಳಗೆ ವಿಲೇ ಮಾಡಬೇಕು ಇಲ್ಲವಾದಲ್ಲಿ ಅನುಮತಿಸಲಾಗಿದೆಯೆಂದು ಪರಿಗಣಿಸಲಾಗುತ್ತದೆ. ಈ ತಿದ್ದುಪಡಿಯು ಮುಂದೆ ಭೂ ಪರಿವರ್ತನೆಗಳನ್ನು ವೇಗಗೊಳಿಸಲಿದೆ. ಇದು ವ್ಯಾಪಕವಾಗಿ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಲಿದೆ ಮಾತ್ರವಲ್ಲಾ, ರಾಜ್ಯದ ಆಹಾರದ ಸ್ವಾವಲಂಬನೆಯನ್ನು ದುರ್ಬಲಗೊಳಿಸಿ ಪರಾವಲಂಬಿತನವನ್ನು ಉಂಟು ಮಾಡಲಿದೆ ಯೆಂದು, ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ.

ಅದೇ ರೀತಿ, ಈ ಯಾವುದೇ ಕೃಷಿಯೇತರ ಜಮೀನುಗಳಲ್ಲಿ ಉದ್ದೇಶಕ್ಕನುಸಾರ ಅಭಿವೃದ್ಧಿ ಮಾಡಲು 7 ವರ್ಷಗಳಲ್ಲಿ ಸಾಧ್ಯವಾಗದಿದ್ದರೇ ಸದರಿ ಉದ್ದೇಶಕ್ಕೆ ಬೇರೊಬ್ಬರಿಗೆ ಪರಿವರ್ತಿತ ಜಮೀನನ್ನು ಮಾರಾಟ ಮಾಡಲು ಅವಕಾಶ ನೀಡುವ ಮತ್ತೊಂದು ತಿದ್ದುಪಡಿಯು, ಲಾಭಕ್ಕಾಗಿ ಮಾರಾಟ ಮಾಡುವ ದಂಧೆಯನ್ನು ಹೆಚ್ಚಿಸಲಿದೆ. ಅದಾಗಲೇ 2014 ರಲ್ಲಿ ಮಾಡಿದ ಸದರಿ ಕಲಂ 109 ರ ತಿದ್ದುಪಡಿಯಂತೆ ಉದ್ದೇಶಿತ ಸಂಸ್ಥೆಯನ್ನು ಪಡೆದ ಜಮೀನಿನಲ್ಲಿ ನಿರ್ಮಿಸಲಾಗದಿದ್ದಲ್ಲಿ ಬೇರೊಂದು ಉದ್ದೇಶಕ್ಕೆ ಬಳಸಲು ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡಿದೆ.

ಇದೆಲ್ಲವೂ, ರಾಜ್ಯದ ಅಭಿವೃದ್ದಿಗೆ ಪೂರಕಾಗಿಲ್ಲ ಬದಲಿಗೆ, ರೈತರು ಹಾಗೂ ಕೃಷಿ ಭೂಮಿಯ ಮೇಲೆ, ಭೂಮಾಲಕ, ಬಂಡವಾಳದಾರರ, ಕಾರ್ಪೋರೇಟ್ ಕಂಪನಿಗಳ ಲೂಟಿಕೋರತನದ ದೌರ್ಜನ್ಯವನ್ನು ಹೆಚ್ಚಿಸಲಿದ್ದು ಇದು ಸರಕಾರದ ಜವಾಬ್ದಾರಿ ಹೀನ ನಡೆಯಾಗಿದೆಯೆಂದು ಸಂಘ ಟೀಕಿಸಿದೆ. ಕೂಡಲೆ ತಿದ್ದುಪಡಿ ಕಾಯ್ದೆಯನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿದೆ.

ಇಂತಹ ದೌರ್ಜನ್ಯವನ್ನು ಪ್ರತಿರೋಧಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ರಾಜ್ಯದ ಜನತೆಗೆ ಮನವಿ ಮಾಡುತ್ತದೆ.

ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು, ಯು. ಬಸವರಾಜ ಪ್ರಧಾನ ಕಾರ್ಯದರ್ಶಿ (23.05.2020)

ಮರಳಿ 'ಮಣ್ಣಿಗೆ'?!

ಲಾಕ್ ಡೌನ್ ಮತ್ತು ರಿವರ್ಸ್ ವಲಸೆ: ಬಿಕ್ಕಟ್ಟು ಮತ್ತು ಪರಿಹಾರ

ದೇಶ ವಿಭಜನೆಯ ನಂತರ ಮೊಟ್ಟ ಮೊದಲ ಬಾರಿಗೆ ವಲಸೆ ಕಾರ್ಮಿಕರು ಈ ರಿವರ್ಸ್ ವಲಸೆಯ ಸಂದರ್ಭದಲ್ಲಿ ಕಂಡುಬಂದ ಅಪಾರ ನೋವು, ಶೋಷಣೆಯ ಅಪಘಾತಗಳಿಗೆ ತುತ್ತಾಗಿ, ನಿತ್ರಾಣದಿಂದ, ಹಸಿವಿನ ಕಾರಣಕ್ಕೆ ಪ್ರಾಣ ಬಿಟ್ಟರು. 24 ಮೇ 2020ರ ವರೆಗಿನ ಮಾಹಿತಿಯ ಪ್ರಕಾರ ಈ ಲಾಕ್‌ಡೌನ್‌ನಿಂದಾಗಿ ಸುಮಾರು 670 ವಲಸೆ ಕಾರ್ಮಿಕರು ಮೃತರಾಗಿದ್ದಾರೆ. 27 ಮೇ 2020ರಂದು ಪ್ರಕಟವಾದ ಒಂದು ವಿಡಿಯೋದಲ್ಲಿ ಬಿಹಾರ್‌ನ ಮಜಫ್ಫರ್‌ಪುರದ ರೈಲು ನಿಲ್ದಾಣದಲ್ಲಿ ಎರಡು ವರ್ಷದ ಮುಗುವೊಂದು ತನ್ನ ಮೃತ ತಾಯಿಯ ದೇಹವನ್ನು ಎಚ್ಚರಿಸಲು ಪ್ರಯತ್ನಿಸುತ್ತಿದ್ದ ದೃಶ್ಯ ಅತ್ಯಂತ ದಾರುಣವಾಗಿತ್ತು. ಇದು ಭಾರತೀಯರ ಮನುಷ್ಯತ್ವವೇ ಸತ್ತುಹೋದ ಕ್ಷಣಗಳಾಗಿತ್ತು.

ಈ ಲಾಕ್‌ಡೌನ್ ಕಾರಣಕ್ಕೆ ಉದ್ಯೋಗ ಕಳೆದುಕೊಂಡ ಕೋಟ್ಯಾಂತರ ಜನಸಂಖ್ಯೆಯ ವಲಸೆ ಕಾರ್ಮಿಕರು ತಮ್ಮ ಗ್ರಾಮಗಳಿಗೆ ಮರಳುತ್ತಿದ್ದಾರೆ. ರಿವರ್ಸ್ ವಲಸೆ ಬಂದ ಕೋಟ್ಯಾಂತರ ಕಾರ್ಮಿಕರಿಗೆ ಸೂಕ್ತ ಉದ್ಯೋಗಗಳನ್ನು ಸೃಷ್ಟಿಸಬೇಕಾಗುತ್ತದೆ. ಇದರಲ್ಲಿ ಮನರೇಗದ ಪಾತ್ರ ಬಹು ಮುಖ್ಯವಾಗಿದೆ. ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸಲು ಪರ್ಯಾಯ ಉದ್ಯೋಗಗಳನ್ನು ಸೃಷ್ಟಿಸಬೇಕಾಗಿದೆ.

ಬಿ. ಶ್ರೀಪಾದ ಭಟ್

'ದೇಶದ ಬಲು ದೊಡ್ಡ ಜನಸಂಖ್ಯೆಯಲ್ಲಿರುವ ವಲಸೆ ಕಾರ್ಮಿಕರ ಕುರಿತಂತೆ ಭಾರತ ಸರಕಾರದ ನೀತಿಯು ನಿರ್ಲಕ್ಷ್ಯ, ಕೀಳು ಮನಸ್ಥಿತಿಯಿಂದ ಕೂಡಿದೆ, ಇವರ ಬದುಕು ಸದಾ ಅಭದ್ರತೆಯಿಂದ, ಆತಂಕದಿಂದ ಕೂಡಿರುತ್ತದೆ' ಎನ್ನುವ ವಾಸ್ತವ ಈಗಿನ ಲಾಕ್‌ಡೌನ್ ದಿನಗಳಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. ಯಾವುದೇ ಪೂರ್ವ ತಯಾರಿ ಇಲ್ಲದ, ಮುನ್ಸೂಚನೆ ಇಲ್ಲದೆ ಮೋದಿಯವರು ಹೇರಿದ ಈ ದಿಢೀರ್ ಲಾಕ್‌ಡೌನ್‌ನ ಅರವತ್ತು ದಿನಗಳಲ್ಲಿ ಉದ್ಯೋಗ ಕಳೆದುಕೊಂಡು ಹಸಿವಿನಿಂದ ಬೀದಿಗೆ ಬಂದ ವಲಸೆ ಕಾರ್ಮಿಕರಿಗೆ ಸರಕಾರದಿಂದ ಯಾವುದೆ ಬೆಂಬಲವಾಗಲಿ, ಸಾಂತ್ವನವಾಗಲಿ ದೊರಕಲಿಲ್ಲ. ಪ್ರಭುತ್ವದಿಂದ ಸಂಪೂರ್ಣ ನಿರ್ಲಕ್ಷ್ಯಕ್ಕೆ, ಅನಾದರಕ್ಕೆ ಒಳಗಾದ ಸುಮಾರು 40 ಕೋಟಿ ಶ್ರಮಿಕರು ಅನಾಥರಾದರು. ಬೆಳಗಾಗುವಷ್ಟರಲ್ಲಿ ಕೆಲಸ ಕಳೆದುಕೊಂಡು ನಗರಗಳಲ್ಲಿ ಬದುಕಲು ಯಾವುದೇ ದಾರಿ ಕಾಣದಾಯಿತು. ಮರಳಿ ಅವರ ಸ್ವಗ್ರಾಮಗಳಿಗೆ ಕಳಿಸುವ ಜವಾಬ್ದಾರಿಯಿಂದ ನುಣುಚಿಕೊಂಡ ಸರಕಾರಗಳು ತಡವಾಗಿ ಸ್ಪಂದಿಸಿದವು. ಆದರೆ ದಿನನಿತ್ಯ ಬದುಕಿಗೆ ಯಾವುದೇ ಆಸರೆ ಇಲ್ಲದೆ ವಲಸೆ ಕಾರ್ಮಿಕರು ಕಾಲ್ನಡಿಗೆಯಲ್ಲಿ ಸಾವಿರಾರು ಕಿ.ಮೀ. ದೂರದ ತಮ್ಮ ಊರುಗಳಿಗೆ ಮರಳತೊಡಗಿದರು. ದೇಶ ವಿಭಜನೆಯ ನಂತರ ಮೊಟ್ಟ ಮೊದಲ ಬಾರಿಗೆ ಈ ರಿವರ್ಸ್ ವಲಸೆಯ ಸಂದರ್ಭದಲ್ಲಿ ಕಂಡುಬಂದ ಅಪಾರ ನೋವು, ಶೋಷಣೆಯ ಅಪಘಾತಗಳಿಗೆ ತುತ್ತಾಗಿ, ನಿತ್ರಾಣದಿಂದ, ಹಸಿವಿನ ಕಾರಣಕ್ಕೆ ಪ್ರಾಣ ಬಿಟ್ಟರು. 24, ಮೇ 2020ರವರೆಗಿನ ಮಾಹಿತಿಯ ಪ್ರಕಾರ ಈ ಲಾಕ್‌ಡೌನ್‌ನಿಂದಾಗಿ ಸುಮಾರು 670 ವಲಸೆ ಕಾರ್ಮಿಕರು ಮೃತರಾಗಿದ್ದಾರೆ. ಆ ಎರಡು ತಿಂಗಳ ಹಸಿವಿನ ಆ ಭೀಕರತೆ ಬಡಕುಟುಂಬಗಳಿಗೆ ಸಹಿಸಲು ಸಾಧ್ಯವಿರಲಿಲ್ಲ.

ದಾರುಣ ಚಿತ್ರಗಳು

ಹೊಟ್ಟೆ ಪಾಡಿಗೆ ಉದ್ಯೋಗವನ್ನರಸಿ ನಗರ, ಪಟ್ಟಣಗಳಿಗೆ ವಲಸೆ ಬಂದ ಈ ಕಾರ್ಮಿಕರಿಗೆ ಈ ಲಾಕ್‌ಡೌನ್ ಸಂದರ್ಭದಲ್ಲಿ ಅವರ ಮಾಲೀಕರು ನೆರವಿಗೆ ಬರಲಿಲ್ಲ. ಶೇಕಡಾ 2% ಪ್ರಮಾಣದ ಮಾಲೀಕರನ್ನು ಹೊರತುಪಡಿಸಿ ಮಿಕ್ಕವರೆಲ್ಲ ವಲಸೆ ಕಾರ್ಮಿಕರನ್ನು ನಡುನೀರಲ್ಲಿ ಕೈಬಿಟ್ಟರು. ಕನಿಷ್ಠ ಒಂದು ವಾರ ಮುನ್ಸೂಚನೆ ಕೊಟ್ಟು ಲಾಕ್‌ಡೌನ್ ಹೇರಿದ್ದರೆ ಮತ್ತು ಅವರ ಜೀವನೋಪಾಯಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಿದ್ದರೆ ಅಥವಾ ಅವರ ಊರುಗಳಿಗೆ ಮರಳುವ ವ್ಯವಸ್ಥೆ ಮಾಡಿದ ನಂತರ ದಿಗ್ಬಂದನ ಹೇರಿದ್ದರೆ ಈ ಪ್ರಮಾಣದ ಅನಾಹುತ ಸಂಭವಿಸುತ್ತಿರಲಿಲ್ಲ. ಆದರೆ ಯಾವುದೇ ಮಾನವೀಯತೆ, ಸಾಮಾನ್ಯ ಜ್ಞಾನವನ್ನು ಕಳೆದುಕೊಂಡ ಮೋದಿ ಸರಕಾರದ ವಿವೇಚನರಹಿತ ನಿರ್ಧಾರದಿಂದ ಲಕ್ಷಾಂತರ ಕುಟುಂಬಗಳು ನರಳುವಂತಾಯಿತು. ಅಜೀಂ ಪ್ರೇಮ್‌ಜೀ ವಿವಿ ನಡೆಸಿದ ಸಮೀಕ್ಷೆ ಪ್ರಕಾರ ಈ ಲಾಕ್‌ಡೌನ್ ಕಾಲದಲ್ಲಿ ಶೇಕಡಾ 74% ಪ್ರಮಾಣದ ಜನಸಂಖ್ಯೆ ಹಿಂದಿಗಿಂತಲೂ ಕಡಿಮೆ ಊಟ ಮಾಡುತ್ತಿದ್ದಾರೆ. ಶೇಕಡಾ 80% ಪ್ರಮಾಣದ ಜನಸಂಖ್ಯೆಗೆ ಯಾವುದೇ ಆದಾಯವಿಲ್ಲ. ಜೀನ್ ಡ್ರೀಜ್ ಅವರ ಪ್ರಕಾರ ಅಂದಾಜು 50 ಕೋಟಿ ಜನ ಪಡಿತರ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ಪಡಿತರ ದೊರಕಿರುವ ಕುಟುಂಬಗಳಿಗೂ ಅದರಿಂದ ಹಸಿವನ್ನು ನೀಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಅವರಿಗೆ ಪೌಷ್ಟಿಕಾಂಶದ ಆಹಾರ ದೊರಕಲ್ಲಿಲ್ಲ.



ಬಿಹಾರ್‌ನ ಮಜಫ್ಫರ್‌ಪುರದ ರೈಲು ನಿಲ್ದಾಣದಲ್ಲಿ ಎರಡು ವರ್ಷದ ಮುಗುವೊಂದು ತನ್ನ ಮೃತ ತಾಯಿಯ ದೇಹವನ್ನು ಎಚ್ಚರಿಸಲು ಪ್ರಯತ್ನಿಸುತ್ತಿದ್ದ ದಾರುಣ ದೃಶ್ಯ

ಈ ದುರಂತದ ಕುರಿತಾದ ಟೀಕೆಯ ನಂತರ ಕಡೆಗೂ ಎಚ್ಚೆತ್ತುಕೊಂಡ ಸರಕಾರ ಲಾಕ್‌ಡೌನ್ ಹೇರಿದ ಒಂದು ತಿಂಗಳ ನಂತರ 29, ಎಪ್ರಿಲ್ ರಂದು ಇವರ ಪ್ರಯಾಣಕ್ಕೆ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿತಾದರೂ ಅದು ತುಂಬಾ ತಡವಾಗಿತ್ತು. ರಾಜ್ಯಗಳೊಂದಿಗೆ ಸಮಾಲೋಚಿಸದೆ ಏಕಪಕ್ಷೀಯವಾಗಿ ರೈಲು ಪ್ರಯಾಣದ ವ್ಯವಸ್ಥೆ ಮಾಡಿದ್ದು ಸಂಪೂರ್ಣ ಅರಾಜಕತೆಗೆ ಕಾರಣವಾಯಿತು. ರೈಲು ಪ್ರಯಾಣದಲ್ಲಿಯೂ ಕಾರ್ಮಿಕರಿಗೆ ಊಟದ, ನೀರಿನ ವ್ಯವಸ್ಥೆಯಿರಲಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ 48 ಗಂಟೆಗಳಲ್ಲಿ ಬಾಯಾರಿಕೆ, ದಾಹ ಮತ್ತು ಹಸಿವಿನ ಕಾರಣಕ್ಕೆ 8 ಜನ ರೈಲಿನಲ್ಲಿ ಮೃತರಾದರು. ಸುಮಾರು 30 ಜನ ಈ ಪ್ರಯಾಣದಲ್ಲಿ ತೀರಿಕೊಂಡಿದ್ದಾರೆ. 27 ಮೇ 2020ರಂದು ಪ್ರಕಟವಾದ ಒಂದು ವಿಡಿಯೋದಲ್ಲಿ ಬಿಹಾರ್‌ನ ಮಜಫ್ಫರ್‌ಪುರದ ರೈಲು ನಿಲ್ದಾಣದಲ್ಲಿ ಎರಡು ವರ್ಷದ ಮುಗುವೊಂದು ತನ್ನ ಮೃತ ತಾಯಿಯ ದೇಹವನ್ನು ಎಚ್ಚರಿಸಲು ಪ್ರಯತ್ನಿಸುತ್ತಿದ್ದ ದೃಶ್ಯ ಅತ್ಯಂತ ದಾರುಣವಾಗಿತ್ತು. ಇದು ಭಾರತೀಯರ ಮನುಷ್ಯತ್ವವೇ ಸತ್ತುಹೊದ ಕ್ಷಣಗಳಾಗಿತ್ತು. ಆದರೆ ಸರಕಾರದ ಭಂಡತನ ಯಾವ ಮಟ್ಟದಲ್ಲಿತ್ತೆಂದರೆ 'ಈ ಸಾವುಗಳು ಅವರ ಅನಾರೋಗ್ಯದ ಕಾರಣದಿಂದಾಗಿವೆ' ಎನ್ನುವಂತಹ ಹೇಳಿಕೆ ಕೊಟ್ಟಿದ್ದು ವರದಿಯಾಯಿತು.

ವಲಸೆ ಕಾರ್ಮಿಕರ ಬವಣೆಯನ್ನು ವಿವರಿಸಿ ತಮ್ಮ ಊರುಗಳಿಗೆ ತೆರಳಲು ಅವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು, ಉಚಿತ ಪ್ರಯಾಣದ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಸರಕಾರಗಳಿಗೆ ನಿರ್ದೇಶನ ಕೊಡಿ ಎಂದು ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಆರಂಭದಲ್ಲಿ ಸುಪ್ರೀಂ ಕೋರ್ಟ ತಿರಸ್ಕರಿಸಿತು. ಅದು ತನಗೆ ಸಂಬಂಧಿಸಿದ್ದಲ್ಲವೆಂದೂ ಹೇಳಿ ಕೈ ತೊಳೆದುಕೊಂಡಿತು. ಇದು ಸುಪ್ರೀಂ ಕೋರ್ಟಿನ ಕರಾಳ ದಿನಗಳೆಂದು ಸಾಬೀತಾಯಿತು. ಆದರೆ ಕಡೆಗೂ ಎಚ್ಚೆತ್ತುಕೊಂಡ ಸುಪ್ರೀಂಕೋರ್ಟ ತಾನೇ (ಸುವೋ-ಮೊಟೋ) ಅಪಿಲು ದಾಖಲಿಸಿಕೊಂಡು ವಿಚಾರಣೆ ನಡೆಸಿತು. 28 ಮೇ 2020ರಂದು ವಲಸೆ ಕಾರ್ಮಿಕರಿಗೆ ಉಚಿತ ಪ್ರಯಾಣ ಕಲ್ಪಿಸಬೇಕು, ಉಚಿತ ಆಹಾರ ಕೊಡಬೇಕು ಎಂದು ತೀರ್ಪು ನೀಡಿತು. ಆದರೆ ಎರಡು ತಿಂಗಳು ತಡವಾಗಿ ಬಂದ ಈ ತೀರ್ಪಿನಿಂದ ಅಂತಹ ಸಾಂತ್ವನ, ಆರೈಕೆ ದೊರಕಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟಿನ ಈ ವಿಳಂಬ ನೀತಿ ವಲಸೆ ಕಾರ್ಮಿಕರಿಗೆ ಸಾಕಷ್ಟು ಹಾನಿ ಮಾಡಿದೆ.

ರಿವರ್ಸ್ ವಲಸೆಯ ಬಿಕ್ಕಟ್ಟುಗಳು

ವಿಶ್ವ ಬ್ಯಾಂಕ್ ಆರ್ಥಿಕ ತಜ್ಞ, ಸುಪ್ರಿಯೋ '2011ರ ಜನಗಣತಿಯ ಪ್ರಕಾರ ಭಾರತದೊಳಗಡೆ 45 ಕೋಟಿ ಜನ ಉದ್ಯೋಗವನ್ನರಸಿ ನಗರ ಮತ್ತು ಪಟ್ಟಣಗಳಿಗೆ ವಲಸೆ ಬಂದರು. ಅದಕ್ಕೂ ಹಿಂದೆ 2001ರಲ್ಲಿ 30 ಕೋಟಿ ಜನ ವಲಸೆ ಬಂದರು' ಎಂದು ಹೇಳುತ್ತಾರೆ. ಇದೇ ಪ್ರಮಾಣವನ್ನು ಆಧರಿಸುವುದಾದರೆ 2018-19ರಲ್ಲಿ ಅಂದಾಜು 50 ಕೋಟಿ ಜನಸಂಖ್ಯೆ ವಲಸೆ ಬಂದಿರುವ ಸಾಧ್ಯತೆಗಳಿವೆ. ಅನೌಪಚಾರಿಕ ವಲಯದಲ್ಲಿ ಸುಮಾರು 90% ಪ್ರಮಾಣದ ಜನಸಂಖ್ಯೆ ಕೆಲಸ ಮಾಡುತ್ತಿದ್ದಾರೆ. ಈ ಲಾಕ್‌ಡೌನ್ ಕಾರಣಕ್ಕೆ ಅವರ ಬದುಕು ಛಿದ್ರಗೊಂಡಿದೆ. ಅದೇ ಸಂದರ್ಭದಲ್ಲಿ ಭಾರತದ ನಗರಗಳಲ್ಲಿ ಉದ್ಯೋಗದ ಪ್ರಮಾಣ 40.9% ಮತ್ತು ಗ್ರಾಮೀಣ ಭಾಗಗಳಲ್ಲಿ 33% ಪ್ರಮಾಣದಷ್ಟಿತ್ತು. ಕೋವಿಡ್ ಪೂರ್ವದಲ್ಲಿ 2019ರಲ್ಲಿ ನಿರುದ್ಯೋಗದ ಪ್ರಮಾಣ ಶೇಕಡಾ 12% ಪ್ರಮಾಣದಲ್ಲಿತ್ತು. ಕೋವಿಡ್ ನಂತರದ ಲಾಕ್‌ಡೌನ್ ಸಂದರ್ಭದಲ್ಲಿ ನಿರುದ್ಯೋಗದ ಪ್ರಮಾಣ ಮೇ ತಿಂಗಳಲ್ಲಿ ಶೇಕಡಾ 27% ಪ್ರಮಾಣಕ್ಕೇರಿತ್ತು. ಈ ಲಾಕ್‌ಡೌನ್ ಕಾರಣಕ್ಕೆ ಸುಮಾರು 12 ಕೋಟಿ ಉದ್ಯೋಗ ನಷ್ಟವಾಗಿದೆ ಎಂದು ಸಿಎಮ್‌ಐಇ ವರದಿ ಮಾಡಿದೆ. 4.9 ಕೋಟಿ ಜನಸಂಖ್ಯೆ ತೀವ್ರ ಹಸಿವಿನ ಬಾಧೆಯಿಂದ ನರಳುತ್ತಿದ್ದಾರೆ. ಇದು ಮುಂದಿನ ದಿನಗಳಲ್ಲಿ ಸಾವಿಗೆ ಕಾರಣವಾಗಬಹುದು ಎನ್ನುವ ಭೀತಿ ಮೂಡಿದೆ. ವಿಶ್ವ ಬ್ಯಾಂಕ್‌ನ ಅನುಸಾರ 10 ಕೋಟಿ ಜನಸಂಖ್ಯೆ ಬಡತನ ರೇಖೆಗಿಂತ ಕೆಳಗೆ ತಳ್ಳಲ್ಪಡುತ್ತಾರೆ. ಇವರ ಆದಾಯವು ಸರಕಾರವೇ ನಿಗದಿಪಡಿಸಿದ ಪ್ರತಿ ದಿನ 224/ ರೂಗಿಂತಲೂ ಕಡಿಮೆಯಾಗಲಿದೆ. ಫೈನಾನ್ಸ್ ಎಕ್ಸ್‌ಪ್ರೆಸ್‌ನಲ್ಲಿ ವರದಿಯಾದಂತೆ ಕೋವಿಡ್ ಪೂರ್ವದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆ 81 ಕೋಟಿ ಇತ್ತು (ಶೇಕಡಾ 60% ಪ್ರಮಾಣ) ಕೋವಿಡ್ ನಂತರ ಅದು 92 ಕೋಟಿಗೆ ಏರಿಕೆಯಾಗುವ ಸಂಭವವಿದೆ (ಶೇಕಡಾ 68% ಪ್ರಮಾಣ)

ಈ ಲಾಕ್‌ಡೌನ್ ಕಾರಣಕ್ಕೆ ಉದ್ಯೋಗ ಕಳೆದುಕೊಂಡ ಕೋಟ್ಯಾಂತರ ಜನಸಂಖ್ಯೆಯ ವಲಸೆ ಕಾರ್ಮಿಕರು ತಮ್ಮ ಗ್ರಾಮಗಳಿಗೆ ಮರಳುತ್ತಿದ್ದಾರೆ. ಇಂಡಿಯಾ ಸ್ಪೆಂಡ್ ಪತ್ರಿಕೆಯಲ್ಲಿ "2017ರ ಎನ್‌ಎಎಸ್ (ರಾಷ್ಟ್ರೀಯ ಅಕೌಂಟ್ ಅಂಕಿಅಂಶಗಳು) ಮತ್ತು 2017-18ರ ಲೇಬರ್ ಸಮೀಕ್ಷೆಯ ಅನುಸಾರ ಶೇಕಡಾ 70% ಪ್ರಮಾಣದ ಜನಸಂಖ್ಯೆ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದಾರೆ. 2015-16ರಲ್ಲಿ ಗ್ರಾಮೀಣ ಭಾಗದ ಸರಾಸರಿ ವಾರ್ಷಿಕ ಆದಾಯ 40,928 ರೂ (ತಿಂಗಳಿಗೆ 3410, ದಿನಕ್ಕೆ 110 ರೂ) ನಗರ ಭಾಗದಲ್ಲಿ ಸರಾಸರಿ ವಾರ್ಷಿಕ ಆದಾಯ 98,435 ರೂ (ತಿಂಗಳಿಗೆ 8200, ದಿನಕ್ಕೆ 264 ರೂ) ಇತ್ತು' ಎಂದು ವರದಿಯಾಗಿದೆ. ಇದರ ಅನುಸಾರವೆ ಈ ರಿವರ್ಸ ವಲಸೆಯಿಂದಾಗಿ ಗ್ರಾಮೀಣ ಭಾಗದಲ್ಲಿನ ಬಿಕ್ಕಟ್ಟು ಹತ್ತು ಪಟ್ಟು ಜಾಸ್ತಿಯಾಗುತ್ತದೆ. ಈಗ ಜಿಡಿಪಿಗೆ (200 ಲಕ್ಷ ಕೋಟಿ) ಶೇಕಡಾ 17% ಪ್ರಮಾಣದಲ್ಲಿ (32 ಲಕ್ಷ ಕೋಟಿ) ಕೊಡುಗೆ ಇರುವ ಕೃಷಿ ವಲಯದ ಮೇಲೆ ಅತಿ ಹೆಚ್ಚಿನ ಅವಲಂಬನೆ ಉಂಟಾಗುತ್ತದೆ. ಕೋವಿಡ್ ಪೂರ್ವದಲ್ಲಿ 2018ರ ವರದಿಯ ಪ್ರಕಾರ 20 ಕೋಟಿ ಜನಸಂಖ್ಯೆ ಕೃಷಿಯಲ್ಲಿ ತೊಡಗಿಕೊಂಡಿದ್ದರು. ಈ ರಿವರ್ಸ ವಲಸೆಯ ನಂತರ ಗ್ರಾಮೀಣ ಭಾಗದಲ್ಲಿ ಹೆಚ್ಚಾದ ಜನಸಂಖ್ಯೆಗೆ ಕೃಷಿಯಲ್ಲಿ ಉದ್ಯೋಗ ಕಲ್ಪಿಸುವ ಸವಾಲು ನಮ್ಮ ಮುಂದಿದೆ.

ಕೋವಿಡ್ ನಂತರದಲ್ಲಿ ಈ ರಿವರ್ಸ್ ವಲಸೆಯ ಕಾರಣಕ್ಕೆ ಎನ್‌ಡಿಪಿ (ಜಿಡಿಪಿ - ಡಿಪ್ರಿಶಿಯೇಶನ್ ಮೌಲ್ಯ)ಗೆ ಶೇಕಡಾ 48% ಪ್ರಮಾಣದ ಕೊಡುಗೆ ನೀಡುವ ಗ್ರಾಮೀಣ ಆರ್ಥಿಕತೆಯ ಸ್ವರೂಪವೆ ಬದಲಾಗಲಿದೆ. 2017-18ರ ಅಂಕಿಅಂಶಗಳ ಪ್ರಕಾರ ಗ್ರಾಮೀಣ ಆರ್ಥಿಕತೆಯಲ್ಲಿ ದುಡಿಮೆಯ ಉತ್ಪಾದಕತೆಯ ಪ್ರಮಾಣ ಶೇಕಡಾ 13% ಪ್ರಮಾಣದಷ್ಟಿದೆ. ಇದು ತುಂಬಾ ಕಡಿಮೆ ಉತ್ಪಾದಕತೆ. ಇದಕ್ಕೆ ಹಲವಾರು ಕಾರಣಗಳಿವೆ. ಈ ರಿವರ್ಸ್ ವಲಸೆಯ ಕಾರಣಕ್ಕೆ ಈಗಾಗಲೆ ಕುಂಠಿತಗೊಂಡಿರುವ ಉತ್ಪಾದಕತೆಯ ಮೇಲೆ ಒತ್ತಡ ಉಂಟಾಗುತ್ತದೆ.

ಎನ್‌ಡಿಪಿಗೆ ಗ್ರಾಮೀಣ ಆರ್ಥಿಕತೆಯ ಶೇಕಡಾವಾರು ಕೊಡುಗೆಯನ್ನು ಈ ಕೆಳಗಿನಂತೆ ವಲಯವಾರು ವಿಂಗಡಿಸಬಹುದು. (ಕೃಪೆ :ಇಂಡಿಯಾ ಸ್ಪೆಂಡ್)

ಕೃಷಿ ಮತ್ತು ಇತರೆ ವಲಯ - 38.7%, ಉತ್ಪಾದನೆ - 17.13%, ರಿಯಲ್ ಎಸ್ಟೇಟ್ ಮತ್ತು ಇತರೆ - 10.1%, ನಿರ್ಮಾಣ ವಲಯ- 10.1%, ಹಣಕಾಸು ಮತ್ತು ಇತರೆ -8.8%, ವ್ಯಾಪಾರ - 6.78%, ಗಣಿಗಾರಿಕೆ - 4.77%, ಸಾರಿಗೆ ಮತ್ತು ಸಂಪರ್ಕ - 3.81%

ರಿವರ್ಸ್ ವಲಸೆಯ ಪರಿಹಾರಗಳು

ಮೇಲಿನ ವಲಯಗಳಲ್ಲಿ ರಿವರ್ಸ್ ವಲಸೆ ಬಂದ ಕೋಟ್ಯಾಂತರ ಕಾರ್ಮಿಕರಿಗೆ ಸೂಕ್ತ ಉದ್ಯೋಗಗಳನ್ನು ಸೃಷ್ಟಿಸಬೇಕಾಗುತ್ತದೆ. ಇದರಲ್ಲಿ ಮನರೇಗದ ಪಾತ್ರ ಬಹು ಮುಖ್ಯವಾಗಿದೆ. 13.62 ಕೋಟಿ ಮನರೇಗ ಜಾಬ್ ಕಾರ್ಡ್ ಹೊಂದಿದ್ದಾರೆ. ಅದರಲ್ಲಿ 8.17 ಕೋಟಿ ಸಕ್ರಿಯವಾಗಿದ್ದಾರೆ. 2018-19ರಲ್ಲಿ 257 ಕೋಟಿ ಮಾನವದಿನಗಳಷ್ಟು ಉದ್ಯೋಗ ಸೃಷ್ಟಿಯಾಗಿತ್ತು. ಆದರೆ 2020ರಲ್ಲಿ ಇದರ ಪ್ರಮಾಣ ಶೇಕಡಾ 70% ರಷ್ಟು ಕುಂಠಿತಗೊಂಡಿದೆ. ಮತ್ತೊಂದೆಡೆ ಸರಕಾರ 2020-21ರ ಸಾಲಿನಲ್ಲಿ ಮನರೇಗಗೆ 1ಲಕ್ಷ ಕೋಟಿ ಅನುದಾನ ನೀಡಿದೆ. ರಿವರ್ಸ್ ವಲಸೆಯ ನಂತರ ಈ ಮೊತ್ತ ಸಾಕಾಗುವುದಿಲ್ಲ. ಕನಿಷ್ಠ 3 ಲಕ್ಷ ಕೋಟಿ ಅನುದಾನದ ಅವಶ್ಯಕತೆ ಇದೆ. ಮತ್ತು ವೇತನವನ್ನು ಈಗಿನ 202 ರೂ ನಿಂದ 350-400 ರೂ ಗೆ ಹೆಚ್ಚಿಸಬೇಕಾಗಿದೆ. ಮುಖ್ಯವಾಗಿ ಕೆಲಸದ ದಿನಗಳನ್ನು ಈಗಿನ 100 ದಿನಗಳಿಂದ ಹಂತ ಹಂತವಾಗಿ 300 ದಿನಗಳಿಗೆ ಹೆಚ್ಚಿಸಬೇಕಾಗುತ್ತದೆ. ಈ ಎಲ್ಲಾ ಕ್ರಮಗಳಿಂದ ಬೇಡಿಕೆ ಹೆಚ್ಚುತ್ತದೆ. ಈಗ ಬೇಡಿಕೆಯ ಅವಶ್ಯಕತೆ ಇದೆ.

ಕೃಷಿ ವಲಯದಲ್ಲಿ ರೈತ ಬೆಳೆದ ಬೆಳೆಗೆ ಸೂಕ್ತವಾದ, ನ್ಯಾಯವಾದ ಬೆಂಬಲ ಬೆಲೆ ನಿಗದಿಯಾಗಿಲ್ಲ, ಮಾರುಕಟ್ಟೆ ಶಕ್ತಿಗಳು ಬೆಲೆ ನಿಗದಿಪಡಿಸುವುದರಿಂದ ಆತನ ಉತ್ಪಾದನೆ ಖರ್ಚಿಗಿಂತಲೂ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ದುರಂತದಲ್ಲಿದ್ದಾನೆ, ಹವಮಾನ ವೈಪರೀತ್ಯ ಮತ್ತು ಇತರೆ ತೊಂದರೆಗಳಿಂದ ಬೆಳೆ ನಾಶವಾಗುತ್ತಿದೆ. ಮುಖ್ಯವಾಗಿ ಬಹುಪಾಲು ಕೃಷಿ ಕಾರ್ಮಿಕರಿಗೆ ತಮ್ಮದೇ ಆದ ಸ್ವಂತ ಭೂಮಿ ಇಲ್ಲ. ಇವರೆಲ್ಲ ಸಣ್ಣ ಮತ್ತು ಅತಿ ಸಣ್ಣ ರೈತರು. ಇಂತಹ ಸಂದರ್ಭದಲ್ಲಿ ರಿವರ್ಸ್ ವಲಸೆಯಿಂದ ಪರಿಸ್ಥಿತಿ

ಪುಟ 14 ಕ್ಕೆ

ಕೇರಳ ಎಲ್‌ಡಿಎಫ್ ಸರಕಾರದ 4 ವರ್ಷಗಳ ಸಾಧನೆ

ದೇಶದ ಮುಂದೆ ಪರ್ಯಾಯ ಜನಪರ ಅಭಿವೃದ್ಧಿ ಮಾದರಿ

ತನ್ನ ಅಧಿಕಾರದ ಅವಧಿಯ ನಾಲ್ಕು ವರ್ಷಗಳನ್ನು ಈಗ ಯಶಸ್ವಿಯಾಗಿ ಪೂರೈಸಿರುವ ಕೇರಳದ ಎಲ್‌ಡಿಎಫ್ ಸರಕಾರ ನವ ಉದಾರವಾದಿ–ಕೋಮುವಾದಿ ಆಳ್ವಿಕೆಗೆ ಒಂದು ಪರ್ಯಾಯವಾದ ಮಾದರಿ ಇದೆ ಎಂಬುದನ್ನು ತೋರಿಸಿ ಕೊಟ್ಟಿದೆ. ಜನಗಳಲ್ಲಿ ಐಕ್ಯತೆ ಮತ್ತು ಸೌಹಾರ್ದವನ್ನು ಪೋಷಿಸುವುದು, ಜನಪರ ಧೋರಣೆಗಳು, ಸಬಲೀಕರಣಗೊಂಡಿರುವ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು, ಸಾಮಾಜಿಕ ನ್ಯಾಯ ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣ, ಸಾರ್ವಜನಿಕ ವಲಯ ಮತ್ತು ಸಹಕಾರಿಗಳನ್ನು ಬಲಪಡಿಸುವ ಮೂಲಕ ಖಾಸಗೀಕರಣವನ್ನು ಎದುರಿಸುವುದು ಇವೆಲ್ಲದರ ಒಂದು ಸಂಯೋಜನೆಯೆ ಕೇರಳದ ಎಲ್‌ಡಿಎಫ್ ದೇಶದ ಮುಂದಿಟ್ಟಿರುವ ಪರ್ಯಾಯ ಮಾದರಿ.



ಪ್ರಕಾಶ ಕಾರಟ್

ಮೇ 25 ರಂದು ಕೇರಳದಲ್ಲಿ ಎಲ್‌ಡಿಎಫ್ ಸರಕಾರ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿರುವುದು ಒಂದು ವಿಶೇಷ ಮಹತ್ವವನ್ನು ಪಡೆದಿದೆ. ಇದು ಕೊವಿಡ್–19 ಮಹಾಮಾರಿಯ ನಡುವೆ, ಅದನ್ನು ಎದುರಿಸುವಲ್ಲಿ ರಾಜ್ಯ ಸರಕಾರಕ್ಕೆ ದೇಶ–ವಿದೇಶಗಳಲ್ಲಿ ವ್ಯಾಪಕ ಮೆಚ್ಚುಗೆಯ ನಡುವೆ ಬಂದಿದೆ. ಕೊರೊನ ವೈರಸ್‌ನ ಬೆದರಿಕೆಯನ್ನು ಕೇರಳ ಪರಿಣಾಮಕಾರಿಯಾಗಿ ಎದುರಿಸಿರುವುದು ಒಂದು ಅಪವಾದವೆನ್ನಬಹುದಾದ ಪ್ರಸಂಗವೇನಲ್ಲ. ಅದರ ಹಿಂದೆ ಒಂದು ಚರಿತ್ರೆಯಿದೆ, ಒಂದು ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆ ಇದೆ.

ಕೇರಳ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹೊಂದಿದೆ ಎಂಬುದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ. ನೀತಿ ಆಯೋಗ, ತನ್ನ ಆರೋಗ್ಯ ಸೂಚ್ಯಂಕದ ಪಟ್ಟಿಯಲ್ಲಿ ಕೇರಳವನ್ನು ಮೊದಲ ಸ್ಥಾನದಲ್ಲಿಟ್ಟಿದೆ. ಕೇರಳದಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ದಶಕಗಳಲ್ಲಿ ಕಟ್ಟಿ ಬೆಳೆಸಿರುವಂತದ್ದು. ಅದರೆ ಅದನ್ನು 'ಆರ್ದ್ರಂ' ಮಿಶನ್ ಮೂಲಕ ಆಧುನೀಕರಿಸಿದ್ದು ಮತ್ತು ವಿಸ್ತರಿಸಲು ಸತತ ಪ್ರಯ್ನತ್ನ ನಡೆಸಿದ್ದು ಎಲ್‌ಡಿಎಫ್ ಸರಕಾರ.

ಬಿಕ್ಕಟ್ಟುಗಳ ಸರಮಾಲೆಯ ನಡುವೆಯೂ ಜನಪರ ಬದ್ಧತೆ

ಎಲ್‌ಡಿಎಫ್ ಆಳ್ವಿಕೆಯ ನಾಲ್ಕು ವರ್ಷಗಳಿಗೆ ಸರಿಗಟ್ಟುವಂತದ್ದು ರಾಜ್ಯದ ಚರಿತ್ರೆಯಲ್ಲಿ ಬೇರೆ ಇಲ್ಲ. ಹಿಂದೆಂದೂ ಆಡಳಿತ ಯಂತ್ರ ಇಷ್ಟೊಂದು ಪರೀಕ್ಷೆಗಳಿಗೆ ಒಡ್ಡಲ್ಪಟ್ಟಿರಲಿಲ್ಲ. ವರ್ಷ–ವರ್ಷವೂ ಅದು ಅಭೂತಪೂರ್ವ ಪ್ರಮಾಣದ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿ ಬಂದಿದೆ. 2017ರಲ್ಲಿ ಒಖಿ ಚಂಡಮಾರುತ ಮತ್ತು 2018ರಲ್ಲಿ ನಿಫಾ ವೈರಸ್ ರಾಜ್ಯದ ಕೆಲವು ಭಾಗಗಳನ್ನು ತಟ್ಟಿದ್ದರೆ, 2018ರ ಪ್ರವಾಹ ಇಡೀ ರಾಜ್ಯವನ್ನು ಸ್ಥಬ್ಧಗೊಳಿಸಿತು. ಮತ್ತೆ 2019ರಲ್ಲಿ ಪ್ರವಾಹ ಇಷ್ಟೊಂದು ತೀವ್ರವಾಗಿಯಲ್ಲದಿದ್ದರೂ, ಅನಾಹುತ ಉಂಟು ಮಾಡಿತು. ಇವೆಲ್ಲದರ ಮೇಲೆ ಈಗ ಕೊವಿಡ್–19 ಮಹಾಮಾರಿ ಎರಗಿದೆ.

ಇವೆಲ್ಲ ಬಿಕ್ಕಟ್ಟುಗಳ ಹೊರತಾಗಿಯೂ, ಎಲ್‌ಡಿಎಫ್ ಸರಕಾರ ಕೇರಳದ ಜನತೆಗೆ ಬದ್ಧವಾಗಿ, ಸಾರ್ವಜನಿಕ ಸಂಸ್ಥೆಗಳು ಮತ್ತು ಜನತೆಯ ಭಾಗವಹಿಸುವಿಕೆಯಲ್ಲಿ ವಿಶ್ವಾಸವಿಟ್ಟು ಗಟ್ಟಿಯಾಗಿ ನಿಂತಿದೆ. ಬಿಕ್ಕಟ್ಟನ್ನು ನಿಖರತೆಯಿಂದ ನಿಭಾಯಿಸುವುದು, ಮತ್ತು ಅದನ್ನು ಅವಕಾಶವಾಗಿ ಪರಿವರ್ತಿಸುವುದು ಈ ಸರಕಾರದ ಹೆಗ್ಗುರುತು. ಕೇರಳ ಈ ಪ್ರತಿಯೊಂದು ಬಿಕ್ಕಟ್ಟನ್ನೂ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ನಿರ್ವಹಿಸಿದ ರೀತಿ ಪ್ರಶಂಸೆ, ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

2018ರ ಪ್ರವಾಹದ ವೇಳೆಯಲ್ಲಿ ಸರಕಾರ ಮತ್ತು ಜನತೆ ತಕ್ಷಣ ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಲ್ಲಿ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿತು. ತ್ವರಿತವಾಗಿ ನಿಖರವಾಗಿ ಮತ್ತು ಜನ ಪರ ರೀತಿಯಲ್ಲಿ ಈ ರಾಜ್ಯವು ಬಿಕ್ಕಟ್ಟನ್ನು ನಿಭಾಯಿಸಿದ್ದನ್ನು ಹಲವರು ಮೆಚ್ಚಿಕೊಂಡಿದ್ದರು. ಈ ಕೊವಿಡ್–19 ಮಹಾಮಾರಿಯನ್ನು ನಿಭಾಯಿಸಿರುವ ರೀತಿಯಿಂದ ಮತ್ತೆ ಅದು ಪ್ರಶಂಸೆಗೆ ಪಾತ್ರವಾಗಿದೆ. ಇವು ಒಂದು ಬಲಿಷ್ಟ, ಬದ್ಧತೆಯುಳ್ಳ ಮತ್ತು ಜನಪರ ಸರಕಾರದ ಉದಾಹರಣೆಗಳು.

ವಿಕೇಂದ್ರೀಕೃತ ಯೋಜನೆಯ ಗಟ್ಟಿ ವ್ಯವಸ್ಥೆ ಮತ್ತು ಸಹಕಾರಿ ಸಂಸ್ಥೆಗಳ ಭದ್ರ ಬುನಾದಿ

ಎಲ್‌ಡಿಎಫ್ ಸರಕಾರ, ತನ್ನ ಚುನಾವಣಾ ಪ್ರಣಾಳಿಕೆಯ ಅನುಸಾರವಾಗಿ ಅರ್ಥವ್ಯವಸ್ಥೆಯ ಉತ್ಪಾದಕ ವಲಯಗಳನ್ನು ಪ್ರೋತ್ಸಾಹಿಸುವತ್ತ, ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯವನ್ನು ಬಲಪಡಿಸಿ, ಮೇಲ್ದರ್ಜೆಗೆ ಏರಿಸುವತ್ತ, ಮತ್ತು ರಾಜ್ಯದಲ್ಲಿ ಸಾರ್ವಜನಿಕ ಕ್ರಿಯೆಯ ಶ್ರೀಮಂತ ಪರಂಪರೆಯ ಭಾಗವಾಗಿರುವ ಸಾಮಾಜಿಕ ಕಲ್ಯಾಣ ಮತ್ತು ಸುಧಾರಣಾ ಕ್ರಮಗಳ ಜಾಲವನ್ನು ಮತ್ತಷ್ಟು ಬೆಳೆಸುವತ್ತ ಶ್ರಮಿಸಿದೆ. ಸರಕಾರ ಅಭಿವೃದ್ಧಿಯ ಗಳಿಕೆಗಳನ್ನು ಪರಿಣಾಮಕಾರಿಯಾಗಿ, ಸಮಯಕ್ಕೆ ಸರಿಯಾಗಿ , ಮತ್ತು ಉಸ್ತುವಾರಿ ಮಾಡಬಹುದಾದ, ಉತ್ತರದಾಯಿಯಾಗುವ ರೀತಿಯಲ್ಲಿ ಜನತೆಗೆ ತಲುಪುವಂತೆ ಖಾತ್ರಿಪಡಿಸುವ ಪ್ರಯತ್ನಗಳನ್ನು ಮಾಡಿದೆ. ತನ್ನ ಪ್ರಣಾಳಿಕೆಯ ವಚನಗಳನ್ನು ಧೋರಣೆಗಳಾಗಿ ಕಾರ್ಯರೂಪಕ್ಕೆ ತರುವುದು, ಮತ್ತು ಇದಕ್ಕೆ ಸರಕಾರದ ವಿಭಿನ್ನ ಇಲಾಖೆಗಳು ಮತ್ತು ಸಂಸ್ಥೆಗಳ ಚಟುವಟಿಕೆಗಳನ್ನು ಸಂಯೋಜಿಸುವುದು ಯೋಜನೆಯ ಕೆಲಸ. ಪಂಚವಾರ್ಷಿಕ ಯೋಜನೆಯನ್ನು ಸಾರ್ವಜನಿಕ ಕ್ರಿಯೆಯ ಒಂದು ನಿರ್ಣಾಯಕ ಸಾಧನವಾಗಿ ಹಾಗೂ ಯೋಜನಾ ವೆಚ್ಚಗಳಿಗೆ ಹಣಕಾಸುಗಳನ್ನು ನೀಡುವ ಅತ್ಯಂತ ಮಹತ್ವದ ಸಂಸ್ಥೆಯಾಗಿ ಉಳಿಸಿಕೊಂಡಿರುವ ಏಕಮಾತ್ರ ರಾಜ್ಯವೆಂದರೆ ಕೇರಳವೇ.


ರಾಜ್ಯದಲ್ಲಿ ಒಟ್ಟಾರೆಯಾಗಿ ಯೋಜನಾ ಪ್ರಕ್ರಿಯೆಯನ್ನು ವಿಕೇಂದ್ರೀಕೃತ ಯೋಜನೆಯೊಂದು ಗಟ್ಟಿಯಾದ ವ್ಯವಸ್ಥೆಯಾಗಿ ಮತ್ತಷ್ಟು ಬಲಪಡಿಸಿದೆ. ಎಲ್‌ಡಿಎಫ್ ಸರಕಾರ ರಾಜ್ಯದಲ್ಲಿ ವಿಕೇಂದ್ರೀಕರಣದ ಮೊದಲ ಘಟ್ಟವನ್ನು ಆರಂಭಿಸಿ ಕೇರಳವನ್ನು ವಿಕೇಂದ್ರೀಕೃತ ಆಳ್ವಿಕೆಯ ಒಂದು ಮಾದರಿಯನ್ನಾಗಿ ಮಾಡಿತು. ಈಗಿನ ಎಲ್‌ಡಿಎಫ್ ಸರಕಾರ 2016ರಲ್ಲಿ ವಿಕೇಂದ್ರೀಕರಣದ ಎರಡನೇ ಘಟ್ಟವನ್ನು ಆರಂಭಿಸಿ, ರಾಜ್ಯದಲ್ಲಿ ಸ್ಥಳೀಯ ಸರಕಾರಗಳನ್ನು ಮತ್ತಷ್ಟು ಬಲಪಡಿಸಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸ್ಥಳೀಯ ಸರಕಾರಗಳು ಉನ್ನತ ಮಟ್ಟದ ಯೋಜನಾ ವೆಚ್ಚಗಳನ್ನು ದಾಖಲಿಸಿವೆ, ಜಿಲ್ಲಾ ಯೋಜನೆಗಳನ್ನು ರೂಪೀಕರಿಸಿವೆ, ಮತ್ತು ಯೋಜನಾ ಪ್ರಕ್ರಿಯೆಯನ್ನು ಒಂದು ಗಮನಾರ್ಹ ಮಟ್ಟದ ವರೆಗೆ ಸುಗಮಗೊಳಿಸಿವೆ. ಪ್ರಸಕ್ತ ಬಿಕ್ಕಟ್ಟಿನ ಸಮಯದಲ್ಲಿ ಸ್ಥಳೀಯ ಸರಕಾರಗಳು ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತಿವೆ. ವಿಕೇಂದ್ರೀಕೃತ ಆಳ್ವಿಕೆಯ ಕೇರಳದ ಅನುಭವವೇ ಬಿಕ್ಕಟ್ಟಿನ ಸಮಯಗಳಲ್ಲಿ ರಾಜ್ಯಕ್ಕೆ ನೆರವಾಗಿರುವುದು.

ರಾಜ್ಯದಲ್ಲಿ ಅಭಿವೃದ್ಧಿಯ ಭದ್ರ ಬುನಾದಿಯಾಗಿರುವ ಇನ್ನೊಂದು ವ್ಯಸ್ಥೆಯೆಂದರೆ ಸಹಕಾರಿ ಸಂಸ್ಥೆಗಳು.ಸಹಕಾರ ಮತ್ತು ಪ್ರಾಥಮಿಕ ಸಹಕಾರಿಗಳು ಕೇರಳದ ಶಕ್ತಿ, ಇದು ಸ್ವಾತಂತ್ರ್ಯ ಆಂದೋಲನದಿಂದ ಒಂದು ಶ್ರೀಮಂತ ವಾರಸುದಾರಿಕೆಯಾಗಿ ಬಂದಿರುವಂತದ್ದು. ಈ ಸಂಸ್ಥೆಗಳಲ್ಲಿ ಜನತೆಯ ವಿಶ್ವಾಸ ಕೇರಳದ ಒಂದು ಚಾರಿತ್ರಿಕ ಪರಂಪರೆ. ಇಂದು, ಇವು ಬಹುಪಾಲು ಗ್ರಾಮೀಣ ಆರ್ಥಿಕ ಚಟುವಟಿಕೆಗಳ ಬೆನ್ನೆಲುಬಾಗಿವೆ. ಕೇರಳ ಬ್ಯಾಂಕ್‌ನ ರಚನೆಯ ಮೂಲಕ ಸಹಕಾರಿ ವ್ಯವಸ್ಥೆಯನ್ನು ಬಲಪಡಿಸಿರುವುದು ಪ್ರಸಕ್ತ ಸರಕಾರದ ಪ್ರಧಾನ ಸಾಧನೆಗಳಲ್ಲಿ ಒಂದು. ಕೇರಳ ಬ್ಯಾಂಕ್ ರಾಜ್ಯದ ಅತಿ ದೊಡ್ಡ ಬ್ಯಾಂಕಿಂಗ್ ಜಾಲವಾಗಲಿದೆ.

'ನವಕೇರಳಂ' ಮತ್ತು ನಾಲ್ಕು ಮಿಶನ್‌ಗಳು

ಈ ಸರಕಾರ 2016ರಲ್ಲಿ ಅಧಿಕಾರಕ್ಕೆ ಬಂದಾಗ ನಾಲ್ಕು ಮಹತ್ವದ ಮಿಶನ್‌ಗಳ ಮೂಲಕ 'ನವಕೇರಳಂ'ನ ಕಣ್ಣೋಟವನ್ನು ಮುಂದಿಟ್ಟಿತು. ಈ ಮಿಶನ್‌ಗಳು ಅಭಿವೃದ್ಧಿಯ ನಾಲ್ಕು ಮಹತ್ವದ ಕ್ಷೇತ್ರಗಳನ್ನು, ಅಂದರೆ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಪರಿಸರ ಇವನ್ನು ಕುರಿತಾದವುಗಳು– 'ಲೈಫ್' ಎಂದು ಹೆಸರಿಸಿದ ವಸತಿ ಮಿಶನ್, ಶೈಕ್ಷಣಿಕ ಮೂಲರಚನೆಯನ್ನು ಉತ್ತಮಪಡಿಸಲು ಗಮನ ಕೇಂದ್ರೀಕರಿಸುವ ಶಿಕ್ಷಣ ಮಿಶನ್, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಮತ್ತು ವಿವಿಧ ಮಟ್ಟಗಳಲ್ಲಿ ಸರಕಾರೀ ಆಸ್ಪತ್ರೆಗಳಲ್ಲಿ ಹೊಸ ವೈದ್ಯಕೀಯ ಮೂಲರಚನೆಗಳನ್ನು ನಿರ್ಮಿಸುವ 'ಆರ್ದ್ರಂ' ಮತ್ತು ಒಂದು ಸ್ವಚ್ಛ ಹಾಗೂ ಹಸಿರು ಪರಿಸರವನ್ನು ನಿರ್ಮಿಸುವ 'ಹರಿತ ಕೇರಳಂ'. ಈ ನಾಲ್ಕು ಮಿಶನ್‌ಗಳು ಕಳೆದ ನಾಲ್ಕು ವರ್ಷಗಳಲ್ಲಿ ಗಣನೀಯ ಪ್ರಗತಿ ಸಾಧಿಸಿವೆ. ಕೊವಿಡ್–19 ಮಹಾಮಾರಿಯನ್ನು ನಿಭಾಯಿಸುವಲ್ಲಿ ಆರ್ದ್ರಂ ಮಿಶನ್ ಒಂದು ಮಹತ್ವದ ಪಾತ್ರ ವಹಿಸಿತು.

ಎಲ್‌ಡಿಎಫ್ ಸರಕಾರದ ಒಂದು ಪ್ರಮುಖ ಸಾಧನೆಯೆಂದರೆ ಸಾರ್ವಜನಿಕ ವಲಯದ ಉದ್ದಿಮೆಗಳು ಗಮನಾರ್ಹ ಪ್ರಮಾಣದಲ್ಲಿ ಉತ್ತಮಗೊಂಡಿರುವುದು. ಈ ಮೂಲಕ ಅರ್ಥವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯ ಮಹತ್ವದ ಪಾತ್ರ ವಹಿಸಬಹುದು ಎಂಬುದನ್ನು ತೋರಿಸಿಕೊಡಲಾಗಿದೆ. ವಿವಿಧ ಮೂಲರಚನೆ ಪರಿಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೂಡ ಸರಕಾರಕ್ಕೆ ಸಾಧ್ಯವಾಗಿದೆ, ಉದಾಹರಣೆಗೆ ಬಹಳಷ್ಟು ವಿಳಂಬಗೊಂಡಿರುವ ಗೇಲ್(ಭಾರತದ ಅನಿಲ ಪ್ರಾಧಿಕಾರ)ನ 400 ಕಿ.ಮೀ. ಉದ್ದದ ಅನಿಲ ಪೈಪ್‌ಲೈನ್, ಕೊಚ್ಚಿ ಮೆಟ್ರೋ ಹಾಗೂ ಕಣ್ಣೂರು ವಿಮಾನ ನಿಲ್ದಾಣವನ್ನು ಯೋಜಿತ ಅವಧಿಯ ಒಳಗೇ ಪೂರ್ಣಗೊಳಿಸಿರುವುದು.



ಎಲ್‌ಡಿಎಫ್ ಸರಕಾರ ಕೇರಳದ ಇತಿಹಾಸದಲ್ಲೇ ಅತ್ಯಂತ ಸಮಗ್ರವಾದ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಕೈಗೆತ್ತಿಕೊಂಡಿದೆ. ಕಲ್ಯಾಣ ಪೆನ್ಶನ್ ಮೊತ್ತವನ್ನು 600ರೂ.ಗಳಿಂದ 2020ರಲ್ಲಿ 1300ರೂ.ಗೆ ಏರಿಸಲಾಗಿದೆ, ಅಂದರೆ ದುಪ್ಪಟ್ಟಿಗಿಂತಲೂ ಹೆಚ್ಚು. ಇದುವರೆಗೆ ರೂ.23409 ಕೋಟಿ ಮೊತ್ತದ ಸಾಮಾಜಿಕ ಕಲ್ಯಾಣ ಪೆನ್ಶನ್‌ಗಳನ್ನು ವಿತರಿಸಲಾಗಿದೆ. ಹಿಂದಿನ ಯುಡಿಎಫ್ ಸರಕಾರ ಕಲ್ಯಾಣ ಪೆನ್ಶನ್‌ಗಳಿಗೆ ಒಟ್ಟು ರೂ.9270 ಕೋಟಿ ವೆಚ್ಚ ಮಾಡಿತ್ತು ಎಂಬುದನ್ನು ಹೋಲಿಸಿ ನೋಡಬಹುದು.

ಮಹಿಳಾ ಸ್ವಯಂ–ಸೇವಾ ಗುಂಪುಗಳ ಜಾಲವಾಗಿರುವ 'ಕುಡುಂಬಶ್ರೀ' ಒಂದು ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತಿದೆ. ಇದರಲ್ಲಿ 2.9 ಲಕ್ಷ ನೆರೆಹೊರೆ ಸಮಿತಿಗಳಲ್ಲಿ ಸಂಘಟಿತರಾಗಿರುವ 44 ಲಕ್ಷ ಸದಸ್ಯೆಯರಿದ್ದಾರೆ. ಇವರು ಅತಿ ಸಣ್ಣ ಉದ್ದಿಮೆಗಳು, ಬೇಸಾಯ, ಪಶುಪಾಲನೆ, ಮಾರಾಟ ಮತ್ತು ಸಾಮಾಜಿಕ ವಲಯದಲ್ಲಿ ಅನಾಥರು ಮತ್ತು ಮಕ್ಕಳಿಗೆ ಆಹಾರ ಒದಗಿಸುವುದು ಮುಂತಾದ ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಈಗ ಕೊವಿಡ್ ಮಹಾಮಾರಿಯ ಸಮಯದಲ್ಲಿ 'ಕುಡುಂಬಶ್ರೀ' 1,225 ಸಮುದಾಯ ಅಡುಗೆ ಕೇಂದ್ರಗಳನ್ನು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳೊಂದಿಗೆ ನಡೆಸುತ್ತಿದೆ. ಇವು ಅಗತ್ಯವಿರುವ ಮತ್ತು ಅರ್ಹ ಕುಟುಂಬಗಳಿಗೆ ಉಚಿತವಾಗಿ ಮತ್ತು ತೆರಬಲ್ಲವರಿಗೆ 20ರೂ.ದರದಲ್ಲಿ ಆಹಾರವನ್ನು ಒದಗಿಸುತ್ತಿವೆ.


ಇನ್ನೊಂದು ಯಶಸ್ಸು ಲೈಫ್ ಮಿಶನ್‌ನದ್ದು. ಮನೆಯಿಲ್ಲದ ಕುಟುಂಬಗಳಿಗೆ ಮನೆಗಳನ್ನು ಕಟ್ಟಿ ಕೊಡುವುದು ಇದರ ಉದ್ದೇಶ. ಇದುವರೆಗೆ 2,19,154 ಮನೆಗಳನ್ನು ಕಟ್ಟಿ ಫಲಾನಿಭವಿಗಳಿಗೆ ವಹಿಸಿ ಕೊಡಲಾಗಿದೆ. ಇನ್ನಷ್ಟು ಮನೆಗಳನ್ನು ಕಟ್ಟುವ ಕೆಲಸ ಲಾಕ್‌ಡೌನಿನಿಂದಾಗಿ ನಿಂತು ಹೋಗಿತ್ತು. ಈಗ ಮತ್ತೆ ನಡೆಯುತ್ತಿದೆ. 'ಹರಿತ ಕೇರಳಂ' ಮಿಶನ್ 390 ಕಿ.ಮೀ. ನದಿಗಳು ಮತ್ತು 36,000 ಜಲಾಶಯಗಳಲ್ಲಿನ ಪ್ರದೂಷಣೆಗಳನ್ನು ನಿವಾರಿಸಿ ಪುನರುಜ್ಜೀವನಗೊಳಿಸಿದೆ.

ರಾಜಕೀಯ ಮುಖಂಡತ್ವದ ಸತ್ವ

ರಾಜ್ಯ ನೈಸರ್ಗಿಕ ಅನಾಹುತಗಳಿಂದ ' ಉಂಟಾದ ನಷ್ಟಗಳನ್ನು ಮಾತ್ರವಲ್ಲ, ನೋಟುರದ್ಧತಿ, ಜಿಎಸ್‌ಟಿ ಜಾರಿ ಮತ್ತು ಒಟ್ಟಾರೆಯಾಗಿ ರಾಜ್ಯಗಳಿಗೆ ಸಂಪನ್ಮೂಲಗಳನ್ನು ಕೊಡುವಲ್ಲಿ ಕೇಂದ್ರ ಸರಕಾರದ ನಕಾರಾತ್ಮಕ ನಿಲುವನ್ನೂ ಕೂಡ ಮೀರಿ ಕೆಲಸ ಮಾಡಬೇಕಾಗಿ ಬಂದಿದೆ. ಮತ್ತೆ–ಮತ್ತೆ ಪ್ರತಿಕೂಲ ಪರಿಸ್ಥಿತಿಗಳು ಎದುರಾದರೂ ಸರಕಾರ ತನ್ನ ಅಭಿವೃದ್ಧಿ ಚಟುವಟಿಕೆಗಳ ದಾರಿಯಿಂದ ಮತ್ತು ಸಾಮಾಜಿಕ ಕಲ್ಯಾಣ ಕ್ರಮಗಳಿಂದ ವಿಚಲಿತಗೊಳ್ಳದೆ ನಿಂತಿದೆ ಎಂಬುದು ಈ ಸರಕಾರದ ರಾಜಕೀಯ ಮುಖಂಡತ್ವದ ಸತ್ವವನ್ನು ತೋರಿಸಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸದಾ ಜನಗಳ ಹಿತಾಸಕ್ತಿಗಳನ್ನು ಮನದಲ್ಲಿಟ್ಟುಕೊಂಡು ಧೋರಣೆಗಳನ್ನು ರೂಪಿಸಲು ರಾಜಕೀಯ ಮಾರ್ಗದರ್ಶನವನ್ನು ನೀಡುವಲ್ಲಿ ಹೊಸ ಮಾನದಂಡಗಳನ್ನು ಸೃಜಿಸಿದ್ದಾರೆ.

ತನ್ನ ಅಧಿಕಾರದ ಅವಧಿಯ ಒಂದು ವರ್ಷ ಮಾತ್ರ ಉಳಿದಿರುವ ಎಲ್‌ಡಿಎಫ್ ಸರಕಾರ ಕೊವಿಡ್ ವೈರಾಣುವಿನ ವಿರುದ್ಧ ಸಮರವನ್ನು ಮುಂದುವರೆಸುವಲ್ಲಿ ಹಾಗೂ ಅರ್ಥವ್ಯವಸ್ಥೆಯನನು ಮತ್ತು ಜನಗಳ ಜೀವನಾಧಾರಗಳನ್ನು ಪುನಶ್ಚೇತನಗೊಳಿಸುವಲ್ಲಿ ಗಮನ ಕೇಂದ್ರೀಕರಿಸಿದೆ. ಕಳೆದ ನಾಲ್ಕು ವರ್ಷಗಳ ಅನುಭವಗಳ ಆಧಾರದಲ್ಲಿ, ಪಿಣರಾಯಿ ಸರಕಾರ ತಮಗೆ ನೀಡಿದ ಎಲ್ಲ ವಚನಗಳನ್ನು ಈಡೇರಿಸುತ್ತದೆ ಎಂದು ಕೇರಳದ ಜನತೆ ಪೂರ್ಣ ವಿಶ್ವಾಸವನ್ನು ಹೊಂದಿದ್ದಾರೆ. ಇದು ಜನತೆಯ ವಿಶ್ವಾಸವನ್ನು ಗಳಿಸಿರುವ ಸರಕಾರ.

ಇನ್ನು ಉಳಿದ ಭಾರತದ ಬಗ್ಗೆ ಹೇಳುವುದಾದರೆ, ಕೇರಳದ ಎಲ್‌ಡಿಎಫ್ ಸರಕಾರ ನವ ಉದಾರವಾದಿ–ಕೋಮುವಾದಿ ಆಳ್ವಿಕೆಗೆ ಒಂದು ಪರ್ಯಾಯವಾದ ಮಾದರಿ ಇದೆ ಎಂಬುದನ್ನು ತೋರಿಸಿ ಕೊಟ್ಟಿದೆ. ಜನಗಳಲ್ಲಿ ಐಕ್ಯತೆ ಮತ್ತು ಸೌಹಾರ್ದವನ್ನು ಪೋಷಿಸುವುದು, ಜನಪರ ಧೋರಣೆಗಳು, ಸಬಲೀಕರಣಗೊಂಡಿರುವ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು, ಸಾಮಾಜಿಕ ನ್ಯಾಯ ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣ, ಸಾರ್ವಜನಿಕ ವಲಯ ಮತ್ತು ಸಹಕಾರಿಗಳನ್ನು ಬಲಪಡಿಸುವ ಮೂಲಕ ಖಾಸಗೀಕರಣವನ್ನು ಎದುರಿಸುವುದು ಇವೆಲ್ಲದರ ಒಂದು ಸಂಯೋಜನೆಯು ಈ ಪರ್ಯಾಯ ಮಾದರಿ ಯನ್ನು ಪ್ರತಿನಿಧಿಸುತ್ತದೆ. ●



ಸಿಐಟಿಯು ತನ್ನ ಸುವರ್ಣಮಹೋತ್ಸವದ ವರ್ಷ ಪೂರ್ತಿ ಆಚರಣೆಯನ್ನು ಇದೇ ಮೇ 30 ರ ತನ್ನ ಸ್ಥಾಪನಾ ದಿನದಂದು ಮುಗಿಸಲಿದೆ. ಆ ಸಂದರ್ಭದಲ್ಲಿ ಸಿಐಟಿಯು ನ 50 ವರ್ಷಗಳ ಮುನ್ನಡೆಯ ಕುರಿತು ಒಂದು ಹಿನ್ನೋಟ.

ಸಿಐಟಿಯು ಸುವರ್ಣ ಮಹೋತ್ಸವ

ವರ್ಗ ಐಕ್ಯತೆ ವರ್ಗ ಸಂಘರ್ಷದ ಮೂಲಕ ಸಾಮಾಜಿಕ ಪರಿವರ್ತನೆ ವರ್ಗ ಹೋರಾಟದಿಂದ ಮಾತ್ರ ಶೋಷಣೆಗೆ ಮುಕ್ತಿ

"ವರ್ಗ ಐಕ್ಯತೆ ವರ್ಗ ಸಂಘರ್ಷದ ಮೂಲಕ ಸಾಮಾಜಿಕ ಪರಿವರ್ತನೆ

ವರ್ಗ ಹೋರಾಟದಿಂದ ಮಾತ್ರ ಶೋಷಣೆಗೆ ಮುಕ್ತಿ"

ಇದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) 1970 ರಲ್ಲಿ ಸ್ಥಾಪನೆಯಾದಾಗ ಹೊಂದಿದ್ದ ಕಣ್ಣೋಟ.

ಮೇಲ್ಕಂಡ ಕಣ್ಣೋಟ ಕುರಿತು ಸಿಐಟಿಯುವಿನ ಸಂವಿಧಾನವು ಹೀಗೆ ಸ್ಪಷ್ಟವಾಗಿ ಹೇಳಿದೆ:

"ಕಾರ್ಮಿಕ ವರ್ಗದ ಮೇಲಿನ ಶೋಷಣೆ ಕೊನೆಗೊಳ್ಳಬೇಕಾದರೆ ಎಲ್ಲಾ ಉತ್ಪಾದನಾ ಸಲಕರಣೆಗಳು, ವಿತರಣೆ ಮತ್ತು ವಿನಿಮಯವನ್ನು ಸಾಮಾಜೀಕರಣಗೊಳಿಸಿ ಸಮಾಜವಾದಿ ಪ್ರಭುತ್ವ ಸ್ಥಾಪನೆಯಿಂದ ಮಾತ್ರ ಸಾಧ್ಯ ಎಂದು ಸಿಐಟಿಯು ನಂಬಿಕೆಯಾಗಿದೆ. ಸಮಾಜವಾದದ ಆದರ್ಶಗಳನ್ನು ಎತ್ತಿಹಿಡಿಯುತ್ತಾ ಎಲ್ಲಾ ಶೋಷಣೆಗಳಿಂದ ಸಮಾಜವನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಲು ಸಿಐಟಿಯು ಬದ್ಧವಾಗಿದೆ."

ಮುಂದುವರೆದು,

'ಯಾವುದೇ ಸಾಮಾಜಿಕ ಬದಲಾವಣೆಯನ್ನು ವರ್ಗ ಹೋರಾಟವಿಲ್ಲದೆ ತರಲು ಸಾಧ್ಯವಿಲ್ಲ ಎಂಬ ತತ್ವಕ್ಕೆ ಸಿಐಟಿಯು ದೃಢವಾಗಿ ಬದ್ಧವಾಗಿರುತ್ತದೆ ಮತ್ತು ವರ್ಗಶಾಮೀಲು ಪಥದಲ್ಲಿ ಕಾರ್ಮಿಕ ವರ್ಗವನ್ನು ಕರೆದೊಯ್ಯುವ ಎಲ್ಲಾ ಪ್ರಯತ್ನಗಳನ್ನು ಸಿಐಟಿಯು ನಿರಂತರವಾಗಿ ತಿರಸ್ಕರಿಸುತ್ತದೆ.'

ಇಂತಹ ಕಣ್ಣೋಟ ಕಾಲದ ಪರೀಕ್ಷೆ ಮೀರಿ ನಿಂತಿದೆ. ಐವತ್ತು ವರ್ಷದ ಅನುಭವ ಸಿಐಟಿಯುವನ್ನು ಮತ್ತಷ್ಟು ಬಲಪಡಿಸುವ ದೃಡವಾದ ಕಣ್ಣೋಟದೊಂದಿಗೆ ಸಂವಿಧಾನಾತ್ಮಕ ಗುರಿಗಳನ್ನು ಸಾಧಿಸುವತ್ತ ಗಟ್ಟಿಗೊಳಿಸಿ ಮುನ್ನಡೆಯಬೇಕಿದೆ.

ದುಡಿಯುವ ವರ್ಗ ತನ್ನ ಬದುಕು ಮತ್ತು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ತೀವ್ರ ದಾಳಿಯಿಂದಾಗಿ ಮತ್ತು ಅತೃಪ್ತಿಯಿಂದ ದೇಶದ ಕುದಿಯುತ್ತಿದ್ದಂಥ ಸಂಕ್ರಮಣ ಕಾಲದಲ್ಲಿ ಸಿಐಟಿಯು ಜನ್ಮತಾಳಿದೆ. ಫ್ಯಾಕ್ಟರಿಗಳನ್ನು ಮುಚ್ಚುವುದು, ಕೆಲಸ ಕಳೆದುಕೊಳ್ಳುವುದು, ಗುತ್ತಿಗಿಕರಣದ ಹೆಚ್ಚಳ, ಸಾಮೂಹಿಕ ಚೌಕಾಸಿ ಹಕ್ಕುಗಳ ನಿರಾಕರಣೆ, ಸಾಮಾಜಿಕ ಸೌಲಭ್ಯಗಳನ್ನು ನೀಡದಿರುವುದು ಮುಂತಾದವು ಮುಷ್ಕರ, ಹೋರಾಟ ಮತ್ತು ಆಸ್ಫೋಟಗಳಿಗೆ ಕಾರಣವಾದವು. ಇವುಗಳು ದೇಶದ ಎಲ್ಲ ಕ್ಷೇತ್ರದಲ್ಲೂ ಕಾಣಿಸಿಕೊಂಡವು. ಜ್ಯೂಟ್ ಕಾರ್ಮಿಕರು, ಇದ್ದಲು ಕಾರ್ಮಿಕರು, ಉಕ್ಕು ಕಾರ್ಖಾನೆಗಳ ಕಾರ್ಮಿಕರು, ಟೆಕ್ಸ್‌ಟೈಲ್ ಸಾರಿಗೆ ಹೀಗೆ ಸಾವಿರಾರು ಇತರ ಕೈಗಾರಿಕೆಗಳ ಕಾರ್ಮಿಕರೆಲ್ಲ ಹೋರಾಟದ ಹಾದಿ ಹಿಡಿದಿದ್ದರು. ಅಂದಿನ ಅಗತ್ಯ ಅಂದರೆ ಪ್ರತಿ ಕೈಗಾರಿಕಾ ಕ್ಷೇತ್ರದ ಎಲ್ಲ ಕಾರ್ಮಿಕರನ್ನು ಒಗ್ಗೂಡಿಸಿ ಐಕ್ಯ ಸಾಧಿಸುವುದಾಗಿತ್ತು. ವಿವಿಧ ಕ್ಷೇತ್ರದ ಕಾರ್ಮಿಕರ ಒಗ್ಗಟ್ಟನ್ನು ಸಾಧಿಸಿ, ಒಟ್ಟಾಗಿ ಈ ಎಲ್ಲ ದಾಳಿಗಳ ವಿರುದ್ದ ಹೋರಾಟ ಕಟ್ಟಬೇಕಿತ್ತು. ಅಂದಿನ ಸರಕಾರದ ನೀತಿಗಳ ವಿರುದ್ದ, ಅದರ ಶೋಷಣೆಯ ಆಡಳಿತ ನೀತಿಗಳ ವಿರುದ್ಧ ಸಂಘರ್ಷಕ್ಕೆ ಇಳಿಯುವ ಅನಿವಾರ್ಯತೆ ಇತ್ತು. ಆಕಾಲಘಟ್ಟದ ಅನಿವಾರ್ಯ ಬೇಡಿಕೆ ಎಂದರೆ ದೇಶದ ಇಡೀ ಕಾರ್ಮಿಕ ಸಂಘಟನೆಗಳನ್ನು ಒಗ್ಗೂಡಿಸಿ ಈ ದಾಳಿಗಳ ಮತ್ತು ಈ ಶೋಷಣೆಯ ಸರಕಾರಿ ನೀತಿಗಳ ವಿರುದ್ದ ಒಂದು ಪ್ರಬಲ ವರ್ಗ ಸಮರವನ್ನು ಸಾರುವುದೇ ಆಗಿತ್ತು.

ಆದರೆ ಅಂದು ಪ್ರಬಲವಾಗಿದ್ದ ಎಡಪಂಥೀಯ ಕಾರ್ಮಿಕ ಸಂಘಟನೆಗಳ ನಾಯಕತ್ವ ಎಐಟಿಯುಸಿಯ ಕೈಯಲಿತ್ತು. ಎಐಟಿಯುಸಿ ವರ್ಗ ಸಮರದ ಬದಲಿಗೆ, "ಎರಡು ಕಂಬ"ಗಳ ನೀತಿ ಎಂಬ ವ್ಯಾಖ್ಯಾನದ ಅಡಿ, ವರ್ಗಶಾಮೀಲಿನ ದಾರಿ ಹಿಡಿದಿತ್ತು. ವರ್ಗ ಸಂಘರ್ಷ ಎಂಬ ಪರಿಕಲ್ಪನೆಯನ್ನೇ ಅಪಹಾಸ್ಯಕ್ಕೆ ಗುರಿ ಮಾಡಲಾಯಿತು. ವರ್ಗ ಐಕ್ಯತೆ ಮತ್ತು ವರ್ಗ ಸಂಘರ್ಷದ ಪರವಾಗಿದ್ದ ಎಐಟಿಯುಸಿಯ ಕೆಲವು ನಾಯಕರುಗಳ ಗುಂಪಿಗೆ ತೀವ್ರ ಕಿರುಕುಳ ನೀಡಲಾಯಿತು. ಅವರುಗಳನ್ನು ಬಲಿಪಶುಗಳನ್ನಾಗಿ ಮಾಡಿ, ಪ್ರಜಾತಂತ್ರಕ್ಕೆ ವಿರುದ್ದವಾದ ಮತ್ತು ಅಮಾನತ್ತುಗಳ ಮೂಲಕ ಅವರುಗಳನ್ನು ತಮ್ಮ ಸ್ಥಾನಗಳಿಂದ ಕಿತ್ತು ಹಾಕಲಾಯಿತು. ವರ್ಗ ಸಂಘರ್ಷವನ್ನು ಬೆಂಬಲಿಸಿದ ಸಂಘಟನೆಗಳಿಗೆ ಮಾನ್ಯತೆ ನಿರಾಕರಿಸಲಾಯಿತು. ಮತ್ತು ಈಗಾಗಲೇ ಸಂಯೋಜನೆಗೊಂಡಿದ್ದ ಸಂಘಗಳಿಗೆ ಮಾನ್ಯತೆ ನೀಡದೆ ಕಿತ್ತು ಹಾಕಲಾಯಿತು.

ಸಂಘಟನೆಯನ್ನು ವರ್ಗಶಾಮೀಲು ಮತ್ತು ಆಳುವ ವರ್ಗದ ಜೊತೆಯ ಒಪ್ಪಂದಗಳ ಮಾರ್ಗದಿಂದ ಆಚೆ ತರಲು ಹತ್ತು ವರ್ಷಗಳ ಕಾಲ ನಡೆಸಿದ ಸತತ ಪ್ರಯತ್ನಗಳೆಲ್ಲ ವಿಫಲವಾದವು. "ಆಗ ದೇಶದ ಕಾರ್ಮಿಕ ಸಂಘಟನೆಗಳನ್ನು, ಸರಕಾರದ ಶೋಷಕ ನೀತಿಗಳ ವಿರುದ್ದ ಐಕ್ಯ ಮತ್ಯದ ಹೋರಾಟದ ಮಾರ್ಗಕ್ಕೆ ತರಲು, ಒಂದು ನೂತನ ಕಾರ್ಮಿಕ ಸಂಘಟನೆಗಳ ಕೇಂದ್ರದ ಅಗತ್ಯ ಮತ್ತು ಬೇಡಿಕೆ ಸೃಷ್ಟಿಯಾಗಿತ್ತು. ಹೀಗಾಗಿಯೇ "ಐಕ್ಯತೆ ಮತ್ತು ಹೋರಾಟ" ಎನ್ನುವ ಗರ್ಜನೆಯ ಘೋಷವಾಕ್ಯದೊಂದಿಗೆ "ಸಿಐಟಿಯು"ವಿನ ಉದಯವಾಯಿತು. ಇದರ ಮೊದಲ ಅಧ್ಯಕ್ಷರಾಗಿ ಬಿ.ಟಿ. ರಣದಿವೆ ಮೊದಲ ಮತ್ತು ಮೊದಲ ಪ್ರಧಾನ ಕಾರ್ಯದರ್ಶಿ ಆಗಿ ಪಿ. ರಾಮಮೂರ್ತಿ ಚುನಾಯಿತರಾದರು.

ಸಿಐಟಿಯು ಪ್ರಾರಂಭವಾದ ಕೆಲವೇ ದಿನಗಳಲ್ಲಿ ಅದನ್ನು ಪ್ರತ್ಯೇಕಿಸಿ, ಒಂಟಿಯಾಗಿಸುವ ಮತ್ತು ಅದರ "ಐಕ್ಯತೆ" ಪರಿಕಲ್ಪನೆಯನ್ನು ಪರಿಹಾಸ್ಯ ಮಾಡುವ ಎಲ್ಲ ಶಕ್ತಿಗಳಿಗೂ "ಸಿಐಟಿಯು" ತನ್ನ ಕಾರ್ಯಾಚರಣೆಯ ಮೂಲಕ ಸೂಕ್ತ ಉತ್ತರ ನೀಡಿತು.

- ಸಿಐಟಿಯು ಸ್ಥಾಪನೆ ಆದ ಕೆಲವೇ ಸಮಯದಲ್ಲಿ, ಕೇಂದ್ರ ಕಾರ್ಮಿಕ ಸಚಿವರ ಚಿತಾವಣೆ ಮೇರೆಗೆ, ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಸಮಿತಿ (ಎನ್‌ಸಿಟಿಯು) ಯನ್ನು ಸರಕಾರದ ನೀತಿಗಳನ್ನು ಬೆಂಬಲಿಸಲೆಂದೇ ರಚಿಸಲಾಯಿತು. ಇದರಲ್ಲಿ ಐಎನ್‌ಟಿಯುಸಿ, ಎಐಟಿಯುಸಿ ಮತ್ತು ಹೆಚ್‌ಎಮ್‌ಎಸ್ ಸೇರ್ಪಡೆಯಾಗಿದ್ದವು. ಸಿಐಟಿಯುನ ಕಾರ್ಯತತ್ಪರತೆಯಿಂದಾಗಿ, ಇತರ ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕಾ ಕಾರ್ಮಿಕ ಒಕ್ಕೂಟಗಳನ್ನು ಒಗ್ಗೂಡಿಸಿ, ಯುಸಿಟಿಯು (ಕಾರ್ಮಿಕ ಸಂಘಟನೆಗಳ ಐಕ್ಯ ಸಮಿತಿ) ವನ್ನು ರಚಿಸಲಾಯಿತು. ಇದು ಮುಖ್ಯವಾಗಿ ಸರಕಾರದ ನೀತಿಗಳಾದ ವೇತನ ಸ್ಥಗಿತ, ಕಡ್ಡಾಯ ಠೇವಣಿ ಯೋಜನೆ ಇತ್ಯಾದಿಗಳ ವಿರುದ್ದ ಹೋರಾಟವನ್ನು ನಿರ್ವಹಿಸಿತು.
- ಆಳುವ ವರ್ಗಗಳು ತಮ್ಮ ಪ್ರತ್ಯೇಕಗೊಳಿಸುವ ಮತ್ತು ಸಂಘಟನೆಗಳನ್ನು ಒಂಟಿಯಾಗಿಸುವ ತಂತ್ರಗಳನ್ನು ಎನ್‌ಸಿಟಿಯು ಮೂಲಕ ಜಾರಿಗೊಳಿಸಲು ಯತ್ನಿಸಿತು. ಆದರೆ ಈ ಕ್ರಮಗಳು ಹೆಚ್ಚು ಕಾಲ ಮುಂದುವರೆಯಲಿಲ್ಲ. ಏಕೆಂದರೆ ಇದರ ವಿರುದ್ದ ಸಿಐಟಿಯು ಕೈಗಾರಿಕೆಗಳಲ್ಲಿ ಮತ್ತು ಸೇವಾ ಸಂಸ್ಥೆಯಲ್ಲಿ ಇದ್ದ ಇತರ ಶಕ್ತಿಗಳನ್ನು ಒಗ್ಗೂಡಿಸಿ, ಹೋರಾಟಗಳನ್ನು ಸಂಯುಕ್ತವಾಗಿ ಮತ್ತು ಆಕ್ರಮಣಕಾರಿಯಾಗಿ ಯಶಸ್ವಿಯಾಗಿ ಯೋಜಿಸಿತ್ತು. ಕೇವಲ 3 ವರ್ಷಗಳಲ್ಲಿ ಎನ್‌ಸಿಟಿಯು ಛಿದ್ರವಾಯಿತು. ಸಿಐಟಿಯು ವಿನ ನಿರಂತರವಾದ ಕಾರ್ಯಾಚರಣೆ ಮತ್ತು ಅದರ ಮಧ್ಯ ಪ್ರವೇಶ, ವಿವಿಧ ಕೈಗಾರಿಕೆಗಳು ಮತ್ತು ಸೇವಾ ಸಂಸ್ಥೆಗಳಲ್ಲಿ ವರ್ಗ ಶಾಮೀಲು ನೀತಿಗಳ ವಿರುದ್ದ ಹೋರಾಟಗಳು– ಮುಂತಾದವುಗಳ ಮೂಲಕ, ದೇಶದ ಕಾರ್ಮಿಕ ಚಳುವಳಿಯಲ್ಲಿ ಹೊಸದಾದ ಒಡನಾಟ ಮತ್ತು ಸಂಬಂಧಗಳು ಬೆಳೆಯಲಾರಂಭಿಸಿದವು.
- ಸಿಐಟಿಯುವಿನ ಸ್ಥಾಪನೆಯಾದ ಕೆಲವೇ ದಿನಗಳಲ್ಲಿ, ಮೂಡಿದ ಐಕ್ಯ ಹೋರಾಟಗಳಲ್ಲಿ ಬಹುಮುಖ್ಯವಾದ್ದು 1974ರಲ್ಲಿ ದೇಶದ ಉದ್ದಗಲಕ್ಕೂ ನಡೆದ ರೈಲ್ವೇ ಕಾರ್ಮಿಕರ ಮುಷ್ಕರ. ಈ ಸಂಘರ್ಷ ದೇಶದ ಇಡೀ ಕಾರ್ಮಿಕ ವರ್ಗದಲ್ಲಿ ವಿದ್ಯುತ್ ಸಂಚಲನಗೊಳಿಸಿತು. ಇಪ್ಪತ್ತು ದಿನಗಳ ಈ ಮುಷ್ಕರದಲ್ಲಿ ಕಾರ್ಮಿಕರು ಅಮಾನುಷವಾದ ದಮನವನ್ನು ಧೈರ್ಯದಿಂದ ಎದುರಿಸಿದರು ಮತ್ತು ಬಲಿಪಶುಗಳಾದರು. ಇವೆಲ್ಲದರ ಮೂಲಕ ಕಾರ್ಮಿಕ ವರ್ಗಕ್ಕೆ ಆ ಮುಷ್ಕರ ಇಂದಿಗೂ ಸ್ಪೂರ್ತಿಯ ಸೆಲೆಯಾಗಿದೆ. ರೈಲ್ವೆ ಕಾರ್ಮಿಕರನ್ನು ದೇಶದ ಸಂಯುಕ್ತ ಕಾರ್ಮಿಕ ಪಥದತ್ತ ತರುವಲ್ಲಿ ಸಿಐಟಿಯು ಬಹು ಮುಖ್ಯ ಪಾತ್ರವನ್ನು ವಹಿಸಿತ್ತು. ಈ ಐತಿಹಾಸಿಕ ಚಳುವಳಿಯ ನೇತೃತ್ವ ವಹಿಸಿದ್ದು ಎನ್.ಸಿ.ಸಿ.ಆರ್.ಎಸ್ (ರೈಲ್ವೆ ಕಾರ್ಮಿಕರ ಹೋರಾಟ ರಾಷ್ಟ್ರೀಯ ಸಮನ್ವಯ ಸಮಿತಿ)ಯಲ್ಲಿ, ಐಎನ್‌ಟಿಯುಸಿ ಹೊರತಾಗಿ ಸಿಐಟಿಯುವನ್ನು ಒಳಗೊಂಡ ಎಲ್ಲ ಪ್ರಧಾನ ಕೇಂದ್ರ ಕಾರ್ಮಿಕ ಸಂಘಟನೆಗಳೂ ಸೇರಿದ್ದವು. ಸಿಐಟಿಯು ಈ ಹೋರಾಟದಲ್ಲಿ ಬಲಿಪಶುಗಳಾದ ಕಾರ್ಮಿಕರಿಗೆ ಕಾನೂನು ನೆರವು,ಸೌಹಾರ್ದ ಬೆಂಬಲ ಸೂಚಿಸುವ ಕಾರ್ಯಕ್ರಮಗಳ ಸಂಘಟನೆ ಹಾಗೂ ಇತರ ಎಲ್ಲ ರೀತಿಯ ಪರಿಹಾರ ಮತ್ತು ಬೆಂಬಲವನ್ನು ನೀಡಿತ್ತು.
- ತುರ್ತು ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಮೇಲೆ ತೀವ್ರ ಧಾಳಿ ಮತ್ತು ದಮನಗಳು ನಡೆದವು. ಆದರೂ ಕ್ರಿಯಾತ್ಮಕವಾಗಿ ಜನತೆಯ ಹೋರಾಟಗಳನ್ನು ಬೆಂಬಲಿಸುತ್ತಾ, ಐ.ಎಲ್.ಓ.ಗೆ ದೂರು ನೀಡುವುದರ ಮೂಲಕ ಕಾರ್ಮಿಕ ಸಂಘಟನೆಯ ಹಕ್ಕುಗಳ ಮೇಲಿನ ಸರಕಾರದ ಆಕ್ರಮಣಗಳನ್ನು ಸಿಐಟಿಯು ಬಯಲಿಗೆ ಎಳೆಯಿತು.
- ಎರಡನೇ ಪ್ರಮುಖ ಘಟನೆ ಎಂದರೆ ಕೇಂದ್ರದಲ್ಲಿ ಜನತಾಪಕ್ಷ ಆಡಳಿತಕ್ಕೆ ಬಂದಾಗ, 1978ರಲ್ಲಿ ತರಲು ಹವಣಿಸಿದ ಕುಖ್ಯಾತ "ಕೈಗಾರಿಕಾ ಸಂಬಂಧ ಮಸೂದೆ, 78" ರ ವಿರುದ್ದ ದೇಶಾದ್ಯಾಂತ ಕಟ್ಟಲಾದ ಪ್ರತಿಭಟನಾ ಹೋರಾಟ. ಇದರಿಂದಾಗಿ ಈ ಮಸೂದೆಯನ್ನು ಕೊನೆಗೆ ಇತಿಹಾಸದ ಕಸದ ಬುಟ್ಟಿಗೆ ಎಸೆಯಲಾಯಿತು. ಈ ಪ್ರಕ್ರಿಯೆಯಲ್ಲಿ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಪ್ರಚಾರಾಂದೋಲನ ಸಮಿತಿ (ನೇಶನಲ್ ಕ್ಯಾಂಪೈನ್ ಕಮಿಟಿ) ಯನ್ನು 1981 ರ ಕಾಂಗ್ರೆಸ್(ಐ) ಆಡಳಿತದ ಅವಧಿಯಲ್ಲಿ ಸ್ಥಾಪಿಸಲಾಯಿತು. ಇದರಲ್ಲಿ ಐಎನ್‌ಟಿಯುಸಿ ಹೊರತು ಪಡಿಸಿ, ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳು ಸೇರಿದ್ದವು.
- ಮೂರನೇ ಪ್ರಮುಖ ಘಟನೆ ಎಂದರೆ, ಐಎನ್‌ಟಿಯುಸಿ ಹೊರತು ಪಡಿಸಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು 1982ರ ಜನವರಿ, 19ರಂದು ಪಪ್ರಥಮವಾಗಿ ಯಶಸ್ವಿಯಾಗಿ ಕೈಗೊಂಡ ಸಾರ್ವತ್ರಿಕ ಮುಷ್ಕರ. ಈ ಮುಷ್ಕರದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ಬೇಡಿಕೆಗಳನ್ನು ಮುನ್ನೆಲೆಗೆ ತರಲಾಯಿತು. ದೇಶದ ಹಲವು ಕಡೆ ಅವರುಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪೋಲೀಸರು ನಡೆಸಿದ ಗೋಲಿಬಾರ್ ಗೆ ಕೃಷಿ ಕಾರ್ಮಿಕರನ್ನು ಒಳಗೊಂಡು 10 ಜನ ಕಾರ್ಮಿಕರು ಮೃತಪಟ್ಟರು.
- ಸಾರ್ವಜನಿಕ ವಲಯದ ಘಟಕಗಳ (ಪಿ.ಎಸ್.

ಪುಟ 14 ಕ್ಕೆ



ಹಾಲಿ ರಾಜ್ಯದಲ್ಲಿ 100 ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳ ಪಾಲು 75.56 ಶೇಕಡದಷ್ಟಿದೆ. ಒಂದು ವೇಳೆ ಉದ್ದೇಶಿತ ತಿದ್ದುಪಡಿ ತಂದು ಕೈಗಾರಿಕಾ ವಿವಾದಗಳ ಕಾಯ್ದೆ–1947ರ ಅಧ್ಯಾಯ 5'B' ಯಲ್ಲಿನ ಮಿತಿಯನ್ನು 300ಕ್ಕೆ ಹೆಚ್ಚಿಸಿದಲ್ಲಿ ರಾಜ್ಯದ 90.76 ಶೇಕಡ ಕಾರ್ಖಾನೆಗಳನ್ನು ಲೇಆಫ್, ರಿಟ್ರೆಂಚ್ ಮತ್ತು ಕ್ಲೋಶರ್ ಮಾಡಲು ಸರ್ಕಾರದ ಅನುಮತಿ ಅಗತ್ಯವಿರುವುದಿಲ್ಲ. ಕಾರ್ಖಾನೆಯ ಪರಿಭಾಷೆಯಿಂದ ಹಾಲಿ ವಿದ್ಯುತ್‌ನೊಂದಿಗೆ 10 ಕಾರ್ಮಿಕರ ಕನಿಷ್ಠ ಮಿತಿಯನ್ನು ಸಡಿಲಿಸಿ 50ಕ್ಕೆ ಹೆಚ್ಚಳ ಮಾಡುವ ಕ್ರಮವು ಜಾರಿಗೆ ಬಂದಲ್ಲಿ ರಾಜ್ಯದ 64.24 ಶೇಕಡ ಕಾರ್ಖಾನೆಗಳು, ಕಾರ್ಖಾನೆ ಕಾಯ್ದೆಯ ವ್ಯಾಪ್ತಿಯಿಂದ ಹೊರಗುಳಿಯಲಿವೆ.

ಹಾಲಿ ರಾಷ್ಟ್ರಾದ್ಯಂತ ಕಾರ್ಖಾನೆಗಳಲ್ಲಿನ ನಿವ್ವಳ ಮೌಲ್ಯ ವರ್ಧನೆಯ ಪ್ರತಿ 100 ರೂ. ಗಳಲ್ಲಿ ಮಾಲೀಕರ ಲಾಭದ ಪಾಲು 47 ರೂ. ಗಳಾದರೆ, ಕಾರ್ಮಿಕರ ವೇತನದ ಪಾಲು ಕೇವಲ 15 ರೂ. ಗಳಾಗಿರುತ್ತದೆ. ಮೇಲಿನ ಉದ್ದೇಶಿತ ತಿದ್ದುಪಡಿ ಕ್ರಮಗಳನ್ನು ಸರ್ಕಾರವೇನಾದರೂ ತಂದಲ್ಲಿ ಕಾರ್ಮಿಕರ ವೇತನದ ಪಾಲು ಮತ್ತಷ್ಟು ಕುಸಿದು, ಆರ್ಥಿಕತೆಯಲ್ಲಿ ಬೇಡಿಕೆಯ ಕೊರತೆ ಸೃಷ್ಟಿಯಾಗಿ, ರಾಜ್ಯದ ಆರ್ಥಿಕತೆಯಲ್ಲಿ ಕೊಳ್ಳುವ ಶಕ್ತಿಯ ಕೊರತೆ ಉಂಟಾಗಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ. ಲಾಕ್‌ಡೌನ್ ನಿಂದಾಗಿ ಕಂಡಿರುವ ಆರ್ಥಿಕ ಹಿನ್ನಡೆಯು ಮತ್ತಷ್ಟು ತೀವ್ರ ಹಿನ್ನಡೆಗೆ ನಾಂದಿಯಾಗಲಿದೆ.

ಶತಮಾನಗಳ ಹೋರಾಟದಿಂದ ಗಳಿಸಿದ ಹಕ್ಕುಗಳನ್ನು ಇಲ್ಲವಾಗಿಸುವ ಕಾರ್ಮಿಕ ಕಾನೂನುಗಳ ತಿದ್ದುಪಡಿ

ಕೆ.ಎನ್. ಉಮೇಶ್



ಕೋವಿಡ್–19 ವೈರಾಣು ಜಗತ್ತಿನಾದ್ಯಂತ ಬಲಿ ಪಡೆದಿರುವಾಗ, ಅದರ ನೆಪದಲ್ಲಿ ಲಾಕ್ಡೌನ್‌ಗಳ ಕಾರಣ ನೀಡಿ ಶತಮಾನಗಳ ಹೋರಾಟದಿಂದ ಕಾರ್ಮಿಕ ವರ್ಗವು ಗಳಿಸಿರುವ ಹಕ್ಕುಗಳನ್ನು ಇಲ್ಲವಾಗಿಸಲು ಆಳುವ ಸರ್ಕಾರಗಳು ಮುಂದಾಗಿವೆ. ಭಾರತದಲ್ಲಂತೂ ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳಿಂದ ಬಂಡವಾಳಗಾರರಿಗೆ ರಿಯಾಯಿತಿ, ವಿನಾಯಿತಿ ನೀಡಲು ತುದಿಗಾಲಲ್ಲಿ ನಿಂತು ಪೈಪೋಟಿ ನಡೆಸಿವೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಇಡಿ ಕಾರ್ಮಿಕ ಕಾನೂನುಗಳನ್ನೇ ಅಮಾನತ್ತುಗೊಳಿಸುತ್ತಿವೆ. ಉತ್ತರ ಪ್ರದೇಶದ ಬಿಜೆಪಿ ಸರ್ಕಾರ 1000 ದಿನ ಕಾರ್ಮಿಕ ಕಾನೂನುಗಳನ್ನು ಅಮಾನತ್ತುಗೊಳಿಸಿದರೆ ಮಧ್ಯಪ್ರದೇಶ ಬಿಜೆಪಿ ಸರ್ಕಾರವು 1200 ದಿನ ಅಮಾನತ್ತಿಗೆ ಕ್ರಮವಹಿಸಿದೆ. ಗುಜರಾತ್ ಬಿಜೆಪಿ ಸರ್ಕಾರವು ಇದರಲ್ಲಿ ಹಿಂದೆ ಬೀಳದಿರಲು ಪೈಪೋಟಿ ನಡೆಸಿದೆ.

ಕೋವಿಡ್–19 ಲಾಕ್ಡೌನ್ ಕಾಲಾವಧಿಯಲ್ಲಿ ಕಾರ್ಮಿಕ ಕಾನೂನುಗಳ ಈ ತಿದ್ದುಪಡಿ ಸರಣಿಯನ್ನು ದಿನದ ಕೆಲಸದ ಅವಧಿಯನ್ನು 8 ರಿಂದ 12 ಗಂಟೆಗೆ ಹೆಚ್ಚಿಸುವ ಮೂಲಕ ಆರಂಭಿಸಿದ್ದು ರಾಜಸ್ತಾನದ ಕಾಂಗ್ರೆಸ್ ಸರ್ಕಾರ. ಆದರೆ ಇದೀಗ ಅದನ್ನು ಹಿಂದೆ ಪಡೆದಿದೆ. ಅನಂತರ ಗುಜರಾತ್ ಸರ್ಕಾರ, ಪಂಜಾಬ್, ಹಿಮಾಚಲ ಪ್ರದೇಶ ಸರ್ಕಾರಗಳು ಅದೇ ಕ್ರಮಗಳನ್ನು ಜರುಗಿಸಿವೆ. ಕಾಂಗ್ರೆಸ್ ಸರ್ಕಾರಗಳು ಹೆಚ್ಚುವರಿ ಕೆಲಸಕ್ಕೆ ಓ.ಟಿ. ವೇತನ (ದುಪ್ಪಟ್ಟು ವೇತನ) ನೀಡಬೇಕೆಂದಿದ್ದರೆ. ಬಿಜೆಪಿ ಸರ್ಕಾರಗಳು ಮಾತ್ರ ಪ್ರೋರೇಟಾ ವೇತನ ನೀಡಿದರೆ ಸಾಕು, ದುಪ್ಪಟ್ಟು ವೇತನ ನೀಡಬೇಕೆಂದಿಲ್ಲ ಎಂದಿವೆ. ಈ ಎಲ್ಲಾ ಆದೇಶಗಳನ್ನು ಕಾರ್ಯಾಂಗದ ಆದೇಶಗಳ ಮೂಲಕವೇ ಮಾಡಿ ಮುಗಿಸಿವೆ. ಕಾರ್ಮಿಕ ಕಾಯ್ದೆಗಳನ್ನು ಇಲ್ಲವಾಗಿಸುವ ಕ್ರಮವನ್ನು ಸುಗ್ರೀವಾಜ್ಞೆ ಮೂಲಕ ಮಾಡುತ್ತಿವೆ. ದಿನದ ಕೆಲಸದ ಅವಧಿಯನ್ನು ಕಾರ್ಯಾಂಗದ ಆದೇಶದ ಮೂಲಕ 8 ರಿಂದ 12 ಗಂಟೆಗೆ ಹೆಚ್ಚಳ ಮಾಡಿದ್ದ ಉತ್ತರ ಪ್ರದೇಶದ ರಾಜ್ಯ ಸರ್ಕಾರವು ಅಲಹಾಬಾದ್ ಉಚ್ಚನ್ಯಾಯಾಲಯದ ನೋಟಿಸ್ ಹಿನ್ನೆಲೆಯಲ್ಲಿ ಹಿಂದೆ ಪಡೆದಿದೆ. ಆದರೆ 1000 ದಿನಗಳು ಕಾರ್ಮಿಕ ಕಾನೂನುಗಳನ್ನು ಅಮಾನತ್ತುಗೊಳಿಸುವ ಸುಗ್ರೀವಾಜ್ಞೆ ಮುಂದುವರೆಸಿದೆ. ಬಿಹಾರ್ ರಾಜ್ಯ ಸರ್ಕಾರವು ಈ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗುತ್ತಿದೆ.

ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರವು 22.5.2020 ರಿಂದ ದಿನದ ಕೆಲಸದ ಅವಧಿಯನ್ನು 8 ರಿಂದ 10 ಗಂಟೆಗೆ ವಾರದ ಕೆಲಸದ ಅವಧಿಯನ್ನು 48 ರಿಂದ 60 ಗಂಟೆಗಳಿಗೆ ಹೆಚ್ಚಿಸಿ ಕಾರ್ಖಾನೆಗಳ ಕಾಯ್ದೆ–1948 ರ ಕಲಂ 51 ಮತ್ತು 54 ರಿಂದ ಮಾಲೀಕರಿಗೆ ರಿಯಾಯಿತಿ ನೀಡಿದೆ. ರಾಜ್ಯದಲ್ಲೂ ಸಹಾ ಉತ್ತರ ಪ್ರದೇಶ ಮಾದರಿ ಸುಗ್ರೀವಾಜ್ಞೆಗೆ ಸಕಲ ಸನ್ನದ್ಧತೆಯನ್ನು ನಡೆಸಿದೆ. ವಿರೋಧ ಪಕ್ಷಗಳು ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿರೋಧದಿಂದಾಗಿ ಸ್ವಲ್ಪ ತಡ ಮಾಡಿ ಜಾರಿಗೆ ತರಲು ಹೊಂಚು ಹಾಕಿ ಕುಳಿತಿರುವಂತೆ ಕಾಣುತ್ತಿದೆ.

ಕೇಂದ್ರ ಕಾರ್ಮಿಕ ಇಲಾಖೆಯು ಎಲ್ಲಾ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದು ಕೂಡಲೇ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಕ್ರಮವಹಿಸಬೇಕೆಂದು ನಿರ್ದೇಶಿಸಿದೆ. ಈ ತಿದ್ದುಪಡಿಗಳಲ್ಲಿ ದಿನದ ಕೆಲಸದ ಅವಧಿ ಹೆಚ್ಚಳ ಸೇರಿರಬೇಕು. ಕಾರ್ಖಾನೆ ಪರಿಭಾಷೆಗೆ ಇರುವ 'ವಿದ್ಯುತ್ ಇರುವ ಕಾರ್ಖಾನೆಗಳಲ್ಲಿ 10 ಮತ್ತು ವಿದ್ಯುತ್‌ರಹಿತ ಕಾರ್ಖಾನೆಗಳಲ್ಲಿ 20 ಕಾರ್ಮಿಕರ (ತ್ರೆಶೋಲ್ಡ್) ಮಿತಿ'ಯನ್ನು, ಅನುಕ್ರಮವಾಗಿ 20 ಮತ್ತು 40ಕ್ಕೆ ಹೆಚ್ಚಿಸಲು ಕಾರ್ಖಾನೆಗಳ ಕಾಯ್ದೆ–1948ನ್ನು ತಿದ್ದುಪಡಿ ಮಾಡಬೇಕು. ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ)ಕಾಯ್ದೆ–1970 ರಲ್ಲಿನ 20 ಕಾರ್ಮಿಕರ (ತ್ರೆಶೊಲ್ಡ್) ಮಿತಿಯನ್ನು 50ಕ್ಕೆ ಹೆಚ್ಚಿಸಬೇಕು. ಅಂತೆಯೇ ಕೈಗಾರಿಕಾ ವಿವಾದ ಕಾಯ್ದೆ 1947ರ ಅಧ್ಯಾಯ 5ರಲ್ಲಿನ ಲೇ–ಆಫ್, ರಿಟ್ರೆಂಚ್‌ಮೆಂಟ್ ಮತ್ತು ಕಾರ್ಖಾನೆಗಳ ಕೋಶರ್ಸ್‌ಗೆ 100ಕ್ಕಿಂತ ಹೆಚ್ಚು ಕಾರ್ಮಿಕರಿದ್ದಲ್ಲಿ ಸರ್ಕಾರದ ಪೂರ್ವಾನುಮತಿಯ ಕಡ್ಡಾಯವನ್ನು 300ಕ್ಕಿಂತ ಹೆಚ್ಚು ಕಾರ್ಮಿಕರಿದ್ದಲ್ಲಿ ಮಾತ್ರ ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು – ಎಂದುತಿದ್ದುಪಡಿಗಳನ್ನು ಮಾಡುವ ಕುರಿತುಹಲವು ನಿರ್ದೇಶನಗಳನ್ನು ನೀಡಿದೆ. ಮಾತ್ರವಲ್ಲ ವಾರಕ್ಕೊಮ್ಮೆ ಕಾರ್ಮಿಕ ಕಾನೂನುಗಳ ತಿದ್ದುಪಡಿಯ ಕೆಲಸದಲ್ಲಿ ಆಗಿರುವ ಪ್ರಗತಿಯ ವಿವರ ನೀಡಬೇಕೆಂದೂ ರಾಜ್ಯಗಳ ಕಾರ್ಮಿಕ ಇಲಾಖೆಗೆ ಬರೆದ ಪತ್ರದಲ್ಲಿ ನಿರ್ದೇಶಿಸಿದೆ. ಪ್ರತಿವಾರ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ವರದಿ ಪಡೆಯುತ್ತಿದೆ. ಕೇರಳದ ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕ ಮೈತ್ರಿಕೂಟದ ಸರ್ಕಾರವು ಕಾರ್ಮಿಕ ಹಕ್ಕುಗಳನ್ನು ಇಲ್ಲವಾಗಿಸಲು ಕಾನೂನು ಸಡಿಲಿಕೆಯ ಪ್ರಶ್ನೆಯನ್ನು ಸಾರಾಸಗಟಾಗಿ ತಳ್ಳಿಹಾಕಿದೆ.

ಇದೇನು ಮೊದಲ ಪ್ರಯತ್ನವಲ್ಲ :

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದ 6 ತಿಂಗಳಲ್ಲೆ ಕಾರ್ಮಿಕ ಕಾನೂನುಗಳ ಸುಧಾರಣೆ ಹೆಸರಲ್ಲಿ ಕಾಯ್ದೆಗಳ ತಿದ್ದುಪಡಿಗೆ ಯತ್ನಿಸಿತ್ತು. ರಾಷ್ಟ್ರಾದ್ಯಂತ ಬಂದ ಪ್ರತಿರೋಧ ಗಮನಿಸಿ, ರಾಜ್ಯ ಸರ್ಕಾರಗಳ ಮೂಲಕ ಅದನ್ನು ಸಾಧಿಸಲು ರಾಜಸ್ತಾನದ ಬಿಜೆಪಿ ರಾಜ್ಯ ಸರ್ಕಾರದಿಂದ ಆರಂಭಿಸಿ ನಂತರ ತನ್ನ ಎಲ್ಲಾ ರಾಜ್ಯ ಸರ್ಕಾರಗಳ ಮೂಲಕ ಅದನ್ನು ಸಾಧಿಸಲು ಮುಂದಾಗಿತ್ತು. ಸ್ವಲ್ಪ ಮಟ್ಟಿಗೆ ಯಶಸ್ವಿಯೂ ಆಗಿತ್ತು. ಅಷ್ಟೇ ಪ್ರಮಾಣದ ಪ್ರತಿರೋಧವು ಉಂಟಾಗಿತ್ತು.

ಅದನ್ನು ಮನಗಂಡು ಒಂದೊಂದು ಕಾಯ್ದೆಗೆ ತಿದ್ದುಪಡಿ ಮಾಡುವ ಪ್ರಯಾಸದಾಯಕ ಯತ್ನದ ಬದಲು 44 ಕೇಂದ್ರ ಕಾರ್ಮಿಕ ಕಾಯ್ದೆಗಳನ್ನು 4 ಸಂಹಿತೆಗಳನ್ನಾಗಿ ಮಾಡಿ ಕೇಂದ್ರ ಸರ್ಕಾರವು ಸಾಧಿಸಲು ಮುಂದಾಯಿತು. ವೇತನ ಕುರಿತು ಕಾಯ್ದೆಗಳನ್ನು ಒಟ್ಟುಗೂಡಿಸಿ ವೇತನ ಸಂಹಿತೆಯನ್ನು 2019ರಲ್ಲಿ ಅಂಗೀಕರಿಸಿದೆ. ಸಂವಿಧಾನದಲ್ಲಿನ ಪ್ರಭುತ್ವ ನೀತಿಗಳಿಗಾಗಿ ನಿರ್ದೇಶಕ ತತ್ವಗಳಡಿಯ ನ್ಯಾಯ ಸಮ್ಮತ ವೇತನ (Fair Wages) ಅಥವಾ ಜೀವಿತ ವೇತನ (Living Wages) ಅಂಶಗಳನ್ನು ಒಳಗೊಳಿಸುವ ಬದಲು 'ರಾಷ್ಟ್ರೀಯ ತಳಮಟ್ಟದ ಕನಿಷ್ಟ ವೇತನ' (National Floor Level Minimum Wages) ಅನ್ನು ಅದರಲ್ಲಿ ಒಳಗೊಳಿಸಿ, ಅದರಡಿಯ ನಿಯಮಗಳಲ್ಲಿ ದೈನಿಕ ರೂ.159 ಕೂಲಿ ನಿಗದಿಗೊಳಿಸಿದೆ. ಅಂತೆಯೇ ಕೈಗಾರಿಕಾ ಸಂಬಂಧಗಳ ಸಂಹಿತೆ (IR Code), ಸಾಮಾಜಿಕ ಸುರಕ್ಷತಾ ಸಂಹಿತೆ (Social Security Code), ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಸೇವಾ ಶರತ್ತುಗಳ ಸಂಹಿತೆ (OSH & WC Code) ಗಳನ್ನು ಸಂಸತ್ತಿನಲ್ಲಿ ಮಂಡಿಸಿ ಅಂಗೀಕರಿಸಲು ಮುಂದಾಗಿದೆ.

ಆದರೆ 6 ವರ್ಷವಾದರೂ ಈ ಪ್ರಕ್ರಿಯೆ ಮುಗಿಯದ ಕಾರಣ, ಇದೀಗ ಕೋವಿಡ್–19 ಲಾಕ್ಡೌನ್ ನೆಪದಲ್ಲಿ ಅವುಗಳನ್ನು ರಾಜ್ಯ ಸರ್ಕಾರಗಳ ಮೂಲಕ ಸುಗ್ರೀವಾಜ್ಞೆ ಮುಂತಾದ ಅಸ್ತ್ರ ಬಳಸಿ ಮಾಡಿ ಮುಗಿಸಲು ಮುಂದಾಗಿದೆ. ಪ್ರತಿರೋಧವನ್ನು ಹತ್ತಿಕ್ಕಲು ಪ್ರಕೃತಿ ವಿಕೋಪ ನಿರ್ವಹಣ ಕಾಯ್ದೆ–2005 ಅನ್ನು ಬಳಸಲು ಯತ್ನಿಸಿದೆ. ಆದರೂ ಕಾರ್ಮಿಕರ ಪ್ರತಿರೋಧ ಲಾಕ್ಡೌನ್ ನಿಷೇಧಾಜ್ಞೆಗಳ ನಡುವೆಯೂ ಇತಿಮಿತಿಯಲ್ಲೇ ಎಲ್ಲೆಡೆ ಮುಂದುವರೆದಿದೆ.

ಬಿಜೆಪಿ ಸರ್ಕಾರಕ್ಕೆ ಕಾರ್ಮಿಕ ಹಕ್ಕುಗಳ ದಮನ ಸೈದ್ಧಾಂತಿಕ ಬದ್ಧತೆಯ ಪ್ರಶ್ನೆ :

ಬಿಜೆಪಿಗೆ ಯಾವಾಗೆಲ್ಲಾ ಸರ್ಕಾರಗಳಲ್ಲಿ

ಪುಟ 10 ಕ್ಕೆ





ಶತಮಾನಗಳ ಹೋರಾಟದಿಂದ ಗಳಿಸಿದ ಹಕ್ಕುಗಳನ್ನು ಇಲ್ಲವಾಗಿಸುವ ....

ಪುಟ 9 ರಿಂದ

ಪಾತ್ರವಹಿಸಲು ಅವಕಾಶ ಲಭಿಸಿದೆಯೋ ಆವಾಗೆಲ್ಲಾ ಈ ಪ್ರಯತ್ನವನ್ನು ನಡೆಸುತ್ತಲೇ ಬಂದಿದೆ. ಪ್ರಾರಂಭದಲ್ಲಿ ಕೇಂದ್ರದ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರ್ಕಾರದಲ್ಲಿ ಬ್ರಿಟೀಷರು 1929ರಲ್ಲಿ ತರಲು ಉದ್ದೇಶಿಸಿದ್ದ ಕೈಗಾರಿಕಾ ಸಂಬಂಧಗಳ ಕಾಯ್ದೆ, ಯಾವುದನ್ನು ಭಗತ್‌ಸಿಂಗ್ ಮತ್ತು ಸಂಗಡಿಗರು ಅಂದಿನ ಸಂಸತ್ತಿನಲ್ಲಿ ಬಾಂಬ್ ಎಸೆದು ತಡೆದಿದ್ದರೋ, ಅಂತಹದೇ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಮುಂದಾಗಿತ್ತು. ಕಾರ್ಮಿಕರ ಪ್ರತಿರೋಧ ಅದನ್ನು ಹಿಮ್ಮೆಟ್ಟಿಸಿತ್ತು.

ಅನಂತರ ಬಿಜೆಪಿಯ ವಾಜಪೇಯಿ ನೇತೃತ್ವ ಎನ್‌ಡಿಎ ಕೇಂದ್ರ ಸರ್ಕಾರವು ಮುರಾರ್ಜಿ ದೇಸಾಯಿಯವರ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದ ಕುಖ್ಯಾತ ಕೈಗಾರಿಕಾ ಸಂಬಂಧಗಳ ಮಸೂದೆಯ ಕರ್ತೃಗಳಾಗಿದ್ದ ಶ್ರೀ ರವೀಂದ್ರ ವರ್ಮಾರವರ ಅಧ್ಯಕ್ಷತೆಯಲ್ಲಿ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು 1999ರಲ್ಲಿ ರಚಿಸಿತ್ತು. ಆಯೋಗವು 2002 ಜೂನ್ 29 ರಂದು ಅಂದಿನ ಪ್ರಧಾನಿಗಳಿಗೆ ವರದಿ ಸಲ್ಲಿಸಿತ್ತು. ವರದಿ ಕೈ ಸೇರಿ 18 ವರ್ಷ ಪೂರ್ಣಗೊಳ್ಳುವ ಒಳಗಾದರೂ ಅದರ ಅಂಶಗಳನ್ನು ಜಾರಿ ಮಾಡಬೇಕೆಂಬ ಹಠಕ್ಕೆ ಬಿಜೆಪಿ ಸರ್ಕಾರಗಳು ಬಿದ್ದಿವೆ. ಭಾರತದ ಕಾರ್ಮಿಕ ವರ್ಗವು 18 ವರ್ಷಗಳಿಂದ ಅದಕ್ಕೆ ತಡೆ ಒಡ್ಡಿ ನಿಂತಿದೆ. 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ಶಿಫಾರಸ್ಸಿನ ಅಂಶಗಳನ್ನು ಕೋವಿಡ್ ನೆಪದಲ್ಲಿ ಜಾರಿಗೆ ಬಿಜೆಪಿ ಸರ್ಕಾರಗಳು ಮುಂದಾಗಿವೆ. ಹಾಗಾಗಿ ಕಾರ್ಮಿಕ ಹಕ್ಕುಗಳ ದಮನವು ಬಿಜೆಪಿಗೆ ತನ್ನ ಸೈದ್ಧಾಂತಿಕ ಬದ್ಧತೆಯ ಪ್ರಶ್ನೆಯಾಗಿದೆ, ತಾನು ಪ್ರತಿನಿಧಿಸುವ ಕಾರ್ಪೋರೇಟ್ ಬಹುರಾಷ್ಟ್ರೀಯ ಬಂಡವಾಳ, ಏಕಸ್ವಾಮ್ಯ ಬಂಡವಾಳದ, ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಸೇವೆಯಲ್ಲಿ ಪ್ರಧಾನ ಸೇವಕನಾಗಿ ಹೊರಹೊಮ್ಮಲು ಕಾಂಗ್ರೆಸ್‌ನಿಂದ ಮಾಡಲಾಗದ್ದನ್ನು ಏನಾದರೂ ಮಾಡಿ ಸಾಧಿಸುವ ಛಲ ಬಿಜೆಪಿ ನೇತೃತ್ವದ ಸರ್ಕಾರದಾಗಿದೆ. ಸತ್ಯಮೇವ ಜಯತೆ ಎಂದು ಸತ್ಯದ ಸಮಾಧಿ ಮಾಡುವ ಹಾಗೆ ಶ್ರಮಮೇವ ಜಯತೆ ಎಂದು ಶ್ರಮಿಕರ ಹಕ್ಕುಗಳ ಸಮಾಧಿ ಮಾಡುವ ಕೈಂಕರ್ಯದಲ್ಲಿ ಬಿಜೆಪಿ ಸರ್ಕಾರಗಳು ತೊಡಗಿವೆ.

ಭಾರತದಲ್ಲಿ ಕಾರ್ಮಿಕ ಕಾನೂನುಗಳು :

1928ರಲ್ಲಿ ಬ್ರಿಟಿಷ್ ಸರ್ಕಾರವು ವೈಟ್ಲೇ ಅವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಮೊದಲ ರಾಯಲ್ ಕಮಿಷನ್ ಶಿಫಾರಸ್ಸಿನಂತೆ ಭಾರತದಲ್ಲಿ ಹಲವು ಕಾರ್ಮಿಕ ಕಾಯ್ದೆಗಳನ್ನು ರೂಪಿಸಲು ವಿಫಲಯತ್ನ ನಡೆಸಿತ್ತು. ಅದಕ್ಕೂ ಮುನ್ನ ಮಕ್ಕಳ (ಶ್ರಮಕ್ಕೆ ಒತ್ತೆಇಡುವ) ಕಾಯ್ದೆ-1833, ಮಾರಕ ಅಪಘಾತಗಳ ಕಾಯ್ದೆ-1855, ಕಾರ್ಮಿಕ ಪರಿಹಾರ ಕಾಯ್ದೆ-1923, ಬಾಯಲರ್ಸ್ ಕಾಯ್ದೆ-1923, ವೃತ್ತಿಸಂಘಗಳ ಕಾಯ್ದೆ-1926 ರೂಪಿಸಿ ಜಾರಿಗೊಳಿಸಿತ್ತು. ಅನಂತರ ಮಾಲೀಕರ ಹೊಣೆಗಾರಿಕೆ ಕಾಯ್ದೆ 1938, ವೇತನ ಪಾವತಿ ಕಾಯ್ದೆ - 1936 ರೂಪಿಸಿ ಜಾರಿಗೊಳಿಸಿತ್ತು.

ಸ್ವತಂತ್ರ ಪೂರ್ವದ ವರ್ಷಗಳಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕಾರ್ಮಿಕ ಸಚಿವರಾಗಿ ಅನಂತರ ಸಂವಿಧಾನ ರಚನಾ ಸಭೆ ಕಾಲಾವಧಿಯಲ್ಲಿ ಕಾನೂನು ಸಚಿವರಾಗಿದ್ದಾಗ ಹಲವು ಕಾರ್ಮಿಕ ಕಾಯ್ದೆಗಳನ್ನು ರೂಪಿಸಿ ಅಂದಿನ ಸಂಸತ್ತು ಅಂಗೀಕರಿಸಿತ್ತು. ಮಾತ್ರವಲ್ಲದೆ ಸ್ವತಂತ್ರ ಪೂರ್ವ ಬ್ರಿಟೀಷರ ಕಾಲದ ಹಲವು ಕಾರ್ಮಿಕ ಕಾಯ್ದೆಗಳನ್ನು ಅನುಮೋದಿಸಿ ಅಂಗೀಕರಿಸಿತ್ತು. ಈ ಪ್ರಕ್ರಿಯೆಯಲ್ಲಿ ಕೈಗಾರಿಕಾ ವಿವಾದಗಳ ಕಾಯ್ದೆ-1947, ಡಾಕ್ ವರ್ಕರ್ಸ್ ಕಾಯ್ದೆ-1948, ನೌಕರರ ರಾಜ್ಯ ವಿಮಾ ಕಾಯ್ದೆ-1948 (ESI Act) ಕಾರ್ಖಾನೆಗಳ ಕಾಯ್ದೆ-1946, ಕನಿಷ್ಟ ವೇತನ ಕಾಯ್ದೆ-1948ಗಳನ್ನು ರೂಪಿಸಿ ಜಾರಿಗೊಳಿಸಲಾಗಿತ್ತು.

ಸಂವಿಧಾನದ ನಾಮನಿರ್ದೇಶಕ ತತ್ವಗಳನ್ನು ಕಾರ್ಯರೂಪಕ್ಕೆ ತರಲು ಶಿಫಾರಸ್ಸು ಕೋರಿ ರಚಿಸಿದ್ದ ನ್ಯಾಯಮೂರ್ತಿ ಗಜೇಂದ್ರಗಡ್ಕರ್ ಅವರ ಅಧ್ಯಕ್ಷತೆಯ ಮೊದಲ ರಾಷ್ಟ್ರೀಯ ಕಾರ್ಮಿಕ ಆಯೋಗದ ಶಿಫಾರಸ್ಸು 1966ರಲ್ಲಿ ಅಂದಿನ ಕೇಂದ್ರದ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲಿಕೆಯಾಗಿತ್ತು. ಅದರ ಶಿಫಾರಸ್ಸಿನ ಜಾರಿ ಕುರಿತು ಇದುವರೆಗೆ ಸರ್ಕಾರಗಳು ಕ್ರಮವಹಿಸಿಲ್ಲ. ಆದರೆ ಅಲ್ಪಸ್ವಲ್ಪ ತೇಪೆ ಹಚ್ಚುವ, ಮೂಗಿಗೆ ತುಪ್ಪ ಸವರುವ ಕೆಲಸವನ್ನು ಆಯೋಗದ ಶಿಫಾರಸ್ಸಿಗೆ ಮುನ್ನ ಮತ್ತು ನಂತರ ಮಾಡಲಾಗಿದೆ.

ಇದೀಗ ಈ ಎಲ್ಲಾ ಅಲ್ಪಸ್ವಲ್ಪ ಹಕ್ಕುಗಳನ್ನು ಇಲ್ಲವಾಗಿಸಿ ಶತಮಾನಗಳ ಹಿಂದೆ ಇಂಗ್ಲೆಂಡಿನಲ್ಲಿ ಕಾರ್ಮಿಕ ಸಂಘ ರಚನೆಯನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುವ, ಗಲ್ಲು ಶಿಕ್ಷೆಯನ್ನು ವಿಧಿಸಬಹುದಾದ ಅಂಶ ಒಳಗೊಂಡಿದ್ದ "ಕಾಂಬಿನೇಷನ್ ಕಾಯ್ದೆ-1799" ರೀತಿಯ ಪರಿಸ್ಥಿತಿಗೆ ಭಾರತದ ಕಾರ್ಮಿಕ ವರ್ಗವನ್ನು ದೂಡಲು ಬಿಜೆಪಿ ಸರ್ಕಾರಗಳು ಮುಂದಾಗಿದೆ.

ಕರ್ನಾಟಕದ ಮೇಲೆ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳ ಪರಿಣಾಮ :

ಭಾರತ ಸರ್ಕಾರದ ರಾಷ್ಟ್ರೀಯ ಕೈಗಾರಿಕೆಗಳ ಸರ್ವೇಕ್ಷಣೆ 2016-17 ರ ಪ್ರಕಾರ ಹಾಲಿ ರಾಷ್ಟ್ರವ್ಯಂತ ಕಾರ್ಖಾನೆಗಳಲ್ಲಿನ ನಿವ್ವಳ ಮೌಲ್ಯ ವರ್ಧನೆಯ ಪ್ರತಿ 100 ರೂ. ಗಳಲ್ಲಿ ಮಾಲೀಕರ ಲಾಭದ ಪಾಲು 47 ರೂ. ಗಳಾದರೆ, ಕಾರ್ಮಿಕರ ವೇತನದ ಪಾಲು ಕೇವಲ 15 ರೂ. ಗಳಾಗಿರುತ್ತದೆ. ಮೇಲಿನ ಉದ್ದೇಶಿತ ತಿದ್ದುಪಡಿ ಕ್ರಮಗಳನ್ನು ಸರ್ಕಾರವೇನಾದರೂ ತಂದಲ್ಲಿ ಕಾರ್ಮಿಕರ ವೇತನದ ಪಾಲು ಮತ್ತಷ್ಟು ಕುಸಿದು, ಆರ್ಥಿಕತೆಯಲ್ಲಿ ಬೇಡಿಕೆಯ ಕೊರತೆ ಸೃಷ್ಟಿಯಾಗಿ, ರಾಜ್ಯದ ಆರ್ಥಿಕತೆಯಲ್ಲಿ ಕೊಳ್ಳುವ ಶಕ್ತಿಯ ಕೊರತೆ ಉಂಟಾಗಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ. ಲಾಕ್‌ಡೌನ್ ನಿಂದಾಗಿ ಕಂಡಿರುವ ಆರ್ಥಿಕ ಹಿನ್ನಡೆಯು ಮತ್ತಷ್ಟು ತೀವ್ರ ಹಿನ್ನಡೆಗೆ ನಾಂದಿಯಾಗಲಿದೆ.

ಭಾರತ ಸರ್ಕಾರದ ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ ಪ್ರಕಾರ (2016-17) ಹಾಲಿ ರಾಜ್ಯದಲ್ಲಿ 100ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳ ಪಾಲು 75.56 ಶೇಕಡದಷ್ಟಿದೆ. ಒಂದು ವೇಳೆ ಉದ್ದೇಶಿತ ತಿದ್ದುಪಡಿ ತಂದು ಕೈಗಾರಿಕಾ ವಿವಾದಗಳ ಕಾಯ್ದೆ-1947ರ ಅಧ್ಯಾಯ 5'B' ಯಲ್ಲಿನ ಮಿತಿಯನ್ನು 300ಕ್ಕೆ ಹೆಚ್ಚಿಸಿದಲ್ಲಿ ರಾಜ್ಯದ 90.76 ಶೇಕಡ ಕಾರ್ಖಾನೆಗಳನ್ನು ಲೇಆಫ್, ರಿಟ್ರೆಂಚ್ ಮತ್ತು ಕ್ಲೋಶರ್ ಮಾಡಲು ಸರ್ಕಾರದ ಅನುಮತಿ ಅಗತ್ಯವಿರುವುದಿಲ್ಲ. ಇಂತಹ ಒಂದು ಅವಕಾಶ ಏನಾದರೂ ಮಾಲೀಕರಿಗೆ ದೊರೆತಲ್ಲಿ ರಾಜ್ಯದಲ್ಲಿನ ನಿರುದ್ಯೋಗ ಪ್ರಮಾಣವು ತೀವ್ರತರವಾಗಿ ಹೆಚ್ಚಲಿದೆ. ಆರ್ಥಿಕತೆ ಸಂಕಷ್ಟಕ್ಕೆ ಸಿಲುಕಲಿದೆ.

ಕಾರ್ಖಾನೆಯ ಪರಿಭಾಷೆಯಿಂದ ಹಾಲಿ ವಿದ್ಯುತ್‌ನೊಂದಿಗೆ 10 ಕಾರ್ಮಿಕರ ಕನಿಷ್ಟ ಮಿತಿಯನ್ನು ಸಡಿಲಿಸಿ 50ಕ್ಕೆ ಹೆಚ್ಚಳ ಮಾಡುವ ಕ್ರಮವು ಜಾರಿಗೆ ಬಂದಲ್ಲಿ ರಾಜ್ಯದ 64.24 ಶೇಕಡ ಕಾರ್ಖಾನೆಗಳು, ಕಾರ್ಖಾನೆ ಕಾಯ್ದೆಯ ವ್ಯಾಪ್ತಿಯಿಂದ ಹೊರಗುಳಿಯಲಿವೆ. ಪರಿಣಾಮವಾಗಿ ಶಾಸನ ಬದ್ಧ ಹಾಲಿ ನಿಯಂತ್ರಣವು ಅಷ್ಟು ಕಾರ್ಖಾನೆಗಳ ಮೇಲೆ ಇಲ್ಲದಾಗಿ ಕಾರ್ಮಿಕರ ಆರೋಗ್ಯ, ಸುರಕ್ಷತೆಗೆ ದೊಡ್ಡ ಗಂಡಾಂತರ ಉಂಟಾಗುವ ಸಾಧ್ಯತೆಗಳು ತೀವ್ರವಾಗಲಿವೆ.

ಕೋವಿಡ್-19, ಸೋಂಕಿತರು ಮತ್ತು ಶಂಕಿತರು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅದರ ಪಸರಿಕೆಯನ್ನು ತಡೆಯಲು, ದೈಹಿಕ ಅಂತರದೊಂದಿಗೆ ಉದ್ಯೋಗ, ಉತ್ಪಾದನೆ, ಮತ್ತು ಕಾರ್ಮಿಕರ ವೇತನ ಸಂರಕ್ಷಣೆ ಮಾಡಲು ದಿನದ ಕೆಲಸದ ಅವಧಿಯನ್ನು ಹಾಲಿ 8 ಗಂಟೆಯಿಂದ 6 ಗಂಟೆಗೆ ಇಳಿಸಿ, 4 ಗಂಟೆಗಳ ಕೆಲಸದ ಒಂದು ಶಿಫ್ಟ್ ನೊಂದಿಗೆ ದಿನದಲ್ಲಿ 4 ಶಿಫ್ಟ್ ಮಾಡಬೇಕೆಂಬುದು ಕಾರ್ಮಿಕ ಸಂಘಟನೆಗಳ ಒತ್ತಾಯವಾಗಿದೆ.

ಲಾಕ್‌ಡೌನ್ ಕಾಲಾವಧಿಯ ವೇತನ ಮತ್ತು ನಂತರದ ದಿನಗಳಲ್ಲಿ ಕೆಲಸದ ಭದ್ರತೆ ಖಾತ್ರಿ ಪಡಿಸಬೇಕೆಂಬ 13.4.2020 ರಂದು ರಾಜ್ಯ ಕಾರ್ಮಿಕ ಇಲಾಖೆ ಹೊರಡಿಸಿದ್ದ ಆದೇಶವನ್ನು ಮಾಲೀಕರ ಒತ್ತಡಕ್ಕೆ ಮಣಿದು 15.4.2020 ರಂದು ಹಿಂಪಡೆದ ಕಾರಣ ಉಂಟಾಗಿದ್ದ ವಿವಾದ ಬಗೆಹರಿಸಲು ಲಾಕ್‌ಡೌನ್ ಕಾಲಾವಧಿಯ ವೇತನ ಮತ್ತು ಆ ನಂತರದ ದಿನಗಳಲ್ಲಿ ಕೆಲಸದ ಭದ್ರತೆ, ಕುರಿತು ದೂರುಗಳ ಕುರಿತು ಪರಿಶೀಲಿಸಿ ಶಿಫಾರಸ್ಸು ಮಾಡಲು ರಾಜ್ಯ ಸರ್ಕಾರವು ಮಾನ್ಯ ಅಪರ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ ಸಮಿತಿಯನ್ನು ರಚಿಸಿದೆ. ಸಾವಿರಾರು ದೂರುಗಳು ಸಮಿತಿಗೆ ಬಂದಿವೆ. ಆದರೆ ಇದೀಗ ಕೇಂದ್ರ ಸರ್ಕಾರವು ಲಾಕ್ಡೌನ್ ಕಾಲಾವಧಿಯ ವೇತನ ನೀಡಬೇಕು, ಯಾರನ್ನೂ ಕೆಲಸದಿಂದ ತೆಗೆಯಬಾರದು ಎಂಬ ತನ್ನ 29-03-2020 ರ ಗೃಹ ಇಲಾಖೆಯ ಮಾರ್ಗಸೂಚಿಗಳ ಆದೇಶವನ್ನು 17.5.2020ರಂದು ಹೊರಡಿಸಿರುವ ಲಾಕ್ಡೌನ್ 4.0 ಮಾರ್ಗಸೂಚಿ ಆದೇಶದಲ್ಲಿ ಹಿಂದೆ ಪಡೆದಿದೆ. ಈ ಅಂಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೂ ಕೇಂದ್ರ ಸರ್ಕಾರದ ಪರ ವಕೀಲರು ತಿಳಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿಗೆ ಲಿಖಿತ ಪ್ರತಿಕ್ರಿಯೆ ನೀಡಲು ಕೇಂದ್ರ ಸರ್ಕಾರವನ್ನು ಕೋರಿರುವ ನ್ಯಾಯಾಲಯವು ಅದುವರೆಗೆ ಯಾವುದೇ ಒತ್ತಾಯ ಪೂರಕ ಕ್ರಮಗಳನ್ನು ಮಾಲೀಕರ ಮೇಲೆ ವೇತನ ನೀಡಬೇಕೆಂದು ಕೈಗೊಳ್ಳಬಾರದೆಂಬ ಆದೇಶವನ್ನು ನೀಡಿದೆ. ಅಂತಿಮವಾಗಿ ಲಾಕ್ಡೌನ್ ಕಾಲಾವಧಿಯ ವೇತನವು ಕಾರ್ಮಿಕರ ಪಾಲಿಗೆ ಇಲ್ಲವಾಗಿದೆ. ಕೆಲಸ ಕಳೆದುಕೊಳ್ಳುವ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಲಿದ್ದಾರೆ.



ಕಾರ್ಮಿಕ ಕಾನೂನುಗಳ ತಿದ್ದುಪಡಿ ಸಂವಿಧಾನ ಪರೀಕ್ಷೆಯಲ್ಲಿ ನಿಲ್ಲುವುದೇ?

ಉದ್ದೇಶಿತ ತಿದ್ದುಪಡಿಗಳು ಅಥವಾ ಮಾಲೀಕರಿಗೆ ರಿಯಾಯಿತಿ/ವಿನಾಯಿತಿ ನೀಡಲು ಉದ್ದೇಶಿಸಿರುವ ಕ್ರಮಗಳು ಭಾರತದ ಸಂವಿಧಾನದ ವಿಧಿ 21 ಮತ್ತು 23ರ ಸ್ಪಷ್ಟ ಉಲ್ಲಂಘನೆಯಾಗಲಿದೆ. ವಿಧಿ 43 ರಲ್ಲಿನ ನಿರ್ದೇಶಕ ತತ್ವವನ್ನು ನಿರಾಕರಿಸುತ್ತದೆ. ವಿಧಿ 123 ಮತ್ತು 231 ರ ಅಡಿಯ ಅಧಿಕಾರದ ದುರುಪಯೋಗವಾಗುತ್ತದೆ. ಕಾರ್ಮಿಕ ಕಾನೂನುಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮವರ್ತಿ ಪಟ್ಟಿಯಲ್ಲಿರುವ ಕಾರಣ, ಸಂಸತ್ತು ಅಂಗೀಕರಿಸಿರುವ ಶಾಸನ ನೀಡಿರುವ ಹಕ್ಕನ್ನು ಅಮಾನತ್ತುಗೊಳಿಸಲು ರಾಜ್ಯಪಾಲರು ಶಿಫಾರಸ್ಸು ಮಾಡುವ ಸುಗ್ರೀವಾಜ್ಞೆಗೆ ರಾಷ್ಟ್ರಪತಿಗಳ ಪೂರ್ವಸೂಚನೆ ಅಗತ್ಯ. ಆದರೆ ಅಂತಹ ಪೂರ್ವಸೂಚನೆ ಇರದ ಸುಗ್ರೀವಾಜ್ಞೆಗಳು ಸಂವಿಧಾನದ ಪರೀಕ್ಷೆಯಲ್ಲಿ ಸೋಲಲಿದೆ ಎಂಬುದು ಸಂವಿಧಾನ ತಜ್ಞರ ಅಭಿಪ್ರಾಯವಾಗಿದೆ.

ಭಾರತವು ಸಹಿ ಮಾಡಿರುವ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಕೆಲಸದ ಅವಧಿ, ಶಾಸನಬದ್ಧ ನಿರೀಕ್ಷಣೆ, ಸುರಕ್ಷತೆ, ಕಾರ್ಮಿಕರ ಸಂಘ ಕಟ್ಟುವ ಹಕ್ಕು ಮತ್ತು ಸಾಮೂಹಿಕ ಚೌಕಾಸಿಯ ಹಕ್ಕು ಮುಂತಾದ ಒಡಂಬಡಿಕೆಗಳಿಗೆ ವ್ಯತಿರಿಕ್ತವಾಗಲಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಸಹಾ ಕೇಂದ್ರ ಕಾರ್ಮಿಕ ಸಂಘಟನೆಗಳ ದೂರಿನ ಮೇರೆಗೆ ಭಾರತದ ಕೇಂದ್ರ ಸರ್ಕಾರಕ್ಕೆ ಕಾರಣ ಕೇಳಿ ತಿಳುವಳಿಕೆ ಪತ್ರವನ್ನು ನೀಡಿದೆ. ILOನ ಒಡಂಬಡಿಕೆಗಳು ಖಾತ್ರಿಪಡಿಸಿರುವ ಹಕ್ಕುಗಳಿಗೆ ಚ್ಯುತಿ ಬಾರದಂತೆ ಕ್ರಮವಹಿಸಲು ಕೋರಿದೆ.

ಮೊದಲ ಮೇ ದಿನದಿಂದ ಮೊಳಗಿದ 8 ಗಂಟೆ ಕೆಲಸದ ಘೋಷಣೆ:

1866 ರ ಅಮೇರಿಕಾದ ಹೇ ಮಾರುಕಟ್ಟೆಯಲ್ಲಿ ನಡೆದ 8 ಗಂಟೆ ಕೆಲಸದ ದಿನಕ್ಕಾಗಿನ ಹೋರಾಟ ಜಗಕ್ಕೆ ಕಟ್ಟಿಕೊಟ್ಟ ವಿಶ್ವಕಾರ್ಮಿಕ ದಿನದ ಹಕ್ಕನ್ನು 135 ವರ್ಷಗಳ ನಂತರ ಇದೀಗ ಕೋವಿಡ್ ನೆಪದಲ್ಲಿ ಇಲ್ಲವಾಗಿಸಲು ಬಿಜೆಪಿ ಸರ್ಕಾರಗಳು ಮುಂದಾಗಿವೆ. 8 ಗಂಟೆ ಕೆಲಸದಿಂದ ಹಿಡಿದು ಹಲವು ಹಕ್ಕುಗಳನ್ನು ಜಾಗತಿಕ ಕಾರ್ಮಿಕ ವರ್ಗವು ತನ್ನ ಸಮರಧೀರ ಹೋರಾಟದ ಮೂಲಕ ಪಡೆದಿದೆ. ಅದರ ಭಾಗವಾಗಿ ಭಾರತದ ಕಾರ್ಮಿಕ ವರ್ಗದ ಚಳುವಳಿಯ ಪ್ರಸಕ್ತ ಶತಮಾನೋತ್ಸವ ವರ್ಷದಲ್ಲಿ ನೂರಾರು ವರ್ಷಗಳ ದೀರ್ಘ ಹೋರಾಟದ ತ್ಯಾಗದ ಮಹಾನ್‌ಗಾಥೆಯ ಭಾಗವಾಗಿ ಪಡೆದಿರುವ ಹಕ್ಕುಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಮಿಕ ವರ್ಗವು ಇಂದೂ ಹೋರಾಟ ನಿರತವಾಗಿದೆ.

7 ಗಂಟೆ ಕೆಲಸ, ವಾರಕ್ಕೆ 5 ದಿನ 35 ಗಂಟೆ ಕೆಲಸಕ್ಕಾಗಿ ನಡೆದಿದೆ ಹೋರಾಟ :

ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ (WFTU) ದಿನದ ಕೆಲಸದ ಅವಧಿಯನ್ನು 7 ಗಂಟೆಗೆ ವಾರಕ್ಕೆ 5 ದಿನ ಕೆಲಸ, 35 ಗಂಟೆ ಕೆಲಸದ ಅವಧಿಗಾಗಿ ಒತ್ತಾಯಿಸಿ ಜಗತ್ತಿನಾದ್ಯಂತ ಹೋರಾಟದಲ್ಲಿ ನಿರತವಾಗಿದೆ. ಭಾರತದ ಹಲವು ಕೇಂದ್ರ ಕಾರ್ಮಿಕ ಸಂಘಟನೆಗಳು ಸಹಾ ಅದರ ಭಾಗವಾಗಿ ಪ್ರಚಾರ ಹೋರಾಟ ನಡೆಸಿವೆ.

ಶತಮಾನಕ್ಕೂ ಹಿಂದಿನ ಕೊನೆಯ ಗಂಟೆಯ ಕೆಲಸದ ವಾದ:

1836ರಲ್ಲಿ ಇಂಗ್ಲೆಂಡಿನ ಮಾಲೀಕರ ಚಾಂಪಿಯನ್ ಅರ್ಥಶಾಸ್ತ್ರಜ್ಞರಾಗಿದ್ದ ನಾಸುವ ಡಬ್ಲ್ಯೂ ಸೀನಿಯರ್ ರವರು ಅಂದಿನ ಕೆಲಸದ ಅವಧಿಯನ್ನು 11 ಗಂಟೆಗೆ ನಿಗದಿ ಪಡಿಸುವ ಕಾರ್ಖಾನೆ ಕಾಯ್ದೆಯ ವಿರುದ್ಧ ತಮ್ಮ ಕುಖ್ಯಾತ "ಸೀನಿಯರ್ಸ್ ಲಾಸ್ಟ್ ಅವರ್", ಕೆಲಸದ ಕೊನೆಯ ಗಂಟೆಯ ಕೆಲಸದ ಉತ್ಪಾದನೆಯಲ್ಲಿನ ಮೌಲ್ಯವರ್ಧನೆ ಮಾತ್ರವೇ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲಿದೆ. ಇಲ್ಲವಾದಲ್ಲಿ ರಾಷ್ಟ್ರದ ಆರ್ಥಿಕತೆ ಹಾಳಾಗಲಿದೆ ಎಂಬ ವಾದ ಮಂಡಿಸಿದ್ದರು.

ಅದೇ ಸೀನಿಯರ್‌ನ 'ಕೊನೆಯ ಗಂಟೆಯ' ವಾದವನ್ನು ಕಾರ್ಪೋರೇಟ್ ಬಂಡವಾಳಗಾರರ ಪರ ಇಂದು 184 ವರ್ಷಗಳ ನಂತರವು ಕೋವಿಡ್ ಲಾಕ್ಡೌನ್ ನೆಪದಲ್ಲಿ ಬಿಜೆಪಿ ಸರ್ಕಾರಗಳು ಮಾಡುತ್ತಿವೆ. ಅದಕ್ಕಾಗಿ ಕಾರ್ಮಿಕ ಹಕ್ಕುಗಳನ್ನು ಇಲ್ಲವಾಗಿಸಲು ಹೊರಟಿದೆ.

ಇದರ ವಿರುದ್ಧ ರಾಷ್ಟ್ರದ ಕಾರ್ಮಿಕರ ಸಮರ ನಡೆದಿದೆ. ಸಮರ ಗೆಲ್ಲಲು **"ತಲುಪದಿರುವ ಕಾರ್ಮಿಕರನ್ನು ತಲುಪಿ, ವರ್ಗವನ್ನು ಒಂದುಗೂಡಿಸಿ, ಹೋರಾಟದ ತೀವ್ರತೆಯನ್ನು ಹೆಚ್ಚಿಸಿ ಈ ನೀತಿಗಳನ್ನು ಹಿಮ್ಮೆಟ್ಟಿಸಬೇಕಿದೆ"**. ಅಂತಹ ಹೋರಾಟದ ಸಾಗರಕ್ಕೆ ಎಲ್ಲಾ ತೊರೆಗಳು ಐಕ್ಯತೆ ಬೆಸೆದು ಸಂಘರ್ಷಕ್ಕೆ ಮುಂದಾಗಬೇಕಿದೆ. ಕಾರ್ಮಿಕ ಹಕ್ಕುಗಳನ್ನು ದಮನಿಸುವ ಬಿಜೆಪಿಯ ಸೈದ್ಧಾಂತಿಕ ಬದ್ಧತೆಯನ್ನು ಕಾರ್ಮಿಕ ವರ್ಗದ ಪರ ಸೈದ್ಧಾಂತಿಕ ಬದ್ಧತೆಯ ಸಮರಧೀರ ಹೋರಾಟದಿಂದ ಮಾತ್ರ ಹಿಮ್ಮೆಟ್ಟಿಸಲು ಸಾಧ್ಯ.

ಶತಮಾನೋತ್ಸವ ಲೇಖನ ಮಾಲೆ-28

ವಾರಲೀ ಬಂಡಾಯದ ವೀರಗಾಥೆ

ತಮ್ಮ ಗುಲಾಮಗಿರಿಗೆ ಕೊನೆ ಹಾಡಬೇಕೆಂದು ಹಾತೊರೆಯುತ್ತಿದ್ದ ವಾರಲೀ ಆದಿವಾಸಿ ಜನಗಳು ಅದನ್ನು ಹೇಗೆ ಸಾಧಿಸುವುದೆಂದು ಗೊತ್ತಿಲ್ಲದೇ ಪರದಾಡುತ್ತಿದ್ದರು. ಕಮ್ಯುನಿಸ್ಟರ ನೇತೃತ್ವದ ಕಿಸಾನ್ ಸಭಾ ಆ ಕಂದರವನ್ನು ತುಂಬಿತ್ತು. ಕೆಂಬಾವುಟದ ಚಳುವಳಿಯು ವಿಮೋಚನೆಯ ಚಳುವಳಿ ಮತ್ತು ಋಣಭಾರದ ಗುಲಾಮಗಿರಿಯಿಂದ ವಿಮೋಚನೆಯು ಅದರ ಅವಿಭಾಜ್ಯ ಅಂಗ ಎನುವುದನ್ನು ವಾರಲೀಗಳು ಅರಿತುಕೊಂಡರು. ಹೋರಾಟಗಳ ಅನುಭವ ಅವರನ್ನು ಬಹುಬೇಗ ಮಾರ್ಪಾಟು ಮಾಡಿತು. ಅವರು ಹೊಸ ಮನುಷ್ಯರಾದರು. ಅವರಲ್ಲಿ ಜ್ಞಾನದ ಹಸಿವು ಬೆಳೆಯಿತು. ಸಮಾಜವಾದ ಮತ್ತು ಸೋವಿಯತ್ ಯೂನಿಯನ್‌ನ ಎಲ್ಲಾ ಮಾಹಿತಿಗಳನ್ನು ತಿಳಿಯಲು ಹಾತೊರೆದರು. ಭೂಮಾಲಕರ ಅಪಪ್ರಚಾರ ಅವರಲ್ಲಿ ಈ ಹಂಬಲವನ್ನು ಹುಟ್ಟುಹಾಕಿತು. ಇದು ಅವರ ಆರ್ಥಿಕ ಹಕ್ಕುಗಳ ಬಗ್ಗೆ ಪ್ರಜ್ಞೆಯನ್ನು ಉಂಟುಮಾಡಿದ್ದಲ್ಲದೇ ಅವರ ನಾಗರಿಕ ಹಾಗೂ ರಾಜಕೀಯ ಹಕ್ಕುಗಳ ಮೌಲ್ಯಗಳ ಬಗ್ಗೆ ಕೂಡ ಹೋರಾಟವು ಅವರಲ್ಲಿ ಅರಿವು ಮೂಡಿಸಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್



ಕ್ರೂರ ಭೂಮಾಲಕರ ದಬ್ಬಾಳಿಕೆಗಳಿಂದಾಗಿ ವಾರಲೀಗಳ ಶೋಚನೀಯ ಹಾಗೂ ಅಸಹ್ಯಕರ ಬದುಕು ಅವರ ಸಾಮೂಹಿಕ ಉತ್ಕ್ರಾಂತಿಗೆ ಮೂಲ ಕಾರಣ. ಅವರೇ ಸಂಪೂರ್ಣವಾಗಿ ದ್ವೇಷಿಸುತ್ತಿದ್ದ ಆ ಸ್ಥಿತಿಯಲ್ಲಿ ಅವರು ಶತಮಾನಗಳ ಕಾಲ ಕೊಳೆದಿದ್ದವರು, ಆದರೆ ಅವರ ಭಯ ಮತ್ತು ಅಸಹಾಯಕತೆ ಅವರ ಕೋಪದ ಕಿಚ್ಚನ್ನು ಅಡಗಿಸಿಟ್ಟಿತ್ತು. ಮಾನಸಿಕ ಯಾತನೆಯಿಂದ ಬದುಕುತ್ತಿದ್ದರು ಮತ್ತು ತಮ್ಮ ಗುಲಾಮಗಿರಿಗೆ ಕೊನೆ ಹಾಡಬೇಕೆಂದು ಹಾತೊರೆಯುತ್ತಿದ್ದರು, ಆದರೆ ಅದನ್ನು ಹೇಗೆ ಸಾಧಿಸುವುದೆಂದು ಗೊತ್ತಿಲ್ಲದೇ ಪರದಾಡುತ್ತಿದ್ದರು. ಕಮ್ಯುನಿಸ್ಟರ ನೇತೃತ್ವದ ಕಿಸಾನ್ ಸಭಾ ಆ ಕಂದರವನ್ನು ತುಂಬಿತ್ತು. ವಾರಲೀಗಳ ವಿಮೋಚನಾ ಚಳುವಳಿಯು 1945ರ ಮೇ ತಿಂಗಳಲ್ಲಿ ಆರಂಭವಾಯಿತು, ಗುಲಾಮಗಿರಿಯ ವಿರುದ್ಧ ಬಂಡಾಯದ ಕೆಂಬಾವುಟವನ್ನು ಹಾರಿಸಿದರು. ವಾರಲೀಗಳನ್ನು ಜಾಗೃತಿಗೊಳಿಸಿ ಸಂಘಟಿಸುವಲ್ಲಿ ಗೋದಾವರಿ ಪರುಳೇಕರ್ ಮತ್ತು ಅವರ ಪತಿ ಶಾಮರಾವ್ ಪರುಳೇಕರ್ ದಣಿವರಿಯದೆ ಶ್ರಮಿಸಿದರು.

ಠಾಣೆ ಜಿಲ್ಲೆಯ ಉಬರ್‌ಗಾಂವ್, ಡಹಾಣು, ಪಾಲ್ಘರ್ ಮತ್ತು ಜವಾಹರ್ ತಾಲೂಕುಗಳಲ್ಲಿ ಹರಿದು ಹಂಚಿಹೋಗಿ ಬದುಕುತ್ತಿದ್ದ ಆದಿವಾಸಿ ರೈತರಲ್ಲಿ ಬಹುತೇಕರು ವಾರಲೀಗಳಾಗಿದ್ದರು. ಶ್ರೀಮಂತ ಭೂಮಾಲಕರು ಹಾಗೂ ಬಡ್ಡಿ ಸಾಹುಕಾರರು ಅವರ ಜಮೀನುಗಳನ್ನು ಜುಜುಬಿ ಕಾಸಿಗೆ ಬಲಾತ್ಕಾರದಿಂದ ಕಸಿದುಕೊಂಡಿದ್ದರು. ಆ ನಂತರದಲ್ಲಿ ಅದೇ ಜಮೀನಿನಲ್ಲಿ ಗೇಣಿದಾರರಾಗಿ ದುಡಿದು ಬೆಳೆದ ಅರ್ಧ ಫಸಲನ್ನು ಗೇಣಿಯೆಂದು ಕೊಡುತ್ತಿದ್ದರು ಮತ್ತು ಜಮೀನುದಾರರ ಜಮೀನಿನಲ್ಲಿ ಕೂಲಿಯಿಲ್ಲದೇ ದುಡಿಯುತ್ತಿದ್ದರು. ಗುಲಾಮರಂತೆ ಬದುಕುತ್ತಿದ್ದರು. ಕೆಲವು ಭೂಮಾಲಕರು ಹುಲ್ಲುಗಾವಲನ್ನು ಹೊಂದಿದ್ದರು ಮತ್ತು ಅರಣ್ಯ ಗುತ್ತಿಗೆದಾರರಾಗಿದ್ದರು, ಅತ್ಯಂತ ಕಡಿಮೆ ಕೂಲಿಗೆ ಆದಿವಾಸಿ ರೈತರನ್ನು ಕೂಲಿಗಾರರಾಗಿ ದುಡಿಸಿಕೊಳ್ಳುತ್ತಿದ್ದರು. ಬಲವಂತದ ದುಡಿಮೆ ಸಾಮಾನ್ಯವಾಗಿತ್ತು. ಕೆಲಸವಿಲ್ಲದ ಸಮಯದಲ್ಲಿ ಭೂಮಾಲಕರಿಂದ ಭತ್ತವನ್ನು ಸಾಲ ರೂಪ(ಖೋಟಿ ಪದ್ಧತಿ)ದಲ್ಲಿ ಪಡೆಯುತ್ತಿದ್ದರು, ಅದಕ್ಕೆ ಶೇಕಡಾ 50 ರಿಂದ 200ರವರೆಗೆ ಬಡ್ಡಿ ತೆರುತ್ತಿದ್ದರು.

ಮಹಾರಾಷ್ಟ್ರ ಕಿಸಾನ್ ಸಭಾವು ತನ್ನ ಮೊದಲ ಸಮ್ಮೇಳನವನ್ನು 1945ರಲ್ಲಿ ಠಾಣೆ ಜಿಲ್ಲೆಯ ಟಿಟ್ವಾಳ ಹಳ್ಳಿಯಲ್ಲಿ ನಡೆಸಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ರೈತರ ಪ್ರತಿನಿಧಿಗಳನ್ನು ಅಣಿನೆರಸಬೇಕೆಂದು ಕಿಸಾನ್ ಸಭಾ ಕಾರ್ಯಕರ್ತರು ಯೋಜಿಸಿದ್ದರು. ಹೀಗೆ ಅವರು ಸಮ್ಮೇಳನಕ್ಕೆ ಪ್ರಚಾರ ನಡೆಸುವ ಸಮಯದಲ್ಲಿ, ಉಬರ್‌ಗಾಂವ್ ತಾಲೂಕಿನಲ್ಲಿ ಡಿಸೆಂಬರ್ 1944ರಲ್ಲಿ ವಾರಲೀಗಳ ಸಂಪರ್ಕಕ್ಕೆ ಬಂದರು.

ಆ ದಿನಗಳಲ್ಲಿ ಭೂಮಾಲಕರ ಬಂಟರು ಮತ್ತು ಸ್ಥಳೀಯ ಸರ್ಕಾರಿ ಅಧಿಕಾರಿಗಳು ಆ ಪ್ರದೇಶದ ರಾಜರುಗಳ ರೀತಿ ವರ್ತಿಸುತ್ತಿದ್ದರು. ಅವರ ಎದುರು ವಾರಲೀಗಳು ಮಾತನಾಡಲು ಹೆದರುತ್ತಿದ್ದರು. ಒಮ್ಮೆ ಈ ಜನರು ಕಿಸಾನ್ ಸಭಾ ಆಯೋಜಿಸಿದ್ದ ಸಭೆಯೊಂದರಲ್ಲಿ ಕಾಣಿಸಿಕೊಂಡಾಗ, ಮುಖಂಡರು ಅವರಿಗೆ ಸಭೆಯಿಂದ ಹೊರಹೋಗಲು ಕಟ್ಟುನಿಟ್ಟಾಗಿ ಹೇಳಿದರು. ಅವರು ತಲೆ ಬಗ್ಗಿಸಿಕೊಂಡು ಹೊರನಡೆದರು. ಇದು ವಾರಲೀಗಳಿಗೆ ಮುಕ್ತವಾಗಿ ಮಾತನಾಡಲು ಧೈರ್ಯ ನೀಡಿತು. ಅವರು ತಮ್ಮ ಮೇಲಾಗುತ್ತಿರುವ ದಾಳಿ ದಬ್ಬಾಳಿಕೆ ಹಾಗೂ ಶೋಷಣೆಗಳ ಬಗ್ಗೆ ಸವಿಸ್ತಾರವಾಗಿ ಹೇಳಿಕೊಂಡರು. ಟಿಟ್ವಾಳ ಸಮ್ಮೇಳನಕ್ಕೆ ತಮ್ಮ ಕೆಲವು ಪ್ರತಿನಿಧಿಗಳನ್ನು ಕಳಿಸುವುದಾಗಿ ಭರವಸೆ ನೀಡಿದರು, ಆದರೆ ಒಂದು ಷರತ್ತಿನ ಮೇಲೆ ಕಳಿಸುವುದಾಗಿ ಹೇಳಿದರು: ಸಮ್ಮೇಳನದ ನಂತರ ತಮ್ಮ ಜತೆಯಲ್ಲಿ ಕಿಸಾನ್ ಸಭಾ ಕಾರ್ಯಕರ್ತರು ಉಳಿದುಕೊಳ್ಳಬೇಕು ಎಂದರು.

ಉಬರ್‌ಗಾಂವ್ ತಾಲೂಕಿನಿಂದ 15 ವಾರ ಪ್ರತಿನಿಧಿಗಳು ಟಿಟ್ವಾಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮಹಾರಾಷ್ಟ್ರದ ಎಲ್ಲಾ ಜಿಲ್ಲೆಗಳಿಂದ ಅಲ್ಲಿ ಅಣಿನೆರೆದಿದ್ದ ರೈತರನ್ನು ನೋಡಿ ವಾರಲೀಗಳು ಸ್ಫೂರ್ತಿಗೊಂಡರು. ಅದು ಅವರನ್ನು ರೂಪಾಂತರಿಸಿತು. ಆ ನಂತರ ಅವರು ತಮ್ಮ ಪೀಡಕರ ಎದುರು ನಡುಗಲಿಲ್ಲ, ಅವರನ್ನು ಧಿಕ್ಕರಿಸಲು ಶುರುಮಾಡಿದರು. ತಮ್ಮ ಜತೆಯಲ್ಲಿ ಕೆಂಬಾವುಟವನ್ನು ಹಿಡಿದು ಹೊರಟರು, ಅದು ತಮ್ಮ ಮಾರ್ಗದರ್ಶಕ, ಮಿತ್ರ ಹಾಗೂ ದಾರ್ಶನಿಕನಾಗಿ ನೆರವಿಗೆ ಬರುತ್ತದೆ ಎಂದು ಅರಿತರು.

ಸಮ್ಮೇಳನಕ್ಕೆ ಪ್ರಚಾರ ಮಾಡುವಾಗ ಕಿಸಾನ್ ಸಭಾ ಮುಖಂಡರು ಬಲವಂತದ ದುಡಿಮೆಯ ಭೂಮಾಲಕರ ಒತ್ತಾಯವನ್ನು ಪ್ರತಿಭಟಿಸಿದರು ಮತ್ತು ಅಂತಿಮವಾಗಿ ನಿಲ್ಲಿಸಿದರೂ ಕೂಡ. ಮೊದಲ ಸುತ್ತಿನ ಹೋರಾಟಗಳಲ್ಲೇ ಈ ಗೆಲುವುಗಳು ಸಲೀಸಾಗಿ ಲಭಿಸಿದವು. ಇದು ಅವರ ಪ್ರತಿರೋಧದ ಚೈತನ್ಯವನ್ನು ಉತ್ತೇಜಿಸಿತು ಮತ್ತು ಅವರಲ್ಲಿ ತಮ್ಮ ಶತ್ರುಗಳನ್ನು ಸಲೀಸಾಗಿ ಸೋಲಿಸಬಹುದೆಂಬ ಆತ್ಮವಿಶ್ವಾಸವನ್ನು ತುಂಬಿತು. ಒಂದು ಹೊಸ ಅರಿವು ಮತ್ತು ಪ್ರಜ್ಞೆ ಅವರಲ್ಲಿ ಮೂಡಿತು.

ಕಿಸಾನ್ ಸಭಾ ಸಮ್ಮೇಳನವು ಗುಲಾಮಗಿರಿ ಮತ್ತು ಬಲವಂತದ ದುಡಿಮೆಯನ್ನು ಕೊನೆಗಾಣಿಸಲು ತಕ್ಷಣದ ಕಾರ್ಯಕ್ರಮವನ್ನು ಅಂಗೀಕರಿಸಿತು. ನಾಲ್ಕು ಮುಖ್ಯ ಹಾಗೂ ಸರಳ ಘೋಷಣೆಗಳನ್ನು ಅದು ರೂಪಿಸಿತು: ಅ) ದಿನಗೂಲಿಯನ್ನು ನಗದು ರೂಪದಲ್ಲಿ ನೀಡದಿದ್ದರೆ ಭೂಮಾಲಕರ ಜಮೀನಿನಲ್ಲಿ ಸಾಗುವಳಿ ಮಾಡಬಾರದು; ಆ) ಭೂಮಾಲಕರಿಗೆ ಉಚಿತ ಸೇವೆ ಸಲ್ಲಿಸಬಾರದು; ಇ) ಭೂಮಾಲಕ ಹೊಡೆದರೆ ಪ್ರತಿಭಟಿಸಬೇಕು ಮತ್ತು ಈ) ಎಲ್ಲರೂ ಐಕ್ಯತೆಯಿಂದ ಇರಬೇಕು.

ಭೂಮಾಲಕರ ಬಲವಂತದ ದುಡಿಮೆಯ ಬಲಾತ್ಕಾರಕ್ಕೆ ಪ್ರತಿರೋಧವು ಸಮ್ಮೇಳನ ಮುಗಿದ ಕೂಡಲೇ ಪ್ರಾರಂಭವಾಯಿತು. ಸಮ್ಮೇಳನ ಮುಗಿದ 24 ಗಂಟೆಯೊಳಗೆ ಅದರ ಘೋಷಣೆ ಮತ್ತು ಸಂದೇಶವು ಮೂಲೆ ಮೂಲೆಗೂ ಹಬ್ಬಿತು. ವಾರಲೀಗಳು ನೂರಕ್ಕೆ ನೂರು ಐಕ್ಯತೆ ಸಾಧಿಸಿದರು. ಈ ಪ್ರತಿರೋಧ ಎಷ್ಟು ಬೇಗ ಹಬ್ಬಿತು ಮತ್ತು ಎಷ್ಟು ತ್ವರಿತವಾಗಿ ಬಲ ಪಡೆದುಕೊಂಡಿತೆಂದರೆ ಮೂರು ವಾರಗಳಲ್ಲೇ, ಬಲವಂತದ ದುಡಿಮೆ ಹಳೆಯ ಕಾಲಕ್ಕೆ ಸಂದಿತು.

ಈ ಗೆಲುವಿನಿಂದ ಪ್ರೇರಿತರಾದ ವಾರಲೀಗಳು ಗುಲಾಮ ಪದ್ಧತಿಯನ್ನು ಕೊನೆಗೊಳಿಸಲು ಮುಂದಾದರು. ಭೂಮಾಲಕನ ಜಮೀನಿನಲ್ಲಿ ಪುಕ್ಕಟೆ ಸಾಗುವಳಿ ಮಾಡಲು ನಿರಾಕರಿಸಿದರು ಮತ್ತು ಕಿಸಾನ್ ಸಭಾ ನಿಗದಿಪಡಿಸಿದ ಕೂಲಿ ಕೊಡಬೇಕೆಂದು ಒತ್ತಾಯಿಸಿದರು. ಇದು ಉಬರ್‌ಗಾಂವ್‌ನ ಉದ್ದಕ್ಕೂ ಬಿರುಗಾಳಿಯಂತೆ ಬೀಸಿ ಬಲಪಡೆಯಿತು, ಭೂಮಾಲಕತ್ವ ಕೊಚ್ಚಿಕೊಂಡುಹೋಯಿತು. ಗುಲಾಮಿ ಪದ್ಧತಿ ಕೊನೆಗೊಂಡಿತು.


ಉಬರ್‌ಗಾಂವ್ ವಾರಲೀಗಳ ವಿಜಯೋತ್ಸವದ ಮುನ್ನಡೆಯ ಸುದ್ದಿ ಗಡಿಗಳನ್ನು ದಾಟಿ ಡಹಾಣುವನ್ನು ತಲುಪಿತು. ಕಿಸಾನ್ ಸಭಾಕ್ಕಾಗಿ ಕಾಯದೇ, ಅವರು ಪ್ರತಿದಿನ ಸಾಮೂಹಿಕ ಸಭೆ ಮಾಡುವುದರ ಮೂಲಕ ತಮ್ಮ ಚಳುವಳಿ ಶುರುಮಾಡಿದರು. ಕಿಸಾನ್ ಸಭಾ ಕಾರ್ಯಕರ್ತರು ಅಲ್ಲಿಗೆ ಹೋದಾಗ, ಇಡೀ ಪ್ರದೇಶ ಬೃಹದಾಕಾರದ ಸಾಮೂಹಿಕ ವಿಪ್ಲವದ ಹಿಡಿತದಲ್ಲಿರುವುದನ್ನು ನೋಡಿ ಅಚ್ಚರಿಪಟ್ಟರು.

ಕೆಂಬಾವುಟದ ಚಳುವಳಿಯು ವಿಮೋಚನೆಯ ಚಳುವಳಿ ಮತ್ತು ಋಣಭಾರದ ಗುಲಾಮಗಿರಿಯಿಂದ ವಿಮೋಚನೆಯು ಅದರ ಅವಿಭಾಜ್ಯ ಅಂಗ ಎನುವುದನ್ನು ವಾರಲೀಗಳು ಅರಿತುಕೊಂಡರು. ಡಹಾಣುವಿನ ವಿವಿಧ ಭಾಗಗಳಲ್ಲಿ ಕೆಂಬಾವುಟ ಹಿಡಿದು ಮೆರವಣಿಗೆ ಮಾಡಿದರು ಮತ್ತು 1000 ಗುಲಾಮರನ್ನು ವಿಮೋಚನೆಗೊಳಿಸಿದರು. ಗುಲಾಮರ ವಿಮೋಚನಾ ಚಳುವಳಿಯು ಗುಲಾಮರಿಗೆ ಸ್ವಾತಂತ್ರ್ಯವನ್ನು ಮರಳಿ ಕೊಡಿಸಿತು ಮತ್ತು ಬಹಳ ಮುಖ್ಯವಾಗಿ, ಗುಲಾಮನ ಹೆಂಡತಿಯನ್ನು ಭೂಮಾಲಕನ ಕಾಮಪೀಡನೆಯಿಂದ ಮುಕ್ತಗೊಳಿಸಿತು.

ಕಿಸಾನ್ ಸಭಾವು ಮತ್ತೊಂದು ಬೇಡಿಕೆಯನ್ನು, 500 ಪೌಂಡ್ ಹುಲ್ಲು ಕೊಯ್ಯಲು ಕನಿಷ್ಠ ಕೂಲಿ ರೂ.2.50 ಕೊಡಬೇಕೆಂದು ಒತ್ತಾಯಿಸಿತು. ಸಾವಿರಾರು ಎಕರೆ ಜಮೀನಿನಲ್ಲಿ ಹುಲ್ಲು ತುಂಬಿಕೊಂಡಿತ್ತು, ಆ ಹುಲ್ಲು ಮಾರಾಟದಿಂದ ಭೂಮಾಲಕರು ಭರ್ಜರಿ ಸಂಪತ್ತು ಗಳಿಸುತ್ತಿದ್ದರು. ವಾರಲೀಗಳು ಹುಲ್ಲು ಕೊಯ್ಯಲು ನಿರಾಕರಿಸಿದಾಗ ಭೂಮಾಲಕರು ಅವರ ಚಳುವಳಿಗೆ ತಡೆಯೊಡ್ಡುವ ಪ್ರಯತ್ನ ಮಾಡಿದರು. ಗೋದಾವರಿ ಪರುಳೇಕರ್ ಭಾಷಣ ಮಾಡುವ ಸಭೆಯನ್ನು ಭಂಗಮಾಡಲು ಗೂಂಡಾಗಳನ್ನು ಕರೆಸಲಾಗಿದೆ ಎಂಬ ಸುಳ್ಳು ವದಂತಿ ಹಬ್ಬಿಸಿದರು. ಆದರೆ ನಿಜವಾಗಿ, ಅಂತಹ ಯಾವ ಸಭೆಯನ್ನೂ ಕಿಸಾನ್ ಸಭಾ ಆಯೋಜಿಸಿರಲಿಲ್ಲ. ಭೂಮಾಲಕರಿಂದ ಮೋಸ ಹೋದ ವಾರಲೀಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿದರು. ಅಕ್ಟೋಬರ್ 10ರ ಮಧ್ಯರಾತ್ರಿ ಸಶಸ್ತ್ರ ಪೋಲಿಸರು ಬಂದು, ವಾರಲೀಗಳ ಶಾಂತಿಯುತ ಸಭೆಯ ಮೇಲೆ ಚಲಿಸುತ್ತಿದ್ದ ಮೋಟಾರು ವಾಹನದ ಮೇಲಿನಿಂದಲೇ ಗುಂಡು ಹಾರಿಸಿದರು. ಪೋಲಿಸರು ಪದೇ ಪದೇ ಮನಸೋಯಿಚ್ಛೆ ಗುಂಡು ಹಾರಿಸಿದರು, ಎಲ್ಲಾ ದಿಕ್ಕುಗಳಲ್ಲಿಯೂ ಮರುದಿನ ಮಧ್ಯಾಹ್ನ 3 ಗಂಟೆಯವರೆಗೂ ಗೋಲಿಬಾರ್ ಮುಂದುವರಿಸಿದರು. ಐವರು ವಾರಲೀಗಳು ಗುಂಡಿಗೆ ಬಲಿಯಾದರು ಮತ್ತು ಬಹಳ ಜನ ಗಾಯಗೊಂಡರು.


ಸಾವನ್ನೂ ಧಿಕ್ಕರಿಸಿ ಯಾವುದಕ್ಕೂ ಹೆದರುವುದಿಲ್ಲವೆಂಬ ವಾರಲೀಗಳ ಧೈರ್ಯದ ಈ ಪ್ರಸಂಗವು ಅವರು ಕೆಂಬಾವುಟದ ಬಗ್ಗೆ ಹೊಂದಿರುವ ನಿಷ್ಠೆಯ ಮತ್ತು ಅವರಲ್ಲಿ ಹೊರಹೊಮ್ಮಿದ ಅಪರೂಪದ ಕೆಚ್ಚಿನ ರೋಮಾಂಚನಕಾರಿ ಪ್ರದರ್ಶನವಾಗಿತ್ತು. 15

ಪುಟ 15 ಕ್ಕೆ





ಸುಳ್ಳುಬುರುಕ "ರಕ್ಷಕ ಪ್ಯಾಕೇಜ್"!



***ದೇಶದ ಜನತೆಯನ್ನು ಕಾಪಾಡಲು ಏಕಸ್ವಾಮ್ಯ ಕಂಪೆನಿಗಳಿಗೆ ಕೊಟ್ಟಿರುವ ಒಂದಷ್ಟು ರಿಯಾಯಿತಿಗಳು! *ಹಣಕಾಸು ಬಂಡವಾಳದ ಕಾಲಿಗೆ ಬೀಳುವ ಅವಮಾನವೇ ಸ್ವಾವಲಂಬನೆಯೆಡೆಗೆ ಹೆಜ್ಜೆಗಳು! * ಕಾರ್ಮಿಕರ ಉಳಿತಾಯ ಕಡಿತವೂ ರಕ್ಷಕ ಪ್ಯಾಕೇಜ್‌ನ ಭಾಗ!**

ಕ್ಷುಲ್ಲಕ ವಿತ್ತೀಯ ಕ್ರಮಗಳಲ್ಲದೆ, ಈ ಪ್ಯಾಕೇಜ್ ತನ್ನ ಬುದ್ಧಿಗೇಡಿತನದಿಂದಲೂ ಗಮನ ಸೆಳೆಯುತ್ತದೆ. ಈ ಬುದ್ಧಿಗೇಡಿತನದ ತಳದಲ್ಲಿ ಜನರ ಬಗ್ಗೆ ಸದಾ ಅಸಡ್ಡೆಯ ಮನೋಭಾವವಿದೆ. ಆದ್ದರಿಂದಲೇ ಅನೇಕ ದೇಶಗಳಲ್ಲಿ ಸರ್ಕಾರಗಳು, ಹಣಕಾಸು ಬಂಡವಾಳದ ಅಪೇಕ್ಷೆ–ಆಶಯಗಳ ವಿರುದ್ಧವಾಗಿ, ಜನರ ಅಗತ್ಯಗಳಿಗೆ ತಲೆಬಾಗಬೇಕಾಗಿ ಬಂದರೂ, ಭಾರತ ಸರಕಾರವು ಕರೋನಾ ಜಾಡ್ಯವು ಜನರನ್ನು ಪೀಡಿಸುತ್ತಿರುವ ಸಮಯದಲ್ಲಿಯೂ, ಹಣಕಾಸು ಬಂಡವಾಳದ ಕಟ್ಟುಪಾಡುಗಳಿಗೆ, ಇಚ್ಛೆಗಳಿಗೆ ತಲೆಬಾಗಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಜನಗಳ ಬಗ್ಗೆ ಸರ್ಕಾರದ ಅಮಾನವೀಯತೆಗೆ ತಕ್ಕಂತಿದೆ ಅದರ ಸುಳ್ಳಾಟಗಳು. ಮತ್ತು ಮೋದಿ ಸರಕಾರ ಈ ಎರಡೂ ವಿಷಯಗಳಲ್ಲಿ ವಿಶ್ವದ ಬಹುತೇಕ ಇತರ ಯಾವುದೇ ಸರಕಾರಕ್ಕಿಂತ ಬಹಳ ಬಹಳ ಮುಂದಿದೆ. ವಿದೇಶಿ ಮತ್ತು ದೇಶೀಯ ಏಕಸ್ವಾಮ್ಯ ಕಂಪೆನಿಗಳಿಗೆ ಕೊಟ್ಟಿರುವ ಒಂದಷ್ಟು ರಿಯಾಯಿತಿಗಳನ್ನೇ ದೇಶದ ಜನತೆಗೆ ಒದಗಿಸಿದ "ರಕ್ಷಕ ಪ್ಯಾಕೇಜ್" ಎಂದು ಹೇಳುವ ಧಾರ್ಷ್ಟ್ಯ ಬೇರೆ ಯಾವುದೇ ಸರಕಾರಕ್ಕಿದೆಯೇ? ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ತಮ್ಮ ಗಿರಾಕಿಗಳಿಗೆ ಕೊಡುವ ಎಲ್ಲಾ ಸಾಲಗಳನ್ನು ಕೂಡಿದರೆ ಬರುವ ಮೊತ್ತವನ್ನು ಗಂಡಾಂತರಕ್ಕೊಳಗಾದ ಜನರಿಗೆ ತಾನು ಒದಗಿಸಿದ ನೆರವು ಎಂದು ಘೋಷಿಸುವುದು ಬೇರೆ ಯಾವುದೇ ಸರಕಾರಕ್ಕೆ ಸಾಧ್ಯವೇ? ಹಣಕಾಸು ಬಂಡವಾಳದ (ಮತ್ತು ಅದರ ಸಾಲ–ಯೋಗ್ಯತೆಯನ್ನು ಅಳೆಯುವ ಏಜೆನ್ಸಿಗಳ) ಕಾಲಿಗೆ ಬೀಳುವ ಅವಮಾನವನ್ನೇ ಸ್ವಾವಲಂಬನೆಯೆಡೆಗೆ ಹಾಕುವ ಹೆಜ್ಜೆಗಳು ಎಂದು ಹೇಳಿಕೊಳ್ಳುವ ಲಜ್ಜೆ ಬೇರೆ ಯಾವುದೇ ಸರಕಾರಕ್ಕೆ ಇರಲು ಸಾಧ್ಯವೇ?

ಪ್ರಾರಂಭದಿಂದಲೇ ಆರಂಭಿಸೋಣ. 14 ಕೋಟಿ ವಲಸಿಗ ಕಾರ್ಮಿಕರ ಬಗ್ಗೆ ಏನೊಂದೂ ವಿಚಾರ ಮಾಡದೆ, ಏಕಾ ಏಕಿಯಾಗಿ ಕೇವಲ ನಾಲ್ಕು ತಾಸುಗಳ ನೋಟಿಸ್ ನೀಡಿ ಲಾಕ್‌ಡೌನ್ ಘೋಷಿಸಲಾಯಿತು. ಆ ಒಂದು ಆಘಾತಕಾರಿ ಹೊಡೆತದಿಂದ ಎಲ್ಲರಿಗಿಂತ ಹೆಚ್ಚಾಗಿ ವಲಸಿಗ ಕಾರ್ಮಿಕರು ಇದ್ದಕ್ಕಿಂದಂತೆ ಆದಾಯವಿಲ್ಲದಂತಾದರು. ಅನ್ನ– ನೀರು– ಸೂರು–ಬಟ್ಟೆ ಬರೆ ಇಲ್ಲದಂತಾದರು. ಕೈಯಲ್ಲಿ ಹಣವಿಲ್ಲದೆ ಅವರು ಬೀದಿಗೆ ಬಿದ್ದರು. ಗತ್ಯಂತರವಿಲ್ಲದೆ, ತಮಗೆ ಗೊತ್ತಿದ್ದ ಏಕೈಕ ಆಶ್ರಯ – ನೂರಾರು ಕಿ. ಮೀ ದೂರದಲ್ಲಿರುವ ತಮ್ಮದೇ ಹಳ್ಳಿಯ ಮನೆಗಳಿಗೆ ಕಾಲ್ನಡಿಗೆಯಲ್ಲೇ ಹೊರಟರು. ಮೋದಿ ಸರಕಾರವು ತುಂಬಾ ತಡವಾಗಿ 1.7 ಲಕ್ಷ ಕೋಟಿ ರೂ. ಗಳ ನೆರವಿನ ಪ್ಯಾಕೇಜ್ ಘೋಷಿಸಿತು. ಇದರಲ್ಲಿ, ಈಗಾಗಲೇ ಬಜೆಟ್ ನಲ್ಲಿ ಘೋಷಣೆಯಾಗಿರದ ಹೊಸ ನೆರವು ಎನ್ನಬಹುದಾದದ್ದು 92,000 ಕೋಟಿ ರೂ. ಮಾತ್ರ. ಇದು ದೇಶದ ಜಿಡಿಪಿಯ ಶೇ. 0.5 ಕ್ಕಿಂತಲೂ ಕಡಿಮೆ. ವಿಶ್ವದ ಇತರ ಪ್ರಮುಖ ದೇಶಗಳು ತಮ್ಮ ಜನರಿಗೆ ಒದಗಿಸಿದ ನೆರವಿಗೆ ಹೋಲಿಸಿದರೆ, ಇದು ತೀರಾ ತೀರಾ ಕಡಿಮೆಯೇ.

ಈ ಲಾಕ್ ಡೌನ್ ಗಡುವು ಒಂದು ತಿಂಗಳಿಗಿಂತಲೂ ಹೆಚ್ಚು ದಿನಗಳವರೆಗೆ ವಿಸ್ತರಣೆಯಾದ ನಂತರವೂ, ಅನ್ನ– ನೀರು–ಸೂರು–ಹಣ ಇಲ್ಲದೆ ಹತಾಶರಾದ ಲಕ್ಷ ಲಕ್ಷ ವಲಸಿಗ ಕಾರ್ಮಿಕರು ತಮ್ಮ ಮಡದಿ ಮಕ್ಕಳೊಂದಿಗೆ ತಲೆಯ ಮೇಲೆ ಗಂಟು ಹೊತ್ತು ದಿನಗಟ್ಟಲೆ ಕಾಲ್ನಡಿಗೆಯ ಆಯಾಸದಿಂದ ಬಳಲಿ ಬಳಲಿ ಹೆಜ್ಜೆ ಹಾಕುತ್ತಾ ಹೋಗುತ್ತಿದ್ದ ದುರಂತಮಯ ದೃಶ್ಯಗಳು ವಿಶ್ವದಾದ್ಯಂತ ದಿನನಿತ್ಯ ಪ್ರಸಾರವಾಗುತ್ತಿದ್ದರೂ ಸಹ, ಸರ್ಕಾರವು ಕಮಕ್ ಕಿಮಕ್ ಎನ್ನಲಿಲ್ಲ. ನಂತರ, ಮೇ 12ರಂದು, ಮೋದಿ ಅವರು 20 ಲಕ್ಷ ಕೋಟಿ ರೂ. ಗಳ 'ರಕ್ಷಕ ಪ್ಯಾಕೇಜ್' ಎಂದು ಘೋಷಿಸಿದರು. ಕೆಲವರು ತಕ್ಷಣವೇ ಅಬ್ಬಾ! ಎಷ್ಟೊಂದು ಭಾರೀ ದೊಡ್ಡ ನೆರವು ಎಂದು ಉದ್ಗಾರ ತೆಗೆದರು. ತದನಂತರ, ಹಣಕಾಸು ಮಂತ್ರಿಗಳು ಈ ಪ್ಯಾಕೇಜಿನ ವಿವರಗಳನ್ನು ಕಂತುಗಳಲ್ಲಿ ಒದಗಿಸಿದರು. ಹೆಸರಿಗೆ 20 ಲಕ್ಷ ಕೋಟಿ ರೂಪಾಯಿಗಳ ಈ "ರಕ್ಷಕ ಪ್ಯಾಕೇಜ್" ಮೂಗಿಗೆ ತುಪ್ಪ ಸವರುವ ಒಂದು ಭಾರೀ ಬೂಟಾಟಿಕೆ ಎಂಬುದು ಬಯಲಾಗಿದೆ. ನೆರವು ಎಂಬುದಾಗಿ ಬಿಂಬಿಸಿದ 20 ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜ್‌ನಲ್ಲಿ ಬಹು ದೊಡ್ಡ ಭಾಗವು, ಉದ್ದಿಮೆಗಳಿಗೆ, ರೈತರಿಗೆ ಮತ್ತು ಇತರ ಸಂತ್ರಸ್ತರಿಗೆ ಒದಗಿಸಬಹುದಾದ ಸಾಲದ ಮೊತ್ತವಷ್ಟೇ.

ಪ್ಯಾಕೇಜ್‌ನ ಅಡಿಯಲ್ಲಿ ಸರ್ಕಾರ ಮಾಡುವ ಖರ್ಚೆಷ್ಟು (ವಿತ್ತೀಯ ಬೆಂಬಲ) ಎಂಬುದನ್ನು ತಿಳಿಯಲು ಗಬ್ಬು ನಾರುವ ಘೋಷಣೆಗಳನ್ನು ಒಳ ಹೊಕ್ಕು ನೋಡಬೇಕಾಗುತ್ತದೆ. ಸ್ವತಂತ್ರ ಸಂಶೋಧಕರ ಅಂದಾಜುಗಳ ಮೂಲಕ ನಾನು ಸರ್ಕಾರದ ವಿತ್ತೀಯ ಬೆಂಬಲ ಎಷ್ಟು ಎಂಬುದನ್ನು ಲೆಕ್ಕ ಮಾಡಿದ್ದೇನೆ. ಆ ಪ್ರಕಾರವಾಗಿ, ಈ ಪ್ಯಾಕೇಜ್‌ನಲ್ಲಿ ಯಾವುದು ಮಾತ್ರ "ರಕ್ಷಣಾ ಪ್ಯಾಕೇಜ್" ಎಂದು ಪರಿಗಣಿಸಲು ಅರ್ಹವೋ ಅದರ ಮೊತ್ತವು 1.9 ಲಕ್ಷ ಕೋಟಿ ರೂ. ಗಳಾಗುತ್ತದೆ. ಕೆಲವರ ಪ್ರಕಾರ ಇದು ಇನ್ನೂ ಕಡಿಮೆ, ಸುಮಾರು 1.65 ಲಕ್ಷ ಕೊಟಿ ರೂ. ಇದು, ಕೊರೋನಾ ಸಂದರ್ಭದಲ್ಲಿ, ಸರ್ಕಾರ ಮಾಡುವ ಬೇರೆ ಬೇರೆ ಖರ್ಚಿನ ಒಟ್ಟು ಮೊತ್ತವಾಗಿದ್ದು, ದೇಶದ ಜಿಡಿಪಿಯ ಶೇಕಡಾ 1ರಷ್ಟಾಗುತ್ತದೆ. ನಾವು ಎದುರಿಸುತ್ತಿರುವ ಬೃಹತ್ ಮಾನವೀಯತೆಯ ಬಿಕ್ಕಟ್ಟಿನ ಗಾತ್ರಕ್ಕೆ ಹೋಲಿಸಿದರೆ ಮತ್ತು ಈ ನಿಟ್ಟಿನಲ್ಲಿ ಇತರ ದೇಶಗಳು ಎಷ್ಟು ವೆಚ್ಚ ಮಾಡುತ್ತಿವೆ ಎಂಬುದರ ಜೊತೆಗೆ ಹೋಲಿಸಿದರೆ, ನಮ್ಮ ಸರ್ಕಾರ ಮಾಡುವ ಖರ್ಚುಗಳ ಮೊತ್ತವು ಹಾಸ್ಯಾಸ್ಪದವಾಗಿ ಕಾಣುತ್ತದೆ.

ಕ್ಷುಲ್ಲಕವಷ್ಟೇ ಅಲ್ಲ, ಬುದ್ಧಿಗೇಡಿಯೂ ಕೂಡ

ಈ ಪ್ಯಾಕೇಜಿನ ಬಗ್ಗೆ ಹಣಕಾಸು ಮಂತ್ರಿಗಳು ಕೊಟ್ಟಿರುವ ಮಾಹಿತಿಯ ಎರಡು ತುಣುಕುಗಳು ಸರ್ಕಾರದ ಕ್ರಮಗಳು ಅದೆಷ್ಟು ನಗಣ್ಯ ಎಂಬುದನ್ನು ತಿಳಿಸುತ್ತವೆ. ಮೊದಲನೆಯದು, ವಲಸಿಗ ಕಾರ್ಮಿಕರಿಗೆ ತಲಾ 5 ಕೆಜಿಯಷ್ಟು ಹೆಚ್ಚುವರಿ ಆಹಾರ ಧಾನ್ಯಗಳನ್ನು ಉಚಿತವಾಗಿ ಒದಗಿಸುವುದು. ಇದರ ವೆಚ್ಚ ಸುಮಾರು 3500 ಕೋಟಿ ರೂ. ಗಳು. ಅಂದರೆ, 14 ಕೋಟಿ ವಲಸಿಗರಿಗೆ ತಲಾ 250 ರೂ. ಖರ್ಚು ಮಾಡಿದಂತಾಗುತ್ತದೆ. ವಲಸೆ ಕಾರ್ಮಿಕರ ಸಂಖ್ಯೆ ಎಂಟು ಕೋಟಿಗಳಷ್ಟಿದೆ ಎನ್ನುವ ಸರಕಾರದ ಸ್ವಂತ ಅಂಕಿ–ಅಂಶವನ್ನು ಗಣನೆಗೆ ತೆಗೆದುಕೊಂಡರೂ ಸಹಾ ತಲಾ 437.50 ರೂ. ಖರ್ಚು ಮಾಡಿದಂತಾಗುತ್ತದೆ. ಇದು ವಲಸಿಗ ಕಾರ್ಮಿಕರಿಗೆ ಸರಕಾರವು ತೋರಿಸಿದ ಸಹಾನುಭೂತಿಯ ಒಟ್ಟು ವಿಸ್ತಾರ!

ಎರಡನೆಯ ತುಣುಕು 6,750 ಕೋಟಿ ರೂ ಗಳ ಮೊತ್ತಕ್ಕೆ ಸಂಬಂಧಿಸುತ್ತದೆ. ಈ ಮೊತ್ತವು, ಕಾರ್ಮಿಕರ ಪಾಲಿನ ಶಾಸನಬದ್ಧ ಉಳಿತಾಯವನ್ನು ಮುಂದಿನ ಮೂರು ತಿಂಗಳವರೆಗೆ ಶೇ .12 ರಿಂದ ಶೇ.10ರ ಇಳಿಸಿದ್ದಕ್ಕೆ ಸಂಬಂಧಿಸುತ್ತದೆ. ಸರ್ಕಾರ ಅದೆಷ್ಟು ಹತಾಶವಾಗಿದೆ ಎಂದರೆ, ಕಾರ್ಮಿಕರು ತಮ್ಮ ಭವಿಷ್ಯಕ್ಕಾಗಿ ಇಂದು ಮಾಡುವ ಉಳಿತಾಯವನ್ನು ಕಡಿಮೆ ಮಾಡಿ ಅವರ ಕೈಯಲ್ಲಿ ನಾಲ್ಕು ಕಾಸು ಹೆಚ್ಚು ಮಾಡುವ ಕ್ರಮವನ್ನೂ ಸಹ ಸರ್ಕಾರವು ತನ್ನ ಪ್ಯಾಕೇಕ್‌ನ ಒಂದು ಭಾಗವೆಂದು ಹೇಳಿಕೊಳ್ಳುತ್ತದೆ!

ಸಂಪೂರ್ಣ ಜಿಪುಣತನದಿಂದ ಕೂಡಿದ ಈ ಪ್ಯಾಕೇಜ್ ಅನ್ನು ಸಮರ್ಥಿಸಿಕೊಳ್ಳಲು ತಿಣುಕಾಡುತ್ತಿರುವ ಸರ್ಕಾರದ ಉನ್ನತಾಧಿಕಾರಿಗಳು, ಒಂದು "ಪ್ಯಾಕೇಜ್" ಯಾವಾಗಲೂ ವಿತ್ತೀಯ ಮತ್ತು ಹಣಕಾಸು ನೀತಿಯ ಕ್ರಮಗಳ "ಮಿಶ್ರಣ"ವಾಗಿರುತ್ತದೆ ಎಂದು ಹೇಳುತ್ತಾರೆ. ಅವರ ಈ ಮಾತು, ಕುದುರೆ ಮತ್ತು ಕೋಳಿ ಮಾಂಸಗಳ "ಮಿಶ್ರಣ"ದ ಸ್ಯಾಂಡ್ ವಿಚ್‌ಗಳನ್ನು ಜನರಿಗೆ ನೀಡುತ್ತಿದ್ದ ಯುದ್ಧ ಕಾಲದ ಬ್ರಿಟನ್ ಘಟನೆಯನ್ನು ನೆನಪಿಸುತ್ತದೆ. ಸ್ಯಾಂಡ್ ವಿಚ್ ಎರಡು ಮಾಂಸಗಳ 1:1 "ಮಿಶ್ರಣ" ಎಂದು ಭಾವಿಸಲಾಗಿತ್ತು. ಆದರೆ, ಅದು ಒಂದು ಕುದುರೆಗೆ ಒಂದು ಕೋಳಿಯ "ಮಿಶ್ರಣ" ವಾಗಿತ್ತು!

ಕ್ಷುಲ್ಲಕ ವಿತ್ತೀಯ ಕ್ರಮಗಳಲ್ಲದೆ, ಈ ಪ್ಯಾಕೇಜ್ ತನ್ನ ಬುದ್ಧಿಗೇಡಿತನದಿಂದಲೂ ಗಮನ ಸೆಳೆಯುತ್ತದೆ. ಈ ಬುದ್ಧಿಗೇಡಿತನದ ತಳದಲ್ಲಿ ಜನರ ಬಗ್ಗೆ ಸದಾ ಅಸಡ್ಡೆಯ ಮನೋಭಾವವಿದೆ. ಈ ಪ್ಯಾಕೇಜ್, ಬುದ್ಧಿಗೇಡಿತನದ ಒಂದು ಸ್ಪಷ್ಟ ನಿದರ್ಶನ. ಭಾರತದ ಅರ್ಥವ್ಯವಸ್ಥೆಯು ಬೇಡಿಕೆಯ ತೀವ್ರ ಕೊರತೆಯಿಂದ ನರಳುತ್ತಿದೆ ಎಂಬುದನ್ನು ಈಗ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಕೊರೋನಾ ಪೂರ್ವದಲ್ಲೇ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿತ್ತು. ಶ್ರಮಿಕ–ಪಡೆಯ ಸುಮಾರು ಕಾಲು ಭಾಗದಷ್ಟು ಮಂದಿ ಸದ್ಯದಲ್ಲಿ ಸಂಪೂರ್ಣವಾಗಿ ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಕೊಳ್ಳುವ ಶಕ್ತಿಯೇ ಇಲ್ಲವಾದುದರಿಂದ, ಬೇಡಿಕೆಯಲ್ಲಿ ತೀವ್ರ ಕೊರತೆ ಉಂಟಾಗಿರುವುದು ಆಶ್ಚರ್ಯಕರವೇನಲ್ಲ. ಆದ್ದರಿಂದ, ಬೇಡಿಕೆಯನ್ನು ಉಂಟಾಗುವಂತೆ ನೋಡಿಕೊಳ್ಳುವುದರ ಬದಲಾಗಿ ಉದ್ಯಮಗಳಿಗೆ ಕೇವಲ ಸಾಲ ಒದಗಿಸುವುದರಿಂದ ಯಾವುದೇ ಉಪಯೋಗವಿಲ್ಲ. ಉತ್ಪಾದನೆ ಹೆಚ್ಚಿಸುವಾಗ ಮಾತ್ರ ಉದ್ಯಮಗಳಿಗೆ ಸಾಲ ಬೇಕಾಗುತ್ತದೆ. ಅದು ಆಗಬೇಕು ಎಂದಾದರೆ, ಸರಕಾರ ಹೆಚ್ಚು ಹೆಚ್ಚು ಹಣ ಖರ್ಚು ಮಾಡಲೇಬೇಕು. ಆ ಮೂಲಕ ಮಾತ್ರ ಬೇಡಿಕೆಯನ್ನು ಹೆಚ್ಚಿಸಬಹುದು. ಆದರೆ, ಪ್ಯಾಕೇಜ್‌ನಲ್ಲಿ ಸರ್ಕಾರದ ಖರ್ಚಿನ ಭಾಗ ಕ್ಷುಲ್ಲಕ ಎನ್ನುವಷ್ಟು ಕಡಿಮೆ ಇದೆ. ಹಾಗಾಗಿ, ಹೆಚ್ಚು ಹೆಚ್ಚು ಸಾಲ ಕೊಡುವ ಪ್ರಲೋಭನೆಯನ್ನು ಯಾರೂ ಮೂಸುವುದಿಲ್ಲ.

ಈ ಹಂತದಲ್ಲಿ, ಖಾಸಗಿ ಉತ್ಪಾದಕರಿಗೆ ಹೆಚ್ಚು ಹೆಚ್ಚು ಬ್ಯಾಂಕ್ ಸಾಲಗಳನ್ನು ಕೊಡುವ ಅಗತ್ಯವಿಲ್ಲ. ಈಗ ಅಗತ್ಯವಿರುವುದು ಏನೆಂದರೆ, ಸಂಕಷ್ಟದಲ್ಲಿರುವ ಬಡವರಿಗಾಗಿ ಉದಾರವಾಗಿ ಖರ್ಚು ಮಾಡುವುದು ಸಾಧ್ಯವಾಗುವಂತೆ ಸ್ವತಃ ಸರ್ಕಾರವೇ ಹೆಚ್ಚು ಹೆಚ್ಚು ಸಾಲಗಳನ್ನು ಪಡೆಯವುದು. ಅನೇಕ ರಾಜಕೀಯ ಪಕ್ಷಗಳು, ಅದರಲ್ಲೂ ಮೇಲಾಗಿ ಎಡಪಕ್ಷಗಳು, ಒಂದಿಷ್ಟು ಹಣವನ್ನು ಸರ್ಕಾರವು ವ್ಯಾಕುಲಗೊಂಡ ಬಡವರಿಗೆ (ಅವರ ಖಾತೆಗೆ ನೇರವಾಗಿ) ವರ್ಗಾಯಿಸುವಂತೆ ಸೂಚಿಸಿವೆ. ಬಡವರಿಗೆ ಹಣ ವರ್ಗಾವಣೆ ಮಾಡುವ ಮೂಲಕ ಸರಕಾರವು ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಬೀಳಿಸಬಹುದಿತ್ತು. ಅದು ಬೇಡಿಕೆಯನ್ನು ಉಂಟುಮಾಡುತ್ತಿತ್ತು ಮತ್ತು ಅದು ಬಡವರ ಕಷ್ಟವನ್ನೂ ಉಪಶಮನಗೊಳಿಸುತ್ತಿತ್ತು. ಈ ರೀತಿಯಲ್ಲಿ ಬೇಡಿಕೆಯನ್ನು ಮೊದಲಿನ ಸ್ಥಿತಿಗೆ ತರುವ (ಪುನರುಜ್ಜೀವನಗೊಳಿಸುವ) ಮೂಲಕ ಉತ್ಪಾದನೆಯನ್ನು ವಿಸ್ತರಿಸಬಹುದಿತ್ತು. ಉತ್ಪಾದನಾ ವಿಸ್ತರಣೆಯ ಪೋಷಣೆಗಾಗಿ ಬ್ಯಾಂಕ್ ಸಾಲಗಳಿಗೆ ಹೆಚ್ಚಿನ ಬೇಡಿಕೆ ಬರುತ್ತಿತ್ತು. ಆದರೆ, ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಈ ಇಡೀ ಪ್ಯಾಕೇಜ್ ಪ್ರಕ್ರಿಯೆಯಿಂದ ಹೊರಗಿಡುವ ಮೂಲಕ ಮತ್ತು ಖಾಸಗಿ ಉತ್ಪಾದಕರಿಗೆ ಕೇವಲ ಬ್ಯಾಂಕ್ ಸಾಲ ಕೊಡುವ ಮಾತುಗಳ ಮೂಲಕ, ನೈಜ ಬೇಡಿಕೆ ಸೃಷ್ಟಿಯಾಗದಂತೆ ನೋಡಿಕೊಂಡಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸರಕಾರದ ಪ್ಯಾಕೇಜ್‌ನಿಂದ ಬಡವರ ಸಂಕಟವೂ ಉಪಶಮನವಾಗುವುದಿಲ್ಲ ಅಥವಾ ಬೇಡಿಕೆಯೂ ಹೆಚ್ಚುವುದಿಲ್ಲ ಅಥವಾ ಬ್ಯಾಂಕ್ ಸಾಲಗಳ ನೀಡಿಕೆಯೂ ಹೆಚ್ಚುವುದಿಲ್ಲ.

ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಸಾಷ್ಟಾಂಗ ನಮಸ್ಕಾರ

ಕೆಲಸಕ್ಕೆ ಬಾರದ ಇಂತಹ ಪ್ಯಾಕೇಜ್ ಅನ್ನು ಘೋಷಣೆ ಮಾಡಿದ ಸರಕಾರದ ಉದ್ದೇಶವಾದರೂ ಏನು? ಇಲ್ಲಿ, ಸರ್ಕಾರದ ಬುದ್ಧಿಗೇಡಿತನದೊಂದಿಗೆ ತೊಡರಿಕೊಂಡಿರುವ ಇನ್ನೊಂದು ಅಂಶವನ್ನು ಹೇಳಬೇಕಾಗುತ್ತದೆ. ಅದೇನೆಂದರೆ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಲು ಸರಕಾರಕ್ಕಿರುವ ಬಯಕೆ. ಸರ್ಕಾರವು ತನ್ನ ಖರ್ಚು ವೆಚ್ಚಗಳ ಬಗ್ಗೆ ಜಿಪುಣತನ ತೋರಿಸುತ್ತದೆ ಏಕೆಂದರೆ ವಿತ್ತೀಯ ಕೊರತೆ ಹೆಚ್ಚಾಗುತ್ತದೆ ಎಂಬ ಕಾರಣದಿಂದ. ಅಂತಹ ಸಂದರ್ಭದಲ್ಲಿ ಈ ಕ್ರೆಡಿಟ್–ರೇಟಿಂಗ್(ಸಾಲ–ಯೋಗ್ಯತೆಯನ್ನು ಲೆಕ್ಕ ಹಾಕುವ) ಏಜೆನ್ಸಿಗಳು ಸರ್ಕಾರದ ಸ್ಥಾನಮಾನವನ್ನು ಕೆಳ ದರ್ಜೆಗೆ ಇಳಿಸುತ್ತವೆ. ಅದರಿಂದಾಗಿ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ದೇಶವನ್ನು ತೊರೆಯಬಹುದು. ಹೀಗಾದರೆ, ಬಂಡವಾಳದ ಹೊರಹರಿವಿನ ಮೇಲೆ ನಿಯಂತ್ರಣ ಹೇರುವ ದಿಟ್ಟತನವನ್ನು ಮೋದಿ ಸರಕಾರವು ತೋರುವುದಿಲ್ಲ. ಬದಲಿಗೆ, ತನ್ನ ಸ್ವಂತ ಖರ್ಚು ವೆಚ್ಚಗಳ ಮೇಲೆಯೇ ಕಡಿವಾಣ ಹಾಕುವ ಮೂಲಕ ಈಗಾಗಲೇ ಅದು ಬಂಡವಾಳಕ್ಕೆ ಶರಣಾಗಿದೆ. ಈ ನಿಲುವು ಬಡವರ ಬಗ್ಗೆ ಸರ್ಕಾರ ಹೊಂದಿರುವ ನಿರ್ಲಕ್ಷ್ಯಕ್ಕೆ ತಕ್ಕಂತೆಯೇ ಇದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜನರ ಹಿತಾಸಕ್ತಿ ಮತ್ತು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಹಿತಾಸಕ್ತಿಗಳ ನಡುವಿನ ತಿಕ್ಕಾಟದಲ್ಲಿ, ಮೋದಿ ಸರ್ಕಾರವು ಜಾಗತೀಕರಣಗೊಂಡ ಹಣಕಾಸು ಬಂಡವಾಳದೊಂದಿಗೆ ದೃಢವಾಗಿ ನಿಲ್ಲುತ್ತದೆ. ತಮಾಷೆಯೆಂದರೆ, ಇದೇ ಸರ್ಕಾರವು ಆರ್ಥಿಕ ಸ್ವಾವಲಂಬಿ ದೇಶವನ್ನು ನಿರ್ಮಿಸುವ ಬಗ್ಗೆಯೂ ಮಾತನಾಡುತ್ತದೆ. ನಿಜವೆಂದರೆ, ಹಣಕಾಸು ಬಂಡವಾಳಕ್ಕೆ ಶರಣಾಗಿರುವುದನ್ನು ಸಮರ್ಥಿಸಿಕೊಳ್ಳಲು ಸರ್ಕಾರವು ಸ್ವಾವಲಂಬನೆಯ ಆಡಂಬರದ ಮಾತುಗಳನ್ನು ಬಳಸಿಕೊಳ್ಳುತ್ತದೆ.

ಈ ಪ್ರಕ್ರಿಯೆಯ ದ್ವಂದ್ವಾತ್ಮಕತೆ ಗಮನಾರ್ಹವಾಗಿದೆ. ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಕಟ್ಟುಪಾಡುಗಳು ಮತ್ತು ದುಡಿಯುವ ಜನರ ಹಿತಾಸಕ್ತಿಗಳ ನಡುವಿನ ಸಂಘರ್ಷವು ಜಾಗತೀಕರಣ ಯುಗದ ಗುಣ–ಲಕ್ಷಣಗಳನ್ನು ನಿರೂಪಿಸುತ್ತದೆ. ಆದರೆ, ಭಾರತದಂತಹ ಅರ್ಥವ್ಯವಸ್ಥೆಗಳು ತುಲನಾತ್ಮಕವಾಗಿ ವೇಗವಾಗಿ ಬೆಳೆಯುತ್ತಿರುವಾಗ, ಈ ಸಂಘರ್ಷವನ್ನು ಹಾಗೂ ಹೀಗೂ ಮರೆಮಾಚಬಹುದು ಮತ್ತು "ಬೆಳವಣಿಗೆ"ಯ ಮೂಲಕ ಅಂತಿಮವಾಗಿ ಎಲ್ಲರ ಬದುಕೂ ಉತ್ತಮವಾಗುವುದೆಂದು ನಂಬಿಸುತ್ತಾ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಧಿಪತ್ಯವು ಸವಾಲೇ ಇಲ್ಲದೆ ಉಳಿಯಬಹುದು. ಆದರೆ, ಎಲ್ಲರ ಬದುಕೂ ಹಸನಾಗಲಿಲ್ಲ. ವಾಸ್ತವಿಕವಾಗಿ, ನವ ಉದಾರವಾದಿ ಜಾಗತೀಕರಣದ ಯುಗದಲ್ಲಿ ದುಡಿಯುವ ಜನರ ಕಷ್ಟಗಳು ಹೆಚ್ಚಿದವು. ಆದರೂ ಕೂಡ, ಆರ್ಥಿಕ ಬೆಳವಣಿಗೆ ವೇಗವಾಗಿ ನಡೆದಲ್ಲಿ



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ನಾಳಿನ ಪರಿಸ್ಥಿತಿಗಳು ಬೇರೆಯೇ ಆಗಿರುತ್ತವೆ ಎಂಬ ಮಿಥ್ಯೆಯನ್ನು ನಂಬಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಆದರೆ, ವಿಶ್ವ ಬಂಡವಾಳಶಾಹಿಯ ಬಿಕ್ಕಟ್ಟಿನ ಜೊತೆಗೆ ಭಾರತದ ಅರ್ಥವ್ಯವಸ್ಥೆಯ ಬಿಕ್ಕಟ್ಟೂ ತಗುಲಿಕೊಂಡಿರುವುದರಿಂದ ಈ ಸಂಘರ್ಷವನ್ನು ಇನ್ನು ಮುಂದೆ ಮರೆಮಾಚಲಾಗದು. ಸರ್ವವ್ಯಾಪಿಯಾಗಿರುವ ಕರೋನಾ ಜಾಢ್ಯವು ಈ ಸಂಘರ್ಷವನ್ನು ಎಲ್ಲೆಡೆಯಲ್ಲಿಯೂ ಒಂದು ಪಕ್ವ ಸ್ಥಿತಿಗೆ ತಂದು ನಿಲ್ಲಿಸಿದೆ.

ಅನೇಕ ದೇಶಗಳಲ್ಲಿ ಸರ್ಕಾರಗಳು, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಇಷ್ಟಪಡದ ವಿತ್ತೀಯ ಕೊರತೆಗಳ ಮೂಲಕವೇ ಗಣನೀಯ ಪ್ರಮಾಣದ ಸರ್ಕಾರಿ ವೆಚ್ಚಗಳಿಂದ ಕೂಡಿದ ರಕ್ಷಕ–ಹಾಗೂ–ಪರಿಹಾರ ಪ್ಯಾಕೇಜುಗಳನ್ನು ಬಿಚ್ಚಿಟ್ಟಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಸರ್ಕಾರಗಳು, ಹಣಕಾಸು ಬಂಡವಾಳದ ಅಪೇಕ್ಷೆ–ಆಶಯಗಳ ವಿರುದ್ಧವಾಗಿ, ಜನರ ಅಗತ್ಯಗಳಿಗೆ ತಲೆಬಾಗಬೇಕಾಯಿತು. ಈ ಪ್ರಕ್ರಿಯೆಯು ಭವಿಷ್ಯದಲ್ಲಿ ಹೇಗೆ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ನಾಲ್ಕು ದಶಕಗಳ ಹಿಂದೆ ಹಲವು ದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಕಲ್ಯಾಣ ರಾಜ್ಯ ಕಾರ್ಯಕ್ರಮಗಳ ಪುನರಾಗಮನ ಆಗಲಿದೆಯೇ ಅಥವಾ ಕರೋನಾ ಜಾಢ್ಯವು ಸರ್ವವ್ಯಾಪಿಯಾಗಿ ಕಾಡುತ್ತಿರುವ ಸಂದರ್ಭದಲ್ಲಿ ತೋರಿಸಲಾದ ದುಡಿಯುವ ಜನರ ಬಗೆಗಿನ ಕಾಳಜಿಯು, ಕರೋನಾ ಜಾಢ್ಯವು ಮುಗಿದ ಮೇಲೆ, ಹಣಕಾಸು ಬಂಡವಾಳದ ಒತ್ತಡದಲ್ಲಿ ಕಣ್ಮರೆಯಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ಆದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಧಿಪತ್ಯವನ್ನು ಕೊಂಚವೂ ಅಲುಗಾಡಿಸದೇ ಇರುವ ಭಾರತದಂತಹ ದೇಶಗಳ ಸರ್ಕಾರಗಳು, ಕರೋನಾ ಜಾಢ್ಯವು ಜನರನ್ನು ಪೀಡಿಸುತ್ತಿರುವ ಸಮಯದಲ್ಲಿಯೂ, ಹಣಕಾಸು ಬಂಡವಾಳದ ಕಟ್ಟುಪಾಡುಗಳಿಗೆ, ಇಚ್ಛೆಗಳಿಗೆ ತಲೆಬಾಗಿವೆ. ಹಣಕಾಸು ಬಂಡವಾಳದ ಈ ಆಧಿಪತ್ಯವು ಆಬಾಧಿತವಾಗಿ ಮುಂದುವರಿಯುತ್ತದೆ ಎಂದಾದರೆ, ಸರ್ವಾಧಿಕಾರಿ, ಪ್ರಜಾಪ್ರಭುತ್ವ–ವಿರೋಧಿ ನಡವಳಿಕೆಗಳು ಮತ್ತು ಹೆಚ್ಚು ಹೆಚ್ಚು ಫ್ಯಾಸಿಸ್ಟ್ ದಬ್ಬಾಳಿಕೆಯ ಕ್ರಮಗಳ ಮೂಲಕವೇ.

ನವ–ಉದಾರವಾದಿ ಕಾರ್ಯಸೂಚಿ

ಇಂತಹ ಪರಿಸ್ಥಿತಿಯ ಬಗ್ಗೆ ಬಹಳ ಸ್ಪಷ್ಟವಾದ ಒಂದು ಉದಾಹರಣೆ ಭಾರತದಲ್ಲಿ ಸಿಗುತ್ತದೆ. ಕಾರ್ಮಿಕ ಹಕ್ಕುಗಳ ಮೇಲಿನ ದಾಳಿ, ಜನ ಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿ, ನಾಗರೀಕತ್ವ ತಿದ್ದುಪಡಿ ಮಸೂದೆ–ವಿರೋಧಿ ಕಾರ್ಯಕರ್ತರ ಬಂಧನ, ಯಾವ ಧರ್ಮದವರನ್ನೂ ಬಿಡದೆ ಎಲ್ಲರನ್ನೂ ಪೀಡಿಸುತ್ತಿರುವ ಕೊರೋನಾ ಅಂಟು ರೋಗದ ವಿಚಾರದಲ್ಲಿಯೂ ಸಹ ಇಡೀ ಸಮಾಜವನ್ನು ಕೋಮುವಾದೀಕರಣಗೊಳಿಸುವ ಬೃಹತ್ ಪ್ರಯತ್ನಗಳು ಹಾಗೂ ಖಾಸಗಿಯವರಿಗೆ ಮತ್ತು ವಿದೇಶಿ ಬಂಡವಾಳಗಾರರಿಗೆ ದೋಚಲು ಅನುವಾಗುವಂತೆ ಆರ್ಥಿಕತೆಯನ್ನು ಮತ್ತಷ್ಟು ಮುಕ್ತಗೊಳಿಸುವುದು, ಇಂತಹ ಕ್ರಮಗಳ ವಿರುದ್ಧ ರಾಜಕೀಯವಾಗಿ ಜನರನ್ನು ಪರಿಣಾಮಕಾರಿಯಾಗಿ ಸಂಘಟಿಸುವುದು ಬಹಳ ಕಷ್ಟಕರವಾಗಿರುವ ಲಾಕ್ ಡೌನ್ ಅವಧಿಯಲ್ಲಿ ಇವೆಲ್ಲವೂ ನಡೆಯುತ್ತಿವೆ. ಈ ಕ್ರಮಗಳು, ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ಸರ್ಕಾರವು ಎಷ್ಟೊಂದು ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದೆ ಮತ್ತು ಅದರ ತತ್ವಗಳಿಗೆ ಎಷ್ಟೊಂದು ಬದ್ಧತೆ ಹೊಂದಿದೆ ಎಂಬುದರ ದ್ಯೋತಕವಾಗಿವೆ. ಈ ಬದ್ಧತೆಯ ಉದ್ದೇಶಕ್ಕಾಗಿ ಸರಕಾರವು ಜನರ ಹಿತವನ್ನು ಬಲಿಕೊಡಲೂ ಹೇಸದು. ತನ್ನ ಆಧಿಪತ್ಯವು ಸವಾಲಿಗೆ ಒಳಗಾಗಿರುವ ಈ ಯುಗದಲ್ಲಿ, ಜನ ಸಾಮಾನ್ಯರ ಬಗ್ಗೆ ಅಸಹನೆ–ಅಸಹ್ಯ ಭಾವನೆಗಳನ್ನು ಹೊಂದಿರುವ, ಅಥವಾ, ಜನ ಏನೋ ಮಾಡಿಬಿಡುತ್ತಾರೆ ಎನ್ನುವ ಭಯ–ಭೀತಿಯುಳ್ಳ ಸರಕಾರಗಳನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಬಹಳವಾಗಿ ಇಷ್ಟಪಡುತ್ತದೆ. ವ್ಯಾಕುಲಗೊಂಡ ದುಡಿಯುವ ಜನರಿಗೆ ನೆರವು ನೀಡುವ ಹೆಸರಿನಲ್ಲಿ (“ರೆಸ್ಕ್ಯೂ ಪ್ಯಾಕೇಜ್” ನ ಹೆಸರಿನಲ್ಲಿ), ಪರಿಸ್ಥಿತಿಯ ದುರ್ಲಾಭ ಪಡೆದು, ಮೋದಿ ಸರ್ಕಾರವು ಖಾಸಗಿ ಮತ್ತು ವಿದೇಶಿ ಬಂಡವಾಳದ ಹೂಡಿಕೆಗೆ ಅನೇಕ ವಲಯಗಳನ್ನು ತೆರೆದಿಡುವ ಮೂಲಕ ನವ ಉದಾರ ಬಂಡವಾಳಶಾಹಿಯ ಕಾರ್ಯಸೂಚಿಯನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ದಿರುವುದು ಒಂದು ಆಕಸ್ಮಿಕವೇನಲ್ಲ.

ಧಾನ್ಯ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ದಾಸ್ತಾನು ಮಿತಿಗಳನ್ನು ಸರ್ಕಾರ ತೆಗೆದುಹಾಕಿದೆ. ಈ ಕ್ರಮದಿಂದಾಗಿ ಅವರಿಗೆ ಬಹಳ ದೊಡ್ಡ ಪಾತ್ರ ನೀಡಿದಂತಾಗುತ್ತದೆ. ಖಾಸಗಿ ವ್ಯಾಪಾರಿಗಳಿಗೆ ಕೊಟ್ಟಿರುವ ಈ ಪ್ರಾಮುಖ್ಯತೆಯು ಎರಡು ಸ್ಪಷ್ಟ ಪರಿಣಾಮಗಳನ್ನು ಬೀರುತ್ತದೆ. ಒಂದು, ಧಾನ್ಯಗಳ ದಾಸ್ತಾನನ್ನು ಎಫ್‌ಸಿಐ ಬಹಳ ಸಣ್ಣ ಪ್ರಮಾಣದಲ್ಲಿ ಇಟ್ಟುಕೊಳ್ಳುತ್ತದೆ. ಅಂದರೆ, ನಾವು ಪ್ರಸ್ತುತ ಎದುರಿಸುತ್ತಿರುವಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಧಾನ್ಯಗಳನ್ನು ಪೂರೈಸುವ ದೇಶದ ಸಾಮರ್ಥ್ಯವು ಬಹಳ ಮಟ್ಟಿಗೆ ಕ್ಷೀಣಿಸುತ್ತದೆ. ಅಂದಹಾಗೆ, ಎಫ್‌ಸಿಐ ಹೊಂದಿರುವ ಆಹಾರ ಧಾನ್ಯಗಳ ಬೃಹತ್ ಪ್ರಮಾಣದ ದಾಸ್ತಾನು, ದೇಶದ ಶಕ್ತಿಯ ಮೂಲವೇ. ಎರಡನೆಯದಾಗಿ, ದೇಶೀಯ ಆಹಾರ ಧಾನ್ಯಗಳ ಬೆಲೆಯನ್ನು ಜಾಗತಿಕ ಮಾರುಕಟ್ಟೆ ಬೆಲೆಗಳಿಗೆ ನಿಕಟವಾಗಿ ಜೋಡಿಸಲಾಗುವುದು ಎಂದರ್ಥ. ಈ ಕ್ರಮದಿಂದಾಗಿ ನಮ್ಮ ಆಹಾರ ಭದ್ರತೆಯ ವ್ಯವಸ್ಥೆಯು ಹಳ್ಳ ಹಿಡಿಯುತ್ತದೆ. ಕಳೆದ ಕೆಲವು ದಶಕಗಳಲ್ಲಿ, ಆಹಾರ ಧಾನ್ಯಗಳ ಬೆಲೆ ನಿಗದಿ, ಜನರಿಗೆ ಸಬ್ಸಿಡಿ ದರಲ್ಲಿ ಆಹಾರ ಧಾನ್ಯಗಳ ಪಡಿತರ, ರೈತರಿಗೆ ಫಸಲಿಗೆ ಲಾಭದಾಯಕ ಬೆಲೆ ಮತ್ತು ಜನ ಸಾಮಾನ್ಯರಿಗೆ ಧಾನ್ಯ ಕೊಳ್ಳುವುದು ಹೊರೆಯಾಗದಂತೆ ಅವರ ಹಿತ ರಕ್ಷಣೆ ಮಾಡುವ ಒಂದು ವಿಸ್ತಾರವಾದ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಇದು ದೇಶದ ಸಾಧನೆಯೇ.

ನವ ಉದಾರವಾದದ ಅಡಿಯಲ್ಲಿ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಸರ್ಕಾರದ ಮೇಲೆ ಹೇರಿದ ವಿತ್ತೀಯ ನಿರ್ಬಂಧಗಳಿಂದಾಗಿ ನಮ್ಮ ಆಹಾರ ವ್ಯವಸ್ಥೆಯು ಬಹುವಾಗಿ ದುರ್ಬಲಗೊಂಡಿದೆ. ತತ್ಪರಿಣಾಮವಾಗಿ, ರೈತರಿಂದ ಆಹಾರ ಧಾನ್ಯಗಳನ್ನು ಕೊಳ್ಳುವ ಬೆಲೆಯನ್ನು ಅತ್ಯಂತ ಕಡಿಮೆ ಮಟ್ಟದಲ್ಲಿ ಇಡಲಾಗುತ್ತದೆ. ಇದರ ಅರ್ಥವೇನೆಂದರೆ, ರೈತರು ತಮ್ಮ ಫಸಲಿಗೆ ಪಡೆಯುವ ಬೆಲೆಗಳು ಲಾಭದಾಯಕವಾಗಿರುವುದಿಲ್ಲ. ಏಕೆಂಬುದನ್ನು ನಿರ್ದಿಷ್ಟವಾಗಿ ಹೇಳುವುದಾದರೆ, ಕುಟುಂಬದ ಆರೋಗ್ಯ, ತಮ್ಮ ಮಕ್ಕಳ ಶಿಕ್ಷಣ ಮತ್ತು ಇತರ ಸೇವೆಗಳನ್ನು ಖಾಸಗಿ ಸಂಸ್ಥೆಗಳಿಂದ ಪಡೆಯುವಾಗ ರೈತರು ದುಬಾರಿ ವೆಚ್ಚ ತೆರಬೇಕಾಗುತ್ತದೆ. ಆಹಾರ ಸಬ್ಸಿಡಿಯ ಖರ್ಚುಗಳನ್ನು ಹತೋಟಿಯಲ್ಲಿಡುವ ಸಲುವಾಗಿ ಸರ್ಕಾರವು ಆಹಾರ ಧಾನ್ಯ ವಿತರಿಸುವ ಸಂದರ್ಭದಲ್ಲಿ ಬಿಪಿಎಲ್/ಎಪಿಎಲ್ ಎಂಬುದಾಗಿ ಭೇದ–ಭಾವ ಮಾಡುತ್ತದೆ. ಹಾಗಾಗಿ, ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಹೆಚ್ಚುತ್ತಿರುವ ಖಾಸಗೀಕರಣವು ನಮ್ಮ ಆಹಾರ ಸಂಗ್ರಹ ಮತ್ತು ವಿತರಣಾ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತದೆ. ಅಲ್ಲದೆ, ನಮ್ಮ ರೈತರಿಗೆ ತಮ್ಮ ಆಹಾರ ಧಾನ್ಯಗಳನ್ನು ರಫ್ತು ಮಾರುಕಟ್ಟೆಯಲ್ಲಿ ಮಾರುವ ಅವಕಾಶ ಸಿಗುತ್ತದೆ ಎಂಬ ವಾದವು ರೈತರನ್ನು ಮರುಳು ಮಾಡುವ ಒಂದು ತಂತ್ರವಷ್ಟೇ. ಈ ಕ್ರಮವು ರೈತರಿಗೆ ಅಪಾಯಗಳನ್ನು ಹೆಚ್ಚಿಸುತ್ತದೆ ಮತ್ತು ದೇಶದ ಆಹಾರ ಭದ್ರತೆಯ ವ್ಯವಸ್ಥೆಯನ್ನು ಹಾಳುಗೆಡವುತ್ತದೆ.

ಪ್ರಮುಖ ವಲಯಗಳಲ್ಲಿ ಮತ್ತಷ್ಟು ಖಾಸಗೀಕರಣ –ವಸಾಹತು ಕಾಲದ ಚಿಂತನೆ

ಸರ್ಕಾರ ಘೋಷಿಸಿದ ಇನ್ನೊಂದು ಪ್ರಮುಖ ಬದಲಾವಣೆಯೇ ಕಲ್ಲಿದ್ದಲು ಉತ್ಪಾದನೆ ಮತ್ತು ರಕ್ಷಣಾ ಉಪಕರಣಗಳ ಉತ್ಪಾದನೆಯಂಥ ಅನೇಕ ಪ್ರಮುಖ ವಲಯಗಳನ್ನು ಖಾಸಗಿ ಮತ್ತು ವಿದೇಶೀ ಬಂಡವಾಳ ಹೂಡಿಕೆಗೆ ತೆರೆದಿಟ್ಟಿರುವುದು. ಖನಿಜಗಳು ಶಾಶ್ವತವಾಗಿ ಬರಿದಾಗುವ ಸಂಪನ್ಮೂಲಗಳು. ಆದ್ದರಿಂದ, ಖನಿಜಗಳ ಉತ್ಪಾದನೆಯು ಪ್ರಭುತ್ವದ ನೇತೃತ್ವದಲ್ಲೇ ಇರಬೇಕು ಎಂಬುದು ಸ್ವಾತಂತ್ರ್ಯ ಹೋರಾಟದ ದಿನಗಳಿಂದಲೂ ತಾಳಿದ್ದ ನಿಲುವು. ಅದರಂತೆ ಸ್ವಾತಂತ್ರ್ಯಾನಂತರದಲ್ಲಿ, ಕಲ್ಲಿದ್ದಲು ಮುಂತಾದ ಖನಿಜಗಳು ಸಾರ್ವಜನಿಕ ವಲಯದಲ್ಲೇ ಉತ್ಪಾದಿಸಲ್ಪಡುತ್ತಿದ್ದವು. ನವ ಉದಾರವಾದದ ಅಡಿಯಲ್ಲಿ ಮೊದಲಿಗೆ ಕೆಲವು ನಿರ್ದಿಷ್ಟ ಕಂಪೆನಿಗಳಿಗೆ ಮಾತ್ರ ನಿರ್ದಿಷ್ಟ ಪ್ರದೇಶದಲ್ಲಿ ಕಲ್ಲಿದ್ದಲು ಗಣಿಗಾರಿಕೆಗೆ ಅವಕಾಶ ನೀಡಲಾಯಿತು. ನಂತರ ಖಾಸಗಿ ವಲಯದವರಿಗೆ ಸ್ವಲ್ಪ ಮಟ್ಟಿಗೆ ಅವಕಾಶವಿತ್ತು. ಆದರೆ,

ಜನರ ಹಿತಾಸಕ್ತಿ ಮತ್ತು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಹಿತಾಸಕ್ತಿಗಳ ನಡುವಿನ ತಿಕ್ಕಾಟದಲ್ಲಿ, ಮೋದಿ ಸರ್ಕಾರವು ಜಾಗತೀಕರಣಗೊಂಡ ಹಣಕಾಸು ಬಂಡವಾಳದೊಂದಿಗೆ ದೃಢವಾಗಿ ನಿಲ್ಲುತ್ತದೆ. ತಮಾಷೆಯೆಂದರೆ, ಇದೇ ಸರ್ಕಾರವು ಆರ್ಥಿಕ ಸ್ವಾವಲಂಬಿ ದೇಶವನ್ನು ನಿರ್ಮಿಸುವ ಬಗ್ಗೆಯೂ ಮಾತನಾಡುತ್ತದೆ. ನಿಜವೆಂದರೆ, ಹಣಕಾಸು ಬಂಡವಾಳಕ್ಕೆ ಶರಣಾಗಿರುವುದನ್ನು ಸಮರ್ಥಿಸಿಕೊಳ್ಳಲು ಸರ್ಕಾರವು ಸ್ವಾವಲಂಬನೆಯ ಆಡಂಬರದ ಮಾತುಗಳನ್ನು ಬಳಸಿಕೊಳ್ಳುತ್ತದೆ.

ಈಗ ಇಡೀ ಕಲ್ಲಿದ್ದಲು ಗಣಿಗಾರಿಕೆಯನ್ನು ಖಾಸಗಿ ವಲಯಕ್ಕೆ ತೆರೆದಿಡಲಾಗಿದೆ.

ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಉತ್ತೇಜನದಂತಹ ಮಾಮೂಲು ಹೇಳಿಕೆಗಳನ್ನು ಬಿಟ್ಟರೆ ಈ ರೀತಿಯ ಖಾಸಗೀಕರಣದ ನಿರ್ಧಾರಕ್ಕೆ ಬೇರೆ ವಿವರಣೆಯೇ ಇಲ್ಲ. ಸಾರ್ವಜನಿಕ ವಲಯದ ಕೋಲ್ ಇಂಡಿಯಾ ಸಂಸ್ಥೆಯು ಕಲ್ಲಿದ್ದಲು ಉತ್ಪಾದನೆಗೆ ಬೇಕಾದ ಆಧುನಿಕ ತಂತ್ರಜ್ಞಾನವನ್ನು ಹೊಂದಿಲ್ಲ ಅಥವಾ ಗಣಿಗಾಕೆಯ ಆಧುನೀಕರಣಕ್ಕೆ ಅದರ ಬಳಿ ಅಗತ್ಯವಾದ ಹಣವಿಲ್ಲ ಅಥವಾ ಇತರ ಕಾರಣದಿಂದಾಗಿ ದೇಶೀಯ ಬೇಡಿಕೆಯನ್ನು ಪೂರೈಸಲು ಅದು ಅಸಮರ್ಥವಾಗಿದೆ ಎಂಬುದು ವಿಷಯವೇ ಅಲ್ಲ. ಆದ್ದರಿಂದ, ಅರ್ಥವ್ಯವಸ್ಥೆಯಲ್ಲಿ ಬೆಳವಣಿಗೆಯನ್ನು ಉತ್ತೇಜಿಸುವ ನೆಪದಲ್ಲಿ ಖಾಸಗಿ ವಲಯವನ್ನು ಪ್ರೋತ್ಸಾಹಿಸುವುದು ವಿಚಿತ್ರವಾಗಿ ಕಾಣುತ್ತದೆ. ಇದು, ಬಿಜೆಪಿ ಸರ್ಕಾರದ ಚಿಂತನೆಯು ವಸಾಹತು ಕಾಲದ “ಖನಿಜಗಳ ಮೂಲಕ ಬೆಳವಣಿಗೆ”ಯ ಹಳೆಯ ತಂತ್ರವನ್ನು ಹೋಲುತ್ತದೆ ಎಂಬುದನ್ನು ಸೂಚಿಸುತ್ತದೆ.


ಖನಿಜಗಳು ಶಾಶ್ವತವಾಗಿ ಬರಿದಾಗುವ ಸಂಪನ್ಮೂಲವಾಗಿರುವುದರಿಂದ ಅವುಗಳ ಉತ್ಪಾದನೆಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಅದರ ಉತ್ಪಾದನೆಯ ಮಟ್ಟವು ಇತರ ವಲಯಗಳ ಅಗತ್ಯವನ್ನು ಅವಲಂಬಿಸಿರಬೇಕು. ಇಂತಹ ವಲಯಗಳು ಉದ್ಯೋಗ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಉದ್ಯೋಗ ಸೃಷ್ಟಿಸುವ ನೆಪದಲ್ಲಿ ಖನಿಜ ಉತ್ಪಾದನೆಯ “ಮುಕ್ತ–ಅವಕಾಶ”ವನ್ನು ಯಾರಿಗೆ ಬೇಕಾದರೂ ನೀಡುವುದು ಮತ್ತು ಶಾಶ್ವತವಾಗಿ ಬರಿದಾಗುವ ಸಂಪನ್ಮೂಲವನ್ನು ಅತಿಯಾಗಿ ಬಳಸುವುದು ಊಹೆಗೆ ಮೀರಿದ ಬುದ್ಧಿಗೇಡಿತನವಾಗುತ್ತದೆ. ಆದರೆ, ಮೋದಿ ಸರ್ಕಾರವು ಕಲ್ಲಿದ್ದಲು ಮತ್ತು ಇತರ ಖನಿಜಗಳ ಉತ್ಪಾದನೆಯನ್ನು ಖಾಸಗಿ ವಲಯಕ್ಕೆ ತೆರೆದಿಡುವ ಮೂಲಕ ಅದನ್ನೇ ಮಾಡಲು ಹೊರಟಿದೆ. ಅಲ್ಲದೆ, ವಿದೇಶಿ ಸಹಭಾಗಿತ್ವದೊಂದಿಗೆ ಕಲ್ಲಿದ್ದಲು ಉತ್ಪಾದನೆಯಿಂದ ಬರುವ ಆದಾಯವು ದೇಶದಿಂದ ಹೊರ ಹೋಗುತ್ತದೆ, ಮತ್ತು ಪೂರೈಕೆಗಳು ಖಾಲಿಯಾದಾಗ ದೇಶವು ಹಿಂದೆ ಬೀಳುತ್ತದೆ.

ಎಫ್‌ಡಿಐನಿಂದ ಸ್ವಾವಲಂಬನೆ!

ರಕ್ಷಣಾ ಉಪಕರಣಗಳ ಉತ್ಪಾದನೆಯಲ್ಲಿ ವಿದೇಶಿ ನೇರ ಹೂಡಿಕೆಗೆ ಅನುಮತಿಸುವ ಕ್ರಮವು ದೇಶದ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ. ಈ ಅಂಶವು ಜನರ ಗಮನಕ್ಕೆ ಬಂದಿದೆ. ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ದೇಶವು ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಸಾಗುತ್ತಿತ್ತು. ಆದರೆ, ಇತ್ತೀಚೆಗೆ ದೇಶದ ಆಮದು–ಅವಲಂಬನೆ ಹೆಚ್ಚುತ್ತಿರುವುದು ಒಂದು ಹಿನ್ನಡೆಯೇ. ಈ ಹಿನ್ನಡೆಯನ್ನು ಹಿಂದೆ ಸರಿಸಿ ಮುನ್ನಡೆಯಬೇಕು ಎಂದಾದರೆ, ಅಗತ್ಯವಿದ್ದಕಡೆ ತಂತ್ರಜ್ಞಾನವನ್ನು ಖರೀದಿಸಿ ಸಾರ್ವಜನಿಕ ವಲಯದಲ್ಲೇ ಉತ್ಪಾದಿಸುವುದು ಅಗತ್ಯವಾಗುತ್ತದೆ. ಆದರೆ, ದೇಶ ರಕ್ಷಣೆಯಂತಹ ಸೂಕ್ಷ್ಮ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡುವುದು ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುತ್ತದೆ. ಆದರೂ, ಸ್ವಾವಲಂಬನೆಗಾಗಿ ಈ ರೀತಿ ಮಾಡಲಾಗುತ್ತಿದೆ ಎಂದು ವಾದಿಸುವುದು ಸರ್ಕಾರದ ಸುಳ್ಳುಬುರುಕುತನಕ್ಕೆ ಮತ್ತೊಂದು ನಿದರ್ಶನ!

ಈ ರೀತಿಯಲ್ಲಿ ಖಾಸಗೀಕರಣಕ್ಕೆ ತೆರೆದುಕೊಳ್ಳುವುದು ತಾತ್ವಿಕವಾಗಿ ತಪ್ಪಾಗಿರುವುದರ ಜೊತೆಗೆ ಖಾಸಗಿ ಬಂಡವಾಳವೂ ಸಾಕಷ್ಟು ಪ್ರಮಾಣದಲ್ಲಿ ಹೂಡಿಕೆಯಾಗುವುದಿಲ್ಲ. ರಕ್ಷಣಾ ಉತ್ಪಾದನೆಯಲ್ಲಿ ಮಾಡುವ ಖಾಸಗಿ ಹೂಡಿಕೆಯು ಆ ವಲಯದ ಉತ್ಪನ್ನಗಳ ಮೇಲೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಅವಲಂಬಿಸಿರುತ್ತದೆ. ಈ ಬೇಡಿಕೆಯ ಪ್ರಮಾಣವು ಸರ್ಕಾರದ ರಕ್ಷಣಾ ವೆಚ್ಚವೆಷ್ಟು ಎಂಬುದನ್ನು ಅವಲಂಬಿಸಿರುತ್ತದೆ. ಹಾಗಾಗಿ, ಸರ್ಕಾರಿ ವೆಚ್ಚಗಳ ಮೇಲೆ ನವ ಉದಾರವಾದವು ಒಂದು ಮಿತಿ ನಿಗದಿಪಡಿಸಿರುವ ಕಾರಣದಿಂದ ರಕ್ಷಣಾ ವಲಯದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗದು. ಖನಿಜಗಳಿಗೆ ಸಂಬಂಧಿಸಿ ಹೇಳುವುದಾದರೆ, ಅವುಗಳ ಅಂತಾರಾಷ್ಟ್ರೀಯ ಬೆಲೆಗಳು ಪತನಗೊಂಡಿವೆ (ತೈಲದ ಜೊತೆಯಲ್ಲಿ). ಜಾಗತಿಕ ಹಿಂಜರಿತದ ಪರಿಣಾಮವಾಗಿ ಇದೇ ಪರಿಸ್ಥಿತಿ ಇನ್ನೂ ಸ್ವಲ್ಪ ಸಮಯದ ವರೆಗೆ ಮುಂದುವರೆಯುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಖಾಸಗಿ ಉದ್ಯಮಿಗಳು ಹೂಡಿಕೆ ಮಾಡುವುದಿಲ್ಲ.

ಬಂಡವಾಳ ಹೂಡಿಕೆಗಾಗಿ ತೆರೆದುಕೊಡುವ ಈ ಎಲ್ಲ ಕ್ರಮಗಳನ್ನು ಜಾರಿ ಮಾಡುತ್ತಿರುವುದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವನ್ನು ತುಷ್ಟೀಕರಿಸುವ ಸಲುವಾಗಿಯೇ ಎಂಬದರಲ್ಲಿ ಅನುಮಾನವಿಲ್ಲ. ಬಿಜೆಪಿಯ ರಾಜ್ಯ ಸರ್ಕಾರಗಳು, ಮೋದಿಯವರೊಡನೆ ಸಮಾಲೋಚಿಸದೆ ವಲಸಿಗ ಕಾರ್ಮಿಕರ ಬಗ್ಗೆ ಸಂಪೂರ್ಣ ಸಂವೇದಾಶೂನ್ಯತೆಯನ್ನು ತೋರಿಸುತ್ತಿರಲಿಲ್ಲ. ಅವರೊಂದಿಗೆ ಸಮಾಲೋಚಿಸದೆ ಕಾರ್ಮಿಕ ಕಾನೂನುಗಳನ್ನು ಅಮಾನತುಗೊಳಿಸುತ್ತಿರಲಿಲ್ಲ. ಖಾಸಗಿ ಮತ್ತು ವಿದೇಶಿ ಬಂಡವಾಳಕ್ಕೆ ನಿರ್ಣಾಯಕ ವಲಯಗಳನ್ನು ತೆರೆದಿಡುವುದು ಸೇರಿದಂತೆ ಈ ಎಲ್ಲಕ್ರಮಗಳೂ ಒಂದೇ ಕಾರ್ಯಸೂಚಿಯ ಭಾಗವಾಗಿವೆ. ಈ ಕಾರ್ಯಸೂಚಿಯನ್ನು ರಕ್ಷಕ ಪ್ಯಾಕೇಜ್‌ನ ಹೆಸರಿನಲ್ಲಿ ಮುಂದೊತ್ತಲಾಗುತ್ತಿದೆ. ವಿಶ್ವ ಬಂಡವಾಳಶಾಹಿಯ ಬಿಕ್ಕಟ್ಟಿನ ನಡುವೆಯೇ ಮತ್ತು ಎಲ್ಲ ದೇಶಗಳನ್ನೂ ಕಾಡುತ್ತಿರುವ ಕರೋನಾ ಸಾಂಕ್ರಾಮಿಕ ಜಾಢ್ಯವು ಆ ಬಿಕ್ಕಟ್ಟನ್ನು ಬೃಹತ್ತಾಗಿ ತೀವ್ರಗೊಳಿಸಿರುವ ಸನ್ನಿವೇಶದಲ್ಲಿ, ಪ್ರಜಾಪ್ರಭುತ್ವವನ್ನು ಮತ್ತು ನಾಗರಿಕ ಹಕ್ಕುಗಳನ್ನು ನಿರಾಕರಿಸುವ ಮೂಲಕ, ಎಲ್ಲ ಭಿನ್ನಾಭಿಪ್ರಾಯಗಳನ್ನೂ ಹತ್ತಿಕ್ಕುವ ಮೂಲಕ, ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ದ್ವೇಷ ಹುಟ್ಟಿಸುವ ಮೂಲಕ ಈ ಕಾರ್ಯಸೂಚಿಯನ್ನು ಜಾರಿಗೊಳಿಸಲಾಗುತ್ತಿದೆ. ಮೋದಿ ಸರ್ಕಾರ ಈಗ ಮಾಡುತ್ತಿರುವುದು ಇದನ್ನೇ.



ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ

ವರ್ಗ ಐಕ್ಯತೆ ವರ್ಗ ಸಂಘರ್ಷದ ಮೂಲಕ ಸಾಮಾಜಿಕ ಪರಿವರ್ತನೆವರ್ಗ ಹೋರಾಟದಿಂದ...............

ಪುಟ 8 ರಿಂದ

ಯು) ಸಂಘಟನೆಗಳನ್ನು ಐಕ್ಯ ಸಂಘರ್ಷದ ವೇದಿಕೆಯ ಮೂಲಕ ಒಗ್ಗೂಡಿಸಿದ್ದಲ್ಲದೆ ಸಿಪಿಎಸ್‌ಟಿಯು, ಅಂದರೆ ಸಾರ್ವಜನಿಕ ವಲಯ ಉದ್ಯಮಗಳ ಕಾರ್ಮಿಕ ಸಂಘಗಳ ಸಮಿತಿಯ ಸ್ಥಾಪನೆಯಲ್ಲೂ ಸಿಐಟಿಯು ಮುಂಚೂಣಿಯ ಪಾತ್ರವಹಿಸಿತು.

- ನವ ಉದಾರೀಕರಣ ಸುಧಾರಣೆಗಳು ದೇಶದಲ್ಲಿ ಜಾರಿಯಾದಾಗಿನಿಂದ ಈ ನೀತಿಗಳ ವಿರುದ್ಧ ಸಿಐಟಿಯು ದೇಶದ ಇಡೀ ಕಾರ್ಮಿಕ ಚಳುವಳಿಯನ್ನು ಒಗ್ಗೂಡಿಸುವ ಯತ್ನಗಳನ್ನು ಮಾಡಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಮತ್ತು ಸ್ವತಂತ್ರ ಕೈಗಾರಿಕಾ ಒಕ್ಕೂಟಗಳನ್ನು ಸಂಯುಕ್ತ ವೇದಿಕೆಯ ಮೂಲಕ ಐಕ್ಯ ಹೋರಾಟಗಳನ್ನು ಬೆಳೆದು ಬರಲು ಸಿಐಟಿಯು ಸಾಕಷ್ಟು ಮತುವರ್ಜಿ ವಹಿಸಿದೆ. ಮತ್ತು ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿಯ ನೇತೃತ್ವದಲ್ಲಿ ನಡೆಸಲಾದ ಹಲವು ಹೋರಾಟಗಳಿಗೆ ನಾಯಕತ್ವ ವಹಿಸಿದೆ. 2009 ರಲ್ಲಿ ಪಪ್ರಥಮಬಾರಿ, ಐಎನ್‌ಟಿಯುಸಿ ಮತ್ತು ಬಿಎಂಎಸ್ ಸೇರಿದಂತೆ ಎಲ್ಲ ಕೇಂದ್ರ ಸಂಘಟನೆಗಳನ್ನು ಒಂದು ಸಾರ್ವತ್ರಿಕ ವೇದಿಕೆಯ ಮೇಲೆ ಸೇರಿಸಲಾಯಿತು. ಇದು ಎಲ್ಲಾ ಕೇಂದ್ರೀಯ ಟ್ರೇಡ್ ಯೂನಿಯನುಗಳ ಪ್ರಾಯೋಜಕ ಸಮಿತಿ (ಸ್ಪಾನ್ಸರಿಂಗ್ ಕಮಿಟಿ) ಸ್ಥಾಪನೆಗೆ ನಾಂದಿ ಹಾಡಿತು. ಇದರ ನಾಯಕತ್ವದಲ್ಲೇ ದೇಶಾದ್ಯಂತದ ಮೂರು ಸಾರ್ವತ್ರಿಕ ಮುಷ್ಕರವನ್ನು ಹೂಡಿತು, ಇದಲ್ಲದೆ ಫೆ. 2013 ರಲ್ಲಿ ಎರಡು ದಿನಗಳ ಸಾರ್ವತ್ರಿಕ ಮುಷ್ಕರವನ್ನು ಅಚರಿಸಲಾಯಿತು. ಇದರಲ್ಲೂ ಸಿಐಟಿಯು ಮಹತ್ವದ ಪಾತ್ರ ನಿರ್ವಹಿಸಿತು. ಆದರೆ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ, ಬಿಎಂಎಸ್ ಜಂಟಿ ಕಾರ್ಮಿಕ ಸಂಘಟನೆಗಳ ಚಳುವಳಿಗೆ ದ್ರೋಹ ಬಗೆದು, ಆಚೆ ನಡೆಯಿತು. ಜಂಟಿ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ 18 ದೇಶಾದ್ಯಂತದ ಮುಷ್ಕರಗಳನ್ನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ಇತ್ತೀಚಿನದೆಂದರೆ ಜನವರಿ 8 ಮತ್ತು 9, 2019ರಲ್ಲಿ ನಡೆದ ಐತಿಹಾಸಿಕ ಹೋರಾಟ, 20 ಕೋಟಿ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದು, ಸಾಮಾನ್ಯ ಜನರಿಂದಲೂ ಈ ಹೋರಾಟ ಅಪಾರ ಬೆಂಬಲ ಗಳಿಸಿತು.
- ಇದಲ್ಲದೆ, ಸಿಐಟಿಯು ಸಂಯೋಜಿತ ವಿವಿಧ ಒಕ್ಕೂಟಗಳು ತಮ್ಮ ತಮ್ಮ ವ್ಯಾಪ್ತಿಯ ಕಲ್ಲಿದ್ದಲು, ಸ್ಟೀಲ್, ಪ್ಲಾಂಟೇಶನ್‌ಗಳು, ಅಂಗನವಾಡಿ, ಆಶಾ, ಬಿಸಿಯೂಟದ ಕಾರ್ಮಿಕರು ಇತ್ಯಾದಿ ಕ್ಷೇತ್ರಗಳ ಕಾರ್ಮಿಕರನ್ನು ಸಂಘಟಿಸುತ್ತಾ ಪ್ರಬಲ ಜಂಟಿ ಹೋರಾಟಗಳನ್ನು ಕಟ್ಟುತ್ತಿದ್ದಾರೆ.
- ಸಿಐಟಿಯುವಿನಿಂದ ಈ ರೀತಿ ಸ್ವತಂತ್ರವಾಗಿ ಕೈಗೊಳ್ಳಲಾದ ಪ್ರಚಾರಗಳು ಮತ್ತು ಹೋರಾಟಗಳು ಜಂಟೀ ಪ್ರಚಾರ ಮತ್ತು ಜಂಟಿ ಹೋರಾಟಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿವೆ. ಹೀಗಿದ್ದರೂ, ಇತರ ಕಾರ್ಮಿಕ ಸಂಘಟನೆಗಳು ಸಿಐಟಿಯುವನ್ನು ಏಕಾಂಗಿಯಾಗಿ ಮಾಡಿ ಸರಕಾರಿ ನೀತಿಯನ್ನು ಬೆಂಬಲಿಸಿದಾಗ, ದುಡಿಯುವ ವರ್ಗದ ಹಿತಾಸಕ್ತಿಗಳ ಪರವಾಗಿ ಸಿಐಟಿಯು ಒಂಟಿಯಾಗೇ ಧ್ವನಿ ಎತ್ತಲು ಎಂದೂ ಹಿಂಜರಿದಿಲ್ಲ. ಇದಕ್ಕೆ ಉತ್ತಮ ನಿದರ್ಶನಗಳು ಎಂದರೆ 1971ರ ಕುಟುಂಬ ಪಿಂಚಣಿ ಯೋಜನೆ (ಎಫ್.ಪಿ.ಎಸ್) ಮತ್ತು 1995ರ ನೌಕರರ ಪಿಂಚಣಿ ಯೋಜನೆ (ಎನ್.ಪಿ.ಎಸ್) 1995– ಇವುಗಳ ವಿರುದ್ಧ ಸಿಐಟಿಯು ಹಮ್ಮಿಕೊಂಡ ಹೋರಾಟ.
- ಸಿಐಟಿಯುವಿನ ವಿವಿಧ ಒಕ್ಕೂಟಗಳು ಮತ್ತು ರಾಜ್ಯ ಸಮಿತಿಗಳು, ಬೃಹತ್ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದುಡಿಯುವ ವರ್ಗದ ದಿನ ನಿತ್ಯದ ಅನೇಕ ಜ್ವಲಂತ ಸಮಸ್ಯೆಗಳ ವಿರುದ್ಧ ವಿವಿಧ ಸ್ತರದಲ್ಲಿ ಸಾವಿರಾರು ಕಾರ್ಮಿಕರನ್ನು, ಸಿಐಟಿಯು ಸಂಘಟಿಸಿದೆ.
- ಕಾರ್ಮಿಕ ವರ್ಗದ ಐಕ್ಯತೆಯನ್ನು ಬೆಳೆಸುವುದರ ಜೊತೆಯಲ್ಲೇ, ನಮ್ಮ ಸಮಾಜದ ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಕೃಷಿ ಕಾರ್ಮಿಕರು, ರೈತರು ಇತ್ಯಾದಿಇತರ ಮೂಲಭೂತ ವರ್ಗಗಳನ್ನುಜಂಟಿ ಹೋರಾಟದ ಭಾಗವಾಗಿ ಸೇರಿಸಿಕೊಳ್ಳುವ ಅಗತ್ಯ ಮತ್ತು ಮಹತ್ವವನ್ನು ಸಿಐಟಿಯು ಅರಿತುಕೊಂಡಿತು. ಹೀಗೆ ಮಾಡುವುದರ ಮೂಲಕ ಜನವಿರೋಧಿ ನೀತಿಗಳ ವಿರುದ್ಧ ಹೋರಾಟಗಳನ್ನು ರೂಪಿಸುತ್ತಾ, ಅಂತಿಮ ಗುರಿಯಾದ ಶೋಷಣಾ ರಹಿತ ಸಮಾಜದತ್ತ ಅವರನ್ನೂ ಕೊಂಡೊಯ್ಯುವ ಕೆಲಸ ಬಹು ಮುಖ್ಯವಾದುದ್ದು ಎನ್ನುವುದನ್ನು ಸಿಐಟಿಯು ಅರಿತು ಕೊಂಡಿತು. ಇದರ ಸಾಧನೆಗಾಗಿ, ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ರೈತರುಗಳ ಸಾರ್ವತ್ರಿಕ ಬೇಡಿಕೆಗಳ ಈಡೇರಿಕೆಗಾಗಿ ಅನೇಕ ಜಂಟೀ ಪ್ರಸಾರಾಂದೋಲನ ಮತ್ತು ಅಣಿ ನೆರೆಸುವ ಕಾರ್ಯಕ್ರಮಗಳನ್ನುನಡೆಸುತ್ತಾ ಬಂದಿದೆ. 1982 ಜನವರಿ 19 ರಂದು ಸಾವನ್ನಪ್ಪಿದ ರೈತರು ಮತ್ತು ಕಾರ್ಮಿಕ ಹುತಾತ್ಮ ದಿನವನ್ನು ಆಚರಿಸುವುದು ಈ ಪ್ರಯತ್ನದ ಭಾಗವಾಗಿದೆ. ಆ ದಿನ ಸ್ವಾತಂತ್ರೋತ್ತರ ಇಂಡಿಯಾದ ಪ್ರಥಮ ರೈತ ಮತ್ತು ಕಾರ್ಮಿಕರ ಜಂಟಿ ಮುಷ್ಕರದ ದಿನವಾಗಿರುತ್ತದೆ. ಅಂದು ಕಾರ್ಮಿಕರು ಕೃಷಿ ಕಾರ್ಮಿಕರ ಮತ್ತು ರೈತರ ಬೇಡಿಕೆಗಳಿಗೆ ಧ್ವನಿಯಾಗಿ ನಿಂತರು. ಸೆಪ್ಟಂಬರ್ 5, 2018 ರಂದು, ನಡೆದ "ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿ" ರಾಜಧಾನಿ, ದೆಹಲಿಯಲ್ಲಿ ನಡೆದ ಆ ರೀತಿಯ ಮೊದಲ ರ್‍ಯಾಲಿಯಾಗಿತ್ತು. ಈ ರ್‍ಯಾಲಿಯಲ್ಲಿ ಲಕ್ಷಾಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ಇದು ಇಡೀ ದೇಶದ ಪ್ರಗತಿಪರರಿಗೆ ಮತ್ತು ದುಡಿಯುವ ಜನತೆಗೆ ಸ್ಫೂರ್ತಿದಾಯಕವಾಗಿತ್ತು.
- ದುಡಿಯುವ ಮಹಿಳೆಯರನ್ನು ಸಂಘಟಿಸುವುದಲ್ಲಿ ಸಿಐಟಿಯು ಪ್ರಪ್ರಥಮ ಸಂಘಟನೆಯಾಗಿದೆ. ಇದು ವರ್ಗಐಕ್ಯತೆ ಮತ್ತು ವರ್ಗ ಹೋರಾಟವನ್ನು ಬಲಪಡಿಸುವ ವರ್ಗ ಕರ್ತವ್ಯದಭಾಗ ಎಂಬ ಸ್ಪಷ್ಟ ಕಣ್ಣೋಟದ ಭಾಗವಾಗಿ ಈ ಕೆಲಸ ಕೈಗೆತ್ತಿಕೊಂಡಿದೆ. ಇದರ ಭಾಗವಾಗಿಯೇ 1979 ರಲ್ಲಿ ಪ್ರಥಮ ಬಾರಿ ದುಡಿಯುವ ಮಹಿಳೆಯರ ಅಖಿಲ ಭಾರತ ರಾಷ್ಟ್ರೀಯ ಸಮಾವೇಶವನ್ನು ಕಾರ್ಮಿಕ ಸಂಘಗಳ ಜಂಟಿ ಸಮಿತಿ ನೇತೃತ್ವದಲ್ಲಿ ಸಂಘಟಿಸಿ ಆ ವಿಭಾದ ಮಹಿಳೆಯರ ನಡುವೆ ಸಂಘಟನೆಯನ್ನು ಬಲಪಡಿಸುವ ಭಾಗವಾಗಿ ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಈ ರೀತಿಯ ದುಡಿಯುವ ಮಹಿಳೆಯರನ್ನು ಒಗ್ಗೂಡಿಸುವ ದಣಿವೇ ಇಲ್ಲದ ಕಾರ್ಯಕ್ರಮದ ಫಲವಾಗಿ ಸಿಐಟಿಯುವಿನ ಮಹಿಳಾ ಪ್ರಾತಿನಿಧ್ಯ ಶೆ. 33 ಕ್ಕೂ ಹೆಚ್ಚಿದೆ. (ದುಡಿಯುವ ಮಹಿಳೆಯರ ಅಖಿಲ ಇಂಡಿಯಾ ಸಮನ್ವಯ ಸಮಿತಿ ಸ್ಥಾಪನೆ ಆಗಿ, 2019ಕ್ಕೆ ಸರಿಯಾಗಿ 40 ವರ್ಷ ಆಗುತ್ತದೆ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.) ಸಿಐಟಿಯುವಿನ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಎಲ್ಲಾ ಸ್ತರಗಳ ನಿರ್ಣಯ ಕೈಗೊಳ್ಳುವ ಸಮಿತಿಗಳಲ್ಲೂ ಮಹಿಳೆಯರು ಇದ್ದಾರೆ, ಎಂಬುದನ್ನು ಹೆಮ್ಮೆಯಿಂದ ನಾವು ಇಲ್ಲಿ ಗುರ್ತಿಸಬಹುದಾಗಿದೆ.
- ನವ–ಉದಾರೀಕರಣ ನೀತಿಗಳಿಂದಾಗಿ ವಿಸ್ತೃತಗೊಂಡ ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸುವತ್ತ ಸಿಐಟಿಯು ಗಮನ ಹರಿಸಿದೆ. ಇದು ಶೋಷಿತ ವರ್ಗವನ್ನು ಒಗ್ಗೂಡಿಸುವ ಸಿಐಟಿಯುವಿನ ವರ್ಗ ಐಕ್ಯತೆಯ ಭಾಗವಾಗಿದೆ. ಅಸಂಘಟಿತ ವಲಯದ ಕಾರ್ಮಿಕರನ್ನು ಅವರ ವೃತ್ತಿ ಅನುಸಾರ ಸಂಘಟಿಸಿ ಮತ್ತು ಅವರುಗಳ ವಿಶಿಷ್ಟ ಬೇಡಿಕೆಗಳ ಅನುಸಾರ ಸಜ್ಜುಗೊಳಿಸಲಾಗಿದೆ. ಇಂದು ಸಿಐಟಿಯುನ ಶೇ. 70ರಷ್ಟು ಭಾಗ ಅಸಂಘಟಿತ ವಲಯದ ಸದಸ್ಯರಿಂದ ಕೂಡಿದೆ.
- "ನಾಯಕರನ್ನು ಹಿಂಬಾಲಿಸುವ ಕಾರ್ಯಕರ್ತರು" ರೀತಿಯ ಸಂಘಟನೆಯಾಗಿದ್ದರೆ, ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತಿ ಹೊಂದಿದ ಸಮಾಜವನ್ನು ನಿರ್ಮಿಸಬೇಕು ಎನ್ನುವ ತನ್ನ ಗುರಿ ಮುಟ್ಟಲು ಸಾಧ್ಯವಿಲ್ಲ ಎಂಬುದು ಸಿಐಟಿಯುವಿಗೆ ಚೆನ್ನಾಗಿ ಅರ್ಥವಾಗಿದೆ. ಹಿಂದೆ ಎಐಟಿಯುಸಿಯ ಭಾಗವಿದ್ದಾಗ ಪ್ರಜಾಸತ್ತಾ–ವಿರೋಧಿ ಕ್ರಮಗಳನ್ನು ಎದುರಿಸಿ ಅದು ಹೋರಾಟ ಮಾಡಿದೆ. ಆದ್ದರಿಂದ ಕಾರ್ಮಿಕ ಯೂನಿಯನ್ ಗಳಲ್ಲಿಆಂತರಿಕಪ್ರಜಾಸತ್ತೆಯ ಮಹತ್ವವನ್ನು ಸಿಐಟಿಯು ಒತ್ತಿ ಹೇಳುತ್ತಿದೆ. ಸಿಐಟಿಯು ನ ಸಂವಿಧಾನವೇ ಇದಕ್ಕೆ ಹೆಚ್ಚಿನ ಒತ್ತು ಕೊಟ್ಟಿದೆ.
- ತನ್ನ 50 ವರ್ಷಗಳ ಇತಿಹಾಸದಲ್ಲಿ ಸಂಘಟನೆಗೆ ಸಂಬಂಧಿಸಿದ ಎರಡು ದಸ್ತಾ ವೇಜುಗಳನ್ನು ಅಳವಡಿಸಿಕೊಂಡಿರುವುದು ಸಿಐಟಿಯುವಿನ ಮಹತ್ವದ ಮೈಲಿಗಲ್ಲುಗಳು. ಇವುಗಳಲ್ಲಿ ಮೊದಲನೆಯ ದಸ್ತಾವೇಜು 1993 ರಲ್ಲಿ ಅಂಗೀಕೃತಗೊಂಡ 'ಭುವನೇಶ್ವರ ಸಂಘಟನಾ ದಸ್ತಾವೇಜು' ಎಂದು ಕರೆಯಲ್ಪಡುತ್ತಿದೆ. ಇದು ಸಂಘಟನೆಯನ್ನು ಬಲಗೊಳಿಸುವಂಥ ಮೂಲಭೂತ ಮಾರ್ಗದರ್ಶಿಯಾಗಿ ಇಂದಿಗೂ ಪ್ರಸ್ತುತವಾಗಿದೆ. 2018 ರಲ್ಲಿ ಕೋಜಿಕೋಡ್(ಕೇರಳ) ನಲ್ಲಿ ಇದನ್ನು ಸಮಕಾಲೀನಗೊಳಿಸಲು ಪರಿಷ್ಕೃತಗೊಳಿಸಲಾಯಿತು.ತನ್ನ ಮೂಲಭೂತ ನಿಲುವನ್ನು ಉಳಿಸಿಕೊಳ್ಳುತ್ತಲೇ ಅದನ್ನು ಒತ್ತಿ ಹೇಳುತ್ತಾ, ಬದಲಾದ ಪರಿಸ್ಥಿತಿಯ ಬೇಡಿಕೆಗಳ ಅನುಸಾರ ಮಾರ್ಪಾಡು ಮಾಡಲಾದ ದಸ್ತಾವೇಜು ಇದಾಗಿದೆ. ಭುವನೇಶ್ವರ ದಸ್ತಾವೇಜು ಮತ್ತು ಕೋಜಿಕೋಡ್ ದಸ್ತಾವೇಜು ತೆರೆದ ಮನಸ್ಸಿನಿಂದ ಮುಕ್ತವಾಗಿ ವಿಮರ್ಶೆ ಮಾಡುತ್ತದೆ. ಮತ್ತು ಸ್ವವಿಮರ್ಶೆಗಳನ್ನ ಒಳಗೊಂಡಿವೆ. ತನ್ನ ತಪ್ಪುಗಳನ್ನು ಗುರ್ತಿಸಿ ಅವುಗಳನ್ನು ತಿದ್ದಿಕೊಳ್ಳುವುದರ ಮೂಲಕ ಸಂಘಟನೆಯನ್ನು ಬಲಗೊಳಿಸಿ ಕೊಳ್ಳುವ ಸಿಐಟಿಯುವಿನ ದೃಢ ಸಂಕಲ್ಪಕ್ಕೆ ಈ ಭುವನೇಶ್ವರ ಮತ್ತು ಕೋಜಿಕೋಡ್‌ನ ದಸ್ತಾವೇಜುಗಳು ಸಾಕ್ಷಿಯಾಗಿವೆ. ತನ್ನ ರಾಜಕೀಯ ಕಾರ್ಯಕ್ರಮವನ್ನು ತನ್ನ ಸಂಘಟನೆಯ ಕಾರ್ಯಾಚರಣೆಯಿಂದ ಪ್ರತ್ಯೇಕ ಮಾಡಬಾರದು ಎಂಬುದನ್ನು ಕುರಿತು ಸಿಐಟಿಯುಗೆ ಸ್ಪಷ್ಟವಾದ ಅರಿವಿದೆ.

ಇಂದು ನಾವು ನಮ್ಮ ಸಂಘಟನೆಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದೇವೆ ಈ ಸಂದರ್ಭದಲ್ಲಿ ನಮ್ಮ ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ನಾವು ವಹಿಸಿರುವ ಭವ್ಯ ಪಾತ್ರವನ್ನು ಹೆಮ್ಮೆಯಿಂದ ನೆನಪು ಪಾಡಿಕೊಳ್ಳುತ್ತಿದ್ದೇವೆ. ಸಾವಿರಾರು ಕಾರ್ಮಿಕರು ಮತ್ತು ಕಾರ್ಯಕರ್ತರ ತ್ಯಾಗ, ಬಲಿದಾನ ಮತ್ತು ಹೋರಾಟಗಳ ಪರಂಪರೆ ಮತ್ತು ಬಳುವಳಿ ನಮ್ಮ ಮುಂದೆ ಇದೆ. ಸ್ವಾತಂತ್ರ್ಯ ಬಂದ ದಿನದಿಂದ ಈ ಸಂಗಾತಿಗಳು ಎಲ್ಲ ಶೋಷಣೆಗಳಿಗೆ ಮುಕ್ತಾಯ ಮತ್ತು ಸಮಾಜದ ಪರಿವರ್ತನೆಗೆ ವರ್ಗ ಸಂಘರ್ಷವೇ ಮಾಧ್ಯಮ ಎಂದು ಆಳವಾಗಿ ನಂಬಿದ್ದರು. ಎಲ್ಲಾ ರೀತಿಯ ಶೋಷಣೆಗಳಿಗೆ ಪೂರಕವಾದ ಬಂಡವಾಳ ವ್ಯವಸ್ಥೆಗೆ ಪರ್ಯಾಯವೆಂದರೆ ಸಮಾಜವಾದ ಎಂದೂ ನಂಬಿದ್ದರು. ಈ ರೀತಿಯ ಶೋಷಣೆಗಳಿಂದ ಮುಕ್ತ ಸಮಾಜದ ಕಣ್ಣೋಟ ಹೊಂದಿದ್ದ ಆ ಪರಂಪರೆಯ ಕೊಡುಗೆಯನ್ನು ನಾವು ಇಂದು ನಮ್ಮ ಹೆಗಲ ಮೇಲೆ ಹೊತ್ತು ನಡೆದಿದ್ದೇವೆ. ಒಂದು ಶತಮಾನದ ಹಿಂದೆ ಮೊದಲ ಕಾರ್ಮಿಕ ಸಂಘಟನೆಯನ್ನು ಕಟ್ಟಿದ ನಮ್ಮ ಹಿರಿಯರೆಲ್ಲ ಈ ರೀತಿಯ ಶೋಷಣಾ ರಹಿತ ಸಮಾಜದ ಕನಸನ್ನು ಧ್ಯೇಯವಾಗಿ ಹೊಂದಿದ್ದರು.

ಸಿಐಟಿಯುವಿನ ಸ್ಥಾಪನೆಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನಾವೆಲ್ಲ ನಮ್ಮ ಕ್ರಾಂತಿಕಾರಿ ಗುರಿಯನ್ನು ಮುಟ್ಟಲು ನಮ್ಮನ್ನು ನಾವೇ ಪುನ: ಸಮರ್ಪಣೆ ಮಾಡಿಕೊಳ್ಳೋಣ. ಸಮಾಜ ಪರಿವರ್ತನೆಯ ಕಾರ್ಯದಲ್ಲಿ ತಮ್ಮ ಪಾತ್ರವನ್ನು ಕಾರ್ಮಿಕ ವರ್ಗ ಅರಿತುಕೊಳ್ಳುವಂತೆ ಮಾಡುವ ಸಾಧನೆಗೆ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಳ್ಳೋಣ.

ಇದುವರೆಗೆ ತಲುಪದಿರುವವರನ್ನು ತಲುಪೋಣ!
ನೀತಿಯ ಜೊತೆ ಸಮಸ್ಯೆಗಳ ನಂಟನ್ನು ಜೋಡಿಸೋಣ!
ನೀತಿಗಳ ಹಿಂದಿರುವ ರಾಜಕೀಯ ಹುನ್ನಾರಗಳನ್ನು ಬಹಿರಂಗ ಪಡಿಸೋಣ!
ಜಾಗೃತ, ಸಮರ್ಥ, ಬದ್ಧ ಕಾರ್ಯಕರ್ತರ ಪಡೆಯನ್ನು ಕಟ್ಟೋಣ!
ವ್ಯಾಪಕ ವರ್ಗ ಐಕ್ಯತೆ ಮೂಲಕ ವರ್ಗ ಹೋರಾಟಗಳನ್ನು ತೀವ್ರಗೊಳಿಸೋಣ!
ಸಿಐಟಿಯುವನ್ನು ಬಲಪಡಿಸಿ ಮುನ್ನಡೆಯೋಣ!

ಲಾಕ್ ಡೌನ್ ಮತ್ತು ರಿವರ್ಸ್ ವಲಸೆ.....

ಪುಟ 6 ರಿಂದ

ಮತ್ತಷ್ಟು ಬಿಗಡಾಯಿಸಲಿದೆ. ಸರಕಾರ ಕೃಷಿ ವಲಯಕ್ಕೆ ವಿಶೇಷ ಆದ್ಯತೆ ಕೊಡಬೇಕಾಗಿದೆ. ಸ್ವಾಮಿನಾಥನ್ ಸಮಿತಿ ನೀಡಿದ ವರದಿಯ ಶಿಫಾರಸ್ಸುಗಳನ್ನು ಮೊದಲು ಜಾರಿಗೊಳಿಸಬೇಕಾಗಿದೆ. ಮುಖ್ಯವಾಗಿ ರಿವರ್ಸ್ ವಲಸೆ ಬಂದ ಕಾರ್ಮಿಕರಿಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತಹ ಪ್ರೋತ್ಸಾಹ ದೊರಕಬೇಕು. ಇಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರ ತುಂಬಾ ಮಹತ್ವದಾಗಿರುತ್ತದೆ. ಅಂಬೇಡ್ಕರ್ ಕನಸಿದ 'ಸಹಕಾರಿ ಕೃಷಿ ಅಂದೋಲನ'ವನ್ನು ಪ್ರಾರಂಭಿಸಲು ಇದು ಸೂಕ್ತ ಕಾಲ.

ಎರಡನೆಯದಾಗಿ ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸಲು ಪರ್ಯಾಯ ಉದ್ಯೋಗಗಳನ್ನು ಸೃಷ್ಟಿಸಬೇಕಾಗಿದೆ. ರಿವರ್ಸ್ ವಲಸೆಯಿಂದ ಗ್ರಾಮೀಣ ಭಾಗಗಳಲ್ಲಿ ದುಡಿಯುವ ಶಕ್ತಿ ಹೆಚ್ಚಳವಾಗಿದೆ. ಗೃಹ ಕೈಗಾರಿಕೆಗಳ, ಅತಿ ಸಣ್ಣ, ಸಣ್ಣ ಉದ್ಯಮಗಳ ಸ್ಥಾಪನೆಗೆ ಅವಶ್ಯಕವಾದ ನೀತಿ ನಿಯಮಾವಳಿಗಳನ್ನು ಮತ್ತು ಆರ್ಥಿಕ ಸಹಾಯವನ್ನು ಒದಗಿಸಿದರೆ ಸ್ವಾವಲಂಬನೆಯ ಹೊಸ ಪರ್ವ ಶುರುವಾಗುತ್ತದೆ ಮತ್ತು ವಿಕೇಂದ್ರೀಕರಣಗೊಂಡ ವ್ಯವಸ್ಥೆಗೆ ಮತ್ತು ಚಿಕ್ಕದಾದ ಆದರೆ ಶಿಸ್ತುಬದ್ಧವಾದ 'ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು' ಎಂಬ ಆಶಯದ ಉದ್ಯಮನೀತಿಯನ್ನು ಅನುಷ್ಠಾನ ಮಾಡುವುದು ಕಷ್ಟವಾಗುವುದಿಲ್ಲ. ಇಲ್ಲಿ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಸಹ ಮುಖ್ಯ. ಇದರಿಂದ ಉದ್ಯೋಗದಲ್ಲಿನ ಅಭದ್ರತೆಯನ್ನು ಕೊನೆಗಾಣಿಬಹುದು. ಇದು ಭದ್ರತೆ ಹಾಗೂ ಸಂಘಟಿತ ಉದ್ಯೋಗ ಸೃಷ್ಠಿಗೆ ದಾರಿಯಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಜಾಗತೀಕರಣದ ದುಸ್ವಪ್ನದಿಂದ ಹೊರಬರಲು ಇದು ಸಹಾಯಕವಾಗುತ್ತದೆ. ಇದನ್ನು ಕಾರ್ಯರೂಪಗೊಳಿಸಲು ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಉದ್ಯೋಗ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಇದು ಮರಳಿ ಉದ್ಯೋಗವನ್ನು ಸೃಷ್ಟಿಸುತ್ತದೆ.

ಕಡೆಗೂ ಸರಕಾರದ ಮುಂದಿನ ನಿರ್ಧಾರಗಳು ನಿರ್ಣಾಯಕವಾಗಲಿವೆ. ಸಣ್ಣ ಮಟ್ಟದ ತಪ್ಪು ನಿರ್ಧಾರಗಳೂ ಸಹ ಶೇಕಡಾ 70% ಪ್ರಮಾಣದ ಜನಸಂಖ್ಯೆಯ ಬದುಕನ್ನು ನಾಶಗೊಳಿಸುತ್ತದೆ.

ಜೂನ್ 1: ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ

ವಿದ್ಯುಚ್ಛಕ್ತಿ ನೌಕರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ವೇದಿಕೆಯ ಕರೆ

ಇಡೀ ದೇಶ ಕೊವಿಡ್–19 ಮಹಾಮಾರಿಯೆಂಬ ಪಿಡುಗಿನ ವಿರುದ್ಧ ಸಮರದಲ್ಲಿರುವಾಗ ಭಾರತ ಸರಕಾರದ ಇಂಧನ ಇಲಾಖೆ ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ, 2020ರ ಅಧಿಸೂಚನೆಯನ್ನು ಪ್ರಕಟಿಸಿದೆ. ಈ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಪಡೆಯಲು ಮೂರು ವಾರಗಳ ಅವಕಾಶ ಕೊಡಲಾಗಿದೆ. ಇದರ ಮುಖ್ಯ ಉದ್ದೇಶ ದೇಶದಲ್ಲಿ ವಿದ್ಯುತ್ ಉತ್ಪಾದನೆಯಿಂದ ಹಿಡಿದು ಅದನ್ನು 25 ಕೋಟಿ ಕುಟುಂಬಗಳ ಮನೆಬಾಗಿಲುಗಳಿಗೆ ಮತ್ತು ಗದ್ದೆಗಳು ಹಾಗೂ ಕೈಗಾರಿಕೆಗಳಿಗೆ ತಲುಪಿಸಲು ಕಳೆದ ಏಳು ದಶಕಗಳಿಂದ ಸಾರ್ವಜನಿಕ ವೆಚ್ಚದಲ್ಲಿ ಕಟ್ಟಿ ಬೆಳೆಸಿರುವ ಒಟ್ಟು ವಿದ್ಯುತ್ ಜಾಲದಲ್ಲಿನ ವಿದ್ಯುತ್ ಆಸ್ತಿಗಳನ್ನೆಲ್ಲವನ್ನೂ ಖಾಸಗೀ ಕೈಗಳಿಗೆ, ಅದರಲ್ಲೂ ಈ ಸರಕಾರದ ಆಪ್ತ ಬಂಟರುಗಳಿಗೆ ವರ್ಗಾಯಿಸುವುದೇ ಆಗಿದೆ ಎಂದು ವಿದ್ಯುಚ್ಛಕ್ತಿ ನೌಕರರು ಹಾಗೂ ಇಂಜಿನಿಯರುಗಳ ಏಳು ಸಂಘಗಳು ಮತ್ತು ಒಕ್ಕೂಟಗಳ ಐಕ್ಯ ರಾಷ್ಟ್ರೀಯ ವೇದಿಕೆ ಹೇಳಿದೆ.

ಇದು, ವಿದ್ಯುತ್ ಎಂಬುದು ಸಾಮಾಜಿಕ–ಆರ್ಥಿಕ ಮಹತ್ವದ ಒಂದು ಸೇವೆ ಎಂಬ ಅದರ ಮೂಲ ಸ್ವರೂಪವನ್ನು ಬದಲಿಸಿ ಅದನ್ನೊಂದು ಮಾರುಕಟ್ಟೆ–ಪ್ರೇರಿತ ಲಾಭದ ಸರಕನ್ನಾಗಿ ಮಾಡುವ ಉದ್ದೇಶದ ಮಸೂದೆಯಾದ್ದರಿಂದ ಅದರ ವಿರುದ್ಧ ಜೂನ್ 1ರಂದು ರಾಷ್ಟ್ರೀಯ ಪ್ರತಿಭಟನಾ ದಿಚಾರಣೆ ನಡೆಸಲು 'ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ಸಮನ್ವಯ ಸಮಿತಿ'(ಎನ್.ಸಿ.ಸಿ.ಓ.ಇ.ಇ.ಇ.) ನಿರ್ಧರಿಸಿದೆ.

ಇಪ್ಪತ್ತು ವರ್ಷಗಳ ಹಿಂದೆ ಸ್ಪರ್ಧೆ, ದಕ್ಷತೆ, ಅಗ್ಗದಲ್ಲಿ ವಿದ್ಯುತ್ ಪೂರೈಕೆ ಮುಂತಾದ ಬಣ್ಣದ ಮಾತುಗಳೊಂದಿಗೆ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಪ್ರತ್ಯೇಕಿಸುವ ವಿದ್ಯುಚ್ಛಕ್ತಿ ಮಸೂದೆಯ ಕರಡನ್ನು ರೂಪಿಸಲಾಯಿತು. 2013ರಿಂದ ಇದು ಕಾಯ್ದೆಯಾಗಿ ಕಳೆದ 15 ವರ್ಷದಿಂದ ಜಾರಿಯಲ್ಲಿದೆ. ಆದರೆ ಈ ಬಣ್ಣದ ಮಾತುಗಳೆಲ್ಲ ಈಗ ಬಣ್ಣ ಕಳೆದುಕೊಂಡಿವೆ.

ದಿಲ್ಲಿಯು ಖಾಸಗೀಕರಣಗೊಂಡ ವಿದ್ಯುತ್ ಪೂರೈಕೆ 12 ವರ್ಷಗಳಲ್ಲಿ 7 ಬಾರಿ ದರ ಏರಿಕೆ ಕಂಡಿದೆ. ಒಡಿಶಾದಲ್ಲಿ ಅಂಬಾನಿಯ ರಿಲಯಂಸ್ ಕಂಪನಿಯ ವಿದ್ಯುತ್ ವಿತರಣಾ ಕಂಪನಿಗೆ ರಾಜ್ಯದ ಬಹಳ ಲಾಭ ಸಿಗುವ ಭಾಗದಲ್ಲೂ ಏನೂ ಮಾಡಲಾಗಲಿಲ್ಲ. ಈಗ ಅದರ ಲೈಸೆನ್ಸ್ ರದ್ದು ಮಾಡಿರುವುದನ್ನು ಸುಪ್ರಿಂ ಕೋರ್ಟ್ ಕೂಡ ಎತ್ತಿ ಹಿಡಿದಿದೆ. ಮುಂಬೈಯಲ್ಲಂತೂ ಟಾಟಾ ಮತ್ತು ಹಿಂದೆ ಅಂಬಾನಿ, ಈಗ ಅದಾಣಿ ಕಂಪನಿಗಳು ದರಗಳನ್ನು ದೇಶದಲ್ಲೇ ಅತ್ಯುನ್ನತ ಮಟ್ಟಕ್ಕೆ ಏರಿಸಿಟ್ಟಿವೆ. ವಿದ್ಯುತ್ ವಿತರಣೆಯ ಖಾಸಗಿ ಕಂಪನಿಗಳು ರಾಷ್ಟ್ರೀಕೃತ ಬ್ಯಾಂಕುಗಳ ಸುಸ್ತಿ ಸಾಲಗಳಲ್ಲಿ ಗಮನಾರ್ಹ ಪಾಲು ಹೊಂದಿವೆ ಎಂಬುದನ್ನು ಜನಗಳ ಗಮನಕ್ಕೆ ತಂದಿರುವ ಎನ್.ಸಿಸಿ.ಓ.ಇ.ಇ..ಇ ಗಯಾ. ಕಾನ್ಪುರ, ಗ್ವಾಲಿಯರ್, ಉಜ್ಜೈನ್, ರಾಂಚಿ. ಜಮಷೇದ್‌ಪುರ್, ಜಲಗಾಂವ್, ಔರಂಗಾಬಾದ್ ಮುಂತಾದೆಡೆಗಳಲ್ಲಿ ಖಾಸಗೀ ವಿತರಣೆ ಫ್ರಾಂಚೈಸಿಗಳ ಅನುಭವ ಅತ್ಯಂತ ಕೆಟ್ಟದಾಗಿದ್ದರೂ ಹೊಸ ಮಸೂದೆ ವಿದ್ಯುತ್ ವಿತರಣೆಯನ್ನು ಮೂರು ಹಂತಗಳ ವ್ಯವಸ್ಥೆಯಾಗಿ ಮಾಡಿ, ಅತ್ಯಂತ ಹೊರಗಿನ ವ್ಯವಸ್ಥೆಯಾಗಿರುವ ಫ್ರಾಂಚೈಸಿಗಳು ಲೈಸೆನ್ಸ್ ಪಡೆಯುವ ಅಗತ್ಯವಿಲ್ಲದಂತೆ ಮಾಡುವ ಅತ್ಯಂತ ಅಪಾಯಕಾರೀ ಕೆಲಸ ಕ್ಕೆ ಕೈ ಹಾಕಿದೆ ಎಂದು ಹೇಳಿದೆ.

ಮಸೂದೆಯ ಇನ್ನೊಂದು ಕರಾಳ ಅಂಶವೆಂದರೆ, ಈಗ ಸಮವರ್ತಿ ಪಟ್ಟಿಯಲ್ಲಿರುವ ವಿದ್ಯುಚ್ಛಕ್ತಿಯನ್ನು ಸುಮಾರಾಗಿ ಕೇಂದ್ರ ಪಟ್ಟಿಗೆ ಸೇರಿಸುವ ಪ್ರಯತ್ನವನ್ನು ಇದು ಮಾಡುತ್ತಿದೆ. ಇದರೊಂದಿಗೆ ರೈತರು ಮುಂತಾದ ವಿಭಾಗಗಳಿಗೆ ಇದ್ದ ಸಬ್ಸಿಡಿಗಳ ಬದಲಿಗೆ ನೇರ ನಗದು ವರ್ಗಾವಣೆಯ ವ್ಯವಸ್ಥೆಯನ್ನು ತರಬೇಕೆಂದಿದೆ. ಅಂದರೆ ಈ ವಿಭಾಗಗಳ ಗ್ರಾಹಕರಿಂದ ಕೇಂದ್ರ ಸರಕಾರ ಪೂರ್ಣ ಮೊತ್ತವನ್ನು ವಸೂಲಿ ಮಾಡುತ್ತದೆ, ಮತ್ತು ಸಬ್ಸಿಡಿ ಅಂಶವನ್ನು ರಾಜ್ಯ ಸರಕಾರಗಳು ಗ್ರಾಹಕರಿಗೆ ನೇರ ನಗದು ವರ್ಗಾವಣೆಯ ಮೂಲಕ ಕೊಡಬೇಕು!

ಕೇರಳ ಮಾತ್ರವಲ್ಲ, ಪುದುಚೇರಿ ಮತ್ತು ಝಾರ್ಖಂಡ್ ಮಾತ್ರವಲ್ಲದ 'ಬಿಜೆಪಿಯು ಬಗ್ಗೆ ವಿರೋಧವೇನೂ ಇರದ ಬಿಹಾರ, ಝಾರ್ಖಂಡ್, ತೆಲಂಗಾಣ, ತಮಿಳುನಾಡು ರಾಜ್ಯಗಳೂ ಈ ಮಸೂದೆಯನ್ನು ರದ್ದು ಮಾಡಬೇಕು ಎಂದು ಕೋರಿವೆ. ವಿದ್ಯುಚ್ಛಕ್ತಿ ನೌಕರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ವೇದಿಕೆ ಕೂಡ ಮಸೂದೆಯ ಪ್ರತಿಯೊಂದು ಅನುಚ್ಛೇದದ ವಿರುದ್ಧ ಸೂಕ್ತ ವೇಧಿಕೆಯಲ್ಲಿ ತನ್ನ ಅಭಿಪ್ರಾಯಗಳನ್ನು ಮುಂದಿಡುತ್ತದೆ ಎಂದಿರುವ ಎನ್.ಸಿಸಿ.ಓ.ಇ.ಇ.ಇ., ನಮ್ಮ ದೇಶದ ಬಡಜನಗಳಿಗೆ, ಅನ್ನದಾತ ರೈತರಿಗೆ ವಿದ್ಯುಚ್ಛಕ್ತಿಯನ್ನು ಕೈಗೆಟಕುವ ಬೆಲೆಗಳಲ್ಲಿ ಪಡೆಯುವ ಹಕ್ಕಿಗಾಗಿ ಹೋರಾಟ ಜೂನ್ 1ರ ರಾಷ್ಟ್ರೀಯ ಬೇಡಿಕೆ ದಿನಾಚರಣೆಯೊಂದಿಗೆ ಆರಂಭವಾಗುತ್ತದೆ, ಇದಕ್ಕೆ ಸಾರ್ವಜನಿಕರು ತಮ್ಮ ಬೆಂಬಲ ನೀಡಬೇಕು ಎಂದಿದೆ.

ಪುಟ 11 ರಿಂದ

ವಾರಲೀ ಬಂಡಾಯದ ವೀರಗಾಥೆ

ಗಂಟೆಗಳ ಕಾಲ, ಗುಂಡಿನ ಮಳೆಯನ್ನು ಅವರು ಧಿಕ್ಕರಿಸಿದರು; 15 ಗಂಟೆಗಳ ಕಾಲ ಅವರು ಅವರೇ ಹಾರಿಸಿದ್ದ ಕೆಂಬಾವುಟವನ್ನು ತಮ್ಮ ದೇಹಗಳನ್ನೇ ಒಡ್ಡಿ ರಕ್ಷಿಸಿದರು. ಆ ಸ್ಥಳದ ಹತ್ತಿರ ಬರುತ್ತಿದ್ದಂತೆ ಪೋಲಿಸರು ಗುಂಡು ಹಾರಿಸಿದಾಗ ಅವರು ಬಾವುಟದ ಸುತ್ತ ನಿಂತು ಕೆಂಬಾವುಟವನ್ನು ರಕ್ಷಿಸುತ್ತಿದ್ದರು. ಪೋಲಿಸರು ತಮ್ಮ ಕೆಂಬಾವುಟವನ್ನು ಗುರಿಯಾಗಿಸಿ ಗುಂಡು ಹಾರಿಸುತ್ತಿದ್ದಾರೆಂದು ಭಾವಿಸಿದ ಅವರು ಜೀವ ತೆತ್ತಾದರೂ ಬಾವುಟವನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು ತಿಳಿದರು. ಪೋಲಿಸರ ಗುಂಡಿನ ಸುರಿಮಳೆಯು ಅವರನ್ನು ಅಲ್ಲಿಂದ ಕದಲಿಸಲಾಗಲಿಲ್ಲ. ಕಿಸಾನ್ ಸಭಾ ಕಾರ್ಯಕರ್ತರೊಬ್ಬರು ಬಂದು ಅದು ಭೂಮಾಲಕರ ಪಿತೂರಿ ಎಂದು ಹೇಳಿದ ಮೇಲೆಯೇ ಅವರು ಅಲ್ಲಿಂದ ದೂರ ಸರಿದರು. ಭೂಮಾಲಕರ ವಂಚನೆಯಿಂದ ತಾವು ಮೋಸ ಹೋದೆವು ಎನ್ನುವ ಅರಿವಾದಾಗ ಅವರು ಭೂಮಾಲಕರು ಮತ್ತು ಸರ್ಕಾರದ ಮೇಲೆ ಅಸಮಾಧಾನದ ಕಹಿಯನ್ನು ಹೊತ್ತು ತಮ್ಮ ಮನೆಗಳಿಗೆ ಹಿಂತಿರುಗಿದರು.

ವಾರಲೀ ಚಳುವಳಿಯ ಮಹತ್ವ ಗೋಚರವಾದ ಕೂಡಲೇ, ಸಾಮ್ರಾಜ್ಯಶಾಹೀ ಅಧಿಕಾರಿಗಳ ಧೋರಣೆಯು ತಟಸ್ಥ ನೀತಿಯ ಬದಲು ನಿರ್ದಯ ದಬ್ಬಾಳಿಕೆಗೆ ತಿರುಗಿತು. ಪ್ರಾಂತೀಯ ಕಾಂಗ್ರೆಸ್ ಸರ್ಕಾರ ಕೂಡ ಆದಿವಾಸಿ ರೈತರ ನಡುವೆ ಕಮ್ಯುನಿಸ್ಟ್ ಪ್ರಭಾವ ಬೆಳೆಯುತ್ತಿರುವುದನ್ನು ಕಂಡು ಹೆದರಿತು. ಅದು ಭೂಮಾಲಕರ ಜತೆ ಸೇರಿಕೊಂಡು ಚಳುವಳಿಯನ್ನು ಬಗ್ಗುಬಡಿಯಲು ಭೀಕರ ದಾಳಿಯನ್ನು ಶುರುಮಾಡಿತು. ಆ ಪ್ರದೇಶಗಳಲ್ಲಿ ಸಭೆ, ಮೆರವಣಿಗೆ ಮತ್ತು ಐದಕ್ಕಿಂತ ಹೆಚ್ಚು ಜನಸೇರುವುದನ್ನು ನಿಷೇಧಿಸಲಾಯಿತು. ಆಡಳಿತವು ಎಲ್ಲಾ ಕಮ್ಯುನಿಸ್ಟರನ್ನು ಅಲ್ಲಿಂದ ಗಡೀಪಾರು ಮಾಡಿತು. ಅಲ್ಲಿಯ ಪೋಲಿಸರು ಅನುಸರಿಸಿದ ಒರಟು, ಭಯಾನಕ ಹಾಗೂ ಹಿಂದೆ ಯಾರೂ ಬಳಸಿರದ ವಿಧಾನಗಳು ಜರ್ಮನಿಯ ನಾಜಿಗಳ ವಿಧಾನವನ್ನೂ ನಾಚಿಸುವಂತಿದ್ದವು. ಇವಾವುದಕ್ಕೂ ಸೊಪ್ಪುಹಾಕದ ವಾರಲೀಗಳು ಮುಂದೆ ಸಾಗಿದರು.

ರೈತರು ಒಂದು ವರ್ಷದ ಗೇಣಿಯನ್ನು ಮಾತ್ರ, ಯಾವುದೇ ಬಾಕಿ ನೀಡದೇ, ಸಂದಾಯ ಮಾಡುತ್ತಾರೆ ಮತ್ತು ಅವರ ಕೂಲಿಯನ್ನು ಹೆಚ್ಚಿಸಬೇಕು ಎಂದು 1946ರ ಆರಂಭದಲ್ಲಿ ಕಿಸಾನ್ ಸಭಾ ಸಮ್ಮೇಳನವು ತೀರ್ಮಾನ ಮಾಡಿತು. 1946ರ ಶರತ್ಕಾಲದಲ್ಲಿ ಹುಲ್ಲು ಕೊಯ್ಯುವ ಸಮಯದಲ್ಲಿ ವಾರಲೀ ಚಳುವಳಿಯು ಪರಾಕಾಷ್ಠೆ ತಲುಪಿತು. ಹುಲ್ಲುಗಾವಲನ್ನು ಹೊಂದಿದ ಭೂಮಾಲಕರಲ್ಲದೇ ಅರಣ್ಯ ಗುತ್ತಿಗೆದಾರರೂ ಆದಿವಾಸಿ ರೈತರನ್ನು ದಿನಗೂಲಿಯ ಮೇಲೆ ನೇಮಿಸಿಕೊಂಡಿದ್ದರು. ಅವರು ಈ ಬೇಡಿಕೆಗಳನ್ನು ಒಪ್ಪಲು ನಿರಾಕರಿಸಿದರು. ಕಿಸಾನ್ ಸಭಾ ಮುಷ್ಕರಕ್ಕೆ ಕರೆ ನೀಡಿತು.

ಆದಿವಾಸಿ ರೈತರು ಈಚಲು ಎಲೆಗಳನ್ನು ಕಟ್ಟಿದ ಒಂದು ಕಡ್ಡಿಯ ಮೂಲಕ ಹಳ್ಳಿಯಿಂದ ಹಳ್ಳಿಗೆ ಕಳಿಸುವ ಸಂದೇಶವನ್ನು ಮುಟ್ಟಿಸಿದರು. ಹಳ್ಳಿಗೆ ಆ ಕಡ್ಡಿ ಬಂದ ಕೂಡಲೇ ರೈತರು ಕೆಲಸ ನಿಲ್ಲಿಸುತ್ತಿದ್ದರು. ಎತ್ತಿನ ಗಾಡಿಗಳಲ್ಲಿ ಸಾಗಿಸುತ್ತಿದ್ದ ಆದಿವಾಸಿ ರೈತರೂ ಕೂಡ ಕೆಲಸ ನಿಲ್ಲಿಸಿದರು. ಮಹಾರಾಷ್ಟ್ರದಲ್ಲೇ ಮೊಟ್ಟ ಮೊದಲ ಬಾರಿಗೆ ಆದಿವಾಸಿ ಶ್ರಮಿಕರ ಮುಷ್ಕರವು 200 ಹಳ್ಳಿಗಳನ್ನು ಆವರಿಸಿತು.

ಒಂದು ತಿಂಗಳ ಕಾಲ ಮುಂದುವರಿದ ಮುಷ್ಕರವು ಶಕ್ತಿಗುಂದುವ ಯಾವ ಸೂಚನೆಯನ್ನೂ ತೋರಲಿಲ್ಲ. ತೀವ್ರ ನಷ್ಟವನ್ನು ಎದುರಿಸಿ ಒಪ್ಪಂದಕ್ಕಾಗಿ ಕಾಯುತ್ತಿದ್ದ ನಾಟಾ ವರ್ತಕರು ಮತ್ತು ಭೂಮಾಲಕರು ಬೇಡಿಕೆಗಳನ್ನು ಒಪ್ಪಿದರು. ನವಂಬರ್ 10, 1946ರಂದು ಮುಷ್ಕರ ಕೊನೆಗೊಂಡಿತು. ವಾರಲೀಗಳಿಗೆ ಅದೊಂದು ದೊಡ್ಡ ಗೆಲುವಾಗಿತ್ತು. ಭೂಮಾಲಕರ, ನಾಟಾ ವರ್ತಕರ ದಾಳಿ ದಬ್ಬಾಳಿಕೆಗಳನ್ನು ಮತ್ತು ಪ್ರಾಂತೀಯ ಕಾಂಗ್ರೆಸ್ ಸರ್ಕಾರದ ದಮನಕಾರಿ ಧೋರಣೆಯನ್ನು ಯಶಸ್ವಿಯಾಗಿ ಎದುರಿಸಿದರು. ವಾರಲೀಗಳು ಶಕ್ತಿವಂತರಾದರು, ಐಕ್ಯತೆ ಸಾಧಿಸಿದರು ಮತ್ತು ತಮ್ಮ ನಿಜವಾದ ಮಿತ್ರರಾರು ಶತೃಗಳಾರು ಎಂಬ ಹೆಚ್ಚು ಉತ್ತಮ ತಿಳುವಳಿಕೆಯನ್ನು ಪಡೆದರು. ತಮ್ಮ ಸಂಘಟನೆಯೇ ತಮ್ಮ ನೈಜ ಶಕ್ತಿ ಎಂಬ ಅರಿವನ್ನು ಪಡೆದರು.

ಹೋರಾಟಗಳ ಅನುಭವ ವಾರಲೀಗಳನ್ನು ಬಹುಬೇಗ ಮಾರ್ಪಾಟು ಮಾಡಿತು. ಅವರ ಪರಿವರ್ತನೆ ಎಷ್ಟು ಮೂಲಭೂತವಾಗಿತ್ತೆಂದರೆ ಅವರು ಹೊಸ ಮನುಷ್ಯರಾದರು. ಅವರಲ್ಲಿ ಜ್ಞಾನದ ಹಸಿವು ಬೆಳೆಯಿತು. ಸಮಾಜವಾದ ಮತ್ತು ಸೋವಿಯತ್ ಯೂನಿಯನ್‌ನ ಎಲ್ಲಾ ಮಾಹಿತಿಗಳನ್ನು ತಿಳಿಯಲು ಹಾತೊರೆದರು. ಭೂಮಾಲಕರ ಅಪಪ್ರಚಾರ ಅವರಲ್ಲಿ ಈ ಹಂಬಲವನ್ನು ಹುಟ್ಟುಹಾಕಿತು. ಅವರ ಆರ್ಥಿಕ ಹಕ್ಕುಗಳ ಬಗ್ಗೆ ಪ್ರಜ್ಞೆಯನ್ನು ಉಂಟುಮಾಡಿದ್ದಲ್ಲದೇ ಅವರ ನಾಗರಿಕ ಹಾಗೂ ರಾಜಕೀಯ ಹಕ್ಕುಗಳ ಮೌಲ್ಯಗಳ ಬಗ್ಗೆ ಕೂಡ ಹೋರಾಟವು ಅವರಲ್ಲಿ ಅರಿವು ಮೂಡಿಸಿತು.

ಉಡುಪಿ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕೋವಿಡ್ 19 ಪರಿಹಾರ ಮಳೆಗಾಲದ 3 ತಿಂಗಳಿಗೆ ಪ್ರತಿ ವಾರಕ್ಕೆ ರೂ.2000/–ದಂತೆ ಮಾಸಿಕ 8000/ ರೂಪಾಯಿಗಳಂತೆ ಹೆಚ್ಚಿಸಲು ಆಗ್ರಹಿಸಿ ಮತ್ತು ಈಗಿರುವ ಪರಿಹಾರ ಹಣ ಬಾಕಿ ಇರುವ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಶೀಘ್ರ ಜಮೆ ಮಾಡಲೂ ಸೇರಿದಂತೆ ಮುಂತಾದ ಬೇಡಿಕೆಗಳಿಗಾಗಿ ಒತ್ತಾಯಿಸಿ ಇಂದು ಕಟ್ಟಡ ಕಾರ್ಮಿಕರ ರಾಜ್ಯವ್ಯಾಪಿ ಪ್ರತಿಭಟನೆಯ ಅಂಗವಾಗಿ ಉಡುಪಿ ಜಿಲ್ಲಾ ಕೇಂದ್ರದ ಜಿಲ್ಲಾಧಿಕಾರಿ ಕಛೇರಿ ಎದುರು ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘವು ಸಾಂಕೇತಿಕ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಕಾರ್ಮಿಕ ಸಚಿವರಾದ ಶಿವರಾಮ ಹೆಬ್ಬಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸರಕಾರವು ಕಲ್ಯಾಣ ಮಂಡಳಿಯ ಸಾವಿರಾರು ಕೋಟಿ ಹಣವನ್ನು ಬಿಜೆಪಿಯ ಶಾಸಕರಿಗೆ ತಮ್ಮ ಕ್ಷೇತ್ರದ ಮತದಾರರಿಗೆ ಆಹಾರ ಕಿಟ್ ಗಳನ್ನು ಹಂಚಿ ಅದರಲ್ಲಿಯೂ ದುರಪಯೋಗಪಡಿಸಿಕೊಳ್ಳುತ್ತಿರುವುದನ್ನು ಸರಕಾರ ನಿಲ್ಲಿಸಬೇಕು. ಕರೋನ ಸಂಕಷ್ಟದ ಪರಿಸ್ಥಿತಿಯಲ್ಲಿ ಕಟ್ಟಡ ಕಾರ್ಮಿಕರು ಸಲ್ಲಿಸಿದ ಮಕ್ಕಳ ಶೈಕ್ಷಣಿಕ, ಮದುವೆ ಧನಸಹಾಯ ಹಾಗು ವಯೋವೃದ್ಧರ ಪಿಂಚಣಿ ಬಾಕಿ ಇರಿಸಿಕೊಂಡಿರುವುದು ಖಂಡನೀಯವಾಗಿದೆ. ಕೆಲವು ಕಟ್ಟಡ ಕಾರ್ಮಿಕರಿಗೆ ಆಧಾರ್ ಕೇಂದ್ರಗಳು ಮುಚ್ಚುಗಡೆಯಿಂದಾಗಿ ನವೀಕರಣ ಮಾಡಲು ಪರದಾಡುವಂತಾಗಿದೆ ಮಂಡಳಿ ಕೂಡಲೇ ನೋಂದಾವಣಿಗಿರುವ ರೀತಿಯಲ್ಲೇ ಓಟಿಪಿ ರದ್ದು ಮಾಡಬೇಕೆಂದು ತಿಳಿಸಿದೆ. ಕೆಲವು ಕಡೆಗಳಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಕಾರ್ಮಿಕರ ಕೆಲಸವನ್ನು ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದು ಕೆಲವು ಮಧ್ಯವರ್ತಿಗಳು,ವ್ಯಕ್ತಿಗಳಿಂದ ಪಡೆದ ಕಾರ್ಡ್ ಗಳಿಗೆ ಹೆಚ್ಚು ಮುತುವರ್ಜಿ ವಹಿಸಿ ಶೀಘ್ರ ಮಾಡಿಕೊಡಲಾಗುತ್ತಿದೆ ಎಂದು ಮನವಿಯಲ್ಲಿ ಖಂಡಿಸಲಾಗಿದೆ. ವಲಸೆ ಕಾರ್ಮಿಕರ ಪರಿಸ್ಥಿತಿ ದಯನೀಯವಾಗಿದೆ.ಅವರನ್ನುಕೆಲಸಕ್ಕೆಕರೆದುಕೊಂಡ ಬಂದ ಮಧ್ಯವರ್ತಿಗಳು, ಕೆಲಸ ಮಾಡಿಸುತ್ತಿರುವ ಬಿಲ್ಡರ್ ಗಳು ಅವರ ವಾಸಿಸಲು ಯೋಗ್ಯ ಮನೆ,ಕುಡಿಯುವ ನೀರು,ಆರೋಗ್ಯ,ಮಹಿಳೆಯರಿಗೆ ಮಕ್ಕಳಿಗೆ ಯಾವುದೇ ಸುರಕ್ಷತೆ ನೀಡುತ್ತಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.ಈ ವೇಳೆಯಲ್ಲಿ ಸಂಘದ ಗೌರವ ಅಧ್ಯಕ್ಷರಾದ ದಯಾನಂದ ಕೋಟ್ಯಾನ್, ಅಧ್ಯಕ್ಷರಾದ ಶೇಖರ ಬಂಗೇರ,ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಕೋಶಾಧಿಕಾರಿ ಗಣೇಶ ನಾಯ್ಕ ಇದ್ದರು.

ಕುಂದಾಪುರದಲ್ಲಿ ಮನವಿ ಸಲ್ಲಿಕೆ

ರಾಜ್ಯವ್ಯಾಪಿ ಪ್ರತಿಭಟನೆಯ ಭಾಗವಾಗಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘವು ಕಟ್ಟಡ ಕಾರ್ಮಿಕರ ಬೇಡಿಕೆ ಶೀಘ್ರ ಈಡೇರಿಸಲು ಉಪ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು ಈ ವೇಳೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಮಹಾಬಲವಡೇರ ಹೋಬಳಿ, ಸಿಐಟಿಯು ಜಿಲ್ಲಾ ಸಮಿತಿ ಸದಸ್ಯರಾದ ನಾಗರತ್ನ ಇದ್ದರು.

ಬೈಂದೂರಿನಲ್ಲಿ ಕಟ್ಟಡ ಕಾರ್ಮಿಕರಿಂದ ಮನವಿ

ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘವು ಕಟ್ಟಡ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೈಂದೂರು ತಹಸೀಲ್ದಾರರಿಗೆ ಮನವಿ ನೀಡಿತು. ಈ ವೇಳೆಯಲ್ಲಿ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ, ಕೋಶಾಧಿಕಾರಿ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಮುಖಂಡರಾದ ನಾಗರತ್ನ ನಾಡ, ಮಾಧವ ಉಪ್ಪುಂದ, ಶ್ರೀಧರ ಬಿಜೂರು, ಮಂಜುಪಡುವರಿ, ಉದಯಗಾಣಿಗ ಮುಂತಾದವರು ತಹಸಿಲ್ದಾರರ ಮೂಲಕ ರಾಜ್ಯ ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಲಾಯಿತು.

JANASHAKTHI KANNADA VARA PATRIKE JUNE 1-7, 2020 Price: Rs. 10/- Date of Publication: 29 May 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕೊರೊನಾ ಲಾಕ್‌ಡೌನ್‌ನ ಪರಿಸ್ಥಿತಿಯಿಂದ ಸಂಕಷ್ಟದಲ್ಲಿರುವ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣ ಕಸುಬುದಾರರ ತಕ್ಷಣದ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಮನವಿ ಯನ್ನು 27 ಮೇ 2020 ರಂದು ಮನವಿ ಸಲ್ಲಿಸಲಾಯಿತು.

ಕೋಲಾರ

ಹಾಸನ







ಅಕ್ಷರದಾಸೋಹ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ





ದಲಿತ ಚಿಂತಕ ಡಾ॥ ಆನಂದ್ ತೇಲ್ತುಂಬೆಯವರ ಬಿಡುಗಡೆ ಮತ್ತು ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ಡಿಹೆಚ್‌ಎಸ್ ರಾಜ್ಯಾದಾದ್ಯಂತ ಪ್ರತಿಭಟನೆ

ಪ್ರಭುವೆ! ನೀನೊಮ್ಮೆ ಹೆಣ್ಣಾಗು

ಕವನ

*

ಘಮಲುಗಟ್ಟಿದ ಅಡುಗೆ ಕೋಣೆಗಳಿವೆ
ಜಿಡ್ಡುಗಟ್ಟಿದ ಬಾಣಂತಿ ಖೋಲಿಗಳಿವೆ
ಕೋಪಾಗ್ರಹಗಳಾವವೂ ನಮಗಿಲ್ಲ ಪ್ರಭುವೆ!
ಸೂರ್ಯ ಕಿರಣಗಳೇ ಕಾಣದ ನಮ್ಮ
ಕತ್ತಲು ಕೋಣೆ ಗವಿಗೊಮ್ಮೆ
ನೀನು ದಯಮಾಡಿಸಬಾರದೆ?

*

ಪೇಟೆಗೆ ಹೋದ ಮಗ
ಎನ್‌ಕೌಂಟರ್‌ನಲ್ಲಿ ನಲುಗಿದ
ಯುದ್ಧಕ್ಕೆ ಹೋದ ಪತಿಯ
ರಕ್ತಸಿಕ್ತ ಬಟ್ಟೆಗಳೇ ಹಿಂತಿರುಗಿದವು
ಅತ್ಯಾಚಾರಕ್ಕೊಳಗಾದ ಮಗಳು
ಅಪಮಾನ ಸಹಿಸದೆ ನೇಣಿಗೆ
ಶರಣಾದಳು ಪ್ರಭುವೆ?
ನನ್ನ ನೋವಿನ ಆಳ ಅರಿಯಲು
ನೀನೊಮ್ಮೆ ಹೆಣ್ಣಾಗಿ ಅವತರಿಸಬಾರದೆ?

*

ತುತ್ತುಗಳಿಸಲು ಹೊರಗೆ ಬಂದರೆ
ಪರದೆಯ ಹಿಂದೆ ದೂಡುವ
ಧರ್ಮದ ಕಾಣದ ಕೈಗಳು
ಬಂದೂಕು ಗುರಿಯಿಟ್ಟಿದೆ ನನ್ನತ್ತಲೇ
ಸಣ್ಣ ಶಬ್ದಕ್ಕೂ ಬೆಚ್ಚಿಬೀಳುವೆ
ಬಿಳಿಚಿಕೊಳ್ಳುವೆ–ಉಸಿರು ಗಕ್ಕನೆ
ನಿಂತು, ಕರಳು ಬಾಯಿಗೆ ಬರುವದು
ಎಲ್ಲ ಕಳಕೊಂಡಿರುವೆ, ಹೇಗೆ
ಬದುಕಲಿ ಹೇಳು ಪ್ರಭುವೆ?

*

ಯುದ್ಧ ಸಾರಿದ್ದಾನೆ ಗಡಿಯಲಿ
ಲೋಕದ ಠೇಕೇದಾರನು
ಹೇಗೆ ವಿವರಿಸಲಿ ನಿನಗೆ
ತಲ್ಲಣದ ಕ್ಷಣಗಳನು
ನನ್ನ ನೋವಿನ ಪರಿಯರಿಯಲು
ಶಬ್ದ ಮೀರಿದ ನೋವ ತಿಳಿಯಲು
ಓ ಪ್ರಭುವೆ!
ನೀನೊಮ್ಮೆ ಹೆಣ್ಣಾಗಬಾರದೆ?

–ಕೆ ಶರೀಫಾ



ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 15 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ವಲಸೆ ಕಾರ್ಮಿಕರ ಬವಣೆಗಳು : ಕಣ್ಣಿಲ್ಲದ ಸರ್ಕಾರಗಳು (ಮೇ.29)
* ಎನ್.ಎಲ್. ಉಪಾಧ್ಯಾಯರನ್ನು ನೆನೆಯೋಣ! (ಮೇ.28)
* ಕೊರೊನಾ ಆಕಸ್ಮಿಕವೇ ಅಥವಾ ಬಂಡವಾಳಶಾಹಿಯ ಕೂಸೇ? (ಮೇ.26)
* ಕೊರೊನಾ : ಆರೋಗ್ಯಕ್ಕೆ ಆದ್ಯತೆ ನೀಡಲೇ ಇಲ್ಲ! (ಮೇ.26)
* ಕಾರ್ಮಿಕರು ಮಾಲೀಕರ ಯಂತ್ರಗಳಲ್ಲ : ಎಲ್. ಹನುಮಂತಯ್ಯ (ಮೇ.24)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'**ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ **'ಬೆಲ್ ಐ ಕಾನ್ ಬಟನ್'** ಒತ್ತಿ. ನಿರಂತರ ನೋಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**